25 July 2026 Saturday
SINCE 1957
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
# ವರ್ತಮಾನ
ಸಂಪಾದಕ: ಕೆ.ಎನ್.ರವಿ
ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಸಮಯ ಮತ್ತು ಪ್ರಾಣ ಇವೆರಡು ಒಂದು ಸಲ ಹಾರಿ ಹೋದರೆ, ಮತ್ತೇ ಅದೇ ಗೂಡು ಸೇರುವುದಿಲ್ಲ!

-ಸ್ನೇಹಾ ಆನಂದ್

info.varthaman@gmail.com


ನೀಟ್ ಹಗರಣ: ಕಾಂಗ್ರೆಸ್‌ನಿಂದ ಚಿಲ್ಲರೆ ರಾಜಕಾರಣ ಪುಟ ಸಂ. 2

ಎಸ್‌ಆರ್ ಡಿಜಿಟಲೀಕರಣ ಪೂರ್ಣಗೊಳಿಸಿ: ಜಿಲ್ಲಾಧಿಕಾರಿ ಪುಟ ಸಂ. 3

ಶಿಕ್ಷಣ ಸಚಿವರ ರಾಜೀನಾಮೆಗೆ ಆಗ್ರಹಿಸಿ ಪ್ರತಿಭಟನೆ ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್
VARTHAMAN Volume: 69 Issue: 235 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

# ಹಾರಂಗಿ ಜಲಾಶಯ ಭರ್ತಿ

## ಕಾವೇರಿ ನದಿಗೆ ನೀರು: ಮುನ್ನೆಚ್ಚರಿಕೆ ಸೂಚನೆ

**ಮಡಿಕೇರಿ:** ಕೊಡಗಿನ ಹಾರಂಗಿ ಜಲಾನಯನ ಪ್ರದೇಶದಲ್ಲಿ ಭಾರೀ ಮಳೆ ಆಗುತ್ತಿರುವ ಹಿನ್ನೆಲೆಯಲ್ಲಿ ಜಲಾಶಯಕ್ಕೆ ಒಳಹರಿವಿನ ಪ್ರಮಾಣ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಹೀಗಾಗಿ ಜಲಾಶಯ ಶೀಘ್ರದಲ್ಲೇ ಗರಿಷ್ಠ ಮಟ್ಟ ತಲುಪುವ ಸಾಧ್ಯತೆ ಇದೆ.

ಜಲಾಶಯ ಸಂಪೂರ್ಣ ಭರ್ತಿ ಆಗುವು ಸಮೀಪದಲ್ಲಿದೆ. ಶನಿವಾರ (ಜು.25) ಮಧ್ಯಾಹ್ನ ಅಥವಾ ಸಂಜೆ ವೇಳೆಗೆ ಹಾರಂಗಿ ಡ್ಯಾಂನಿಂದ ನದಿಗೆ ನೀರು ಹರಿಸುವ ಸಾಧ್ಯತೆಯಿದೆ. ಆದ್ದರಿಂದ ಹಾರಂಗಿ ಹಾಗೂ ಕಾವೇರಿ ನದಿ ಪಾತ್ರದ ಜನರಿಗೆ ಕಾವೇರಿ ನೀರಾವರಿ ನಿಗಮ ಮುನ್ನೆಚ್ಚರಿಕೆ ವಹಿಸುವಂತೆ ಪ್ರಕಟಣೆ ಹೊರಡಿಸಿದೆ.

ಕೊಡಗು ಜಿಲ್ಲೆಯ ಕುಶಾಲನಗರ ತಾಲೂಕಿನ ಹಾರಂಗಿ ಜಲಾಶಯದ ಜಲಾನಯನ ಪ್ರದೇಶಗಳಲ್ಲಿ ಕಳೆದ ಕೆಲವು ದಿನಗಳಿಂದ ಭಾರೀ ಮಳೆಯಾಗುತ್ತಿದೆ. ಮಳೆಯ ತೀವ್ರತೆ ಹೆಚ್ಚಿರುವ ಪರಿಣಾಮ ಜಲಾಶಯಕ್ಕೆ



ಹರಿದು ಬರುತ್ತಿರುವ ನೀರಿನ ಪ್ರಮಾಣವೂ ಏರಿಕೆಯಾಗುತ್ತಿದೆ.

ಜಲಾಶಯವು ಶೀಘ್ರದಲ್ಲೇ ತನ್ನ ಗರಿಷ್ಠ ಮಟ್ಟ ತಲುಪುವ ನಿರೀಕ್ಷೆ ಇದೆ. ಈ ಹಿನ್ನೆಲೆಯಲ್ಲಿ ಜಲಾಶಯದ ಸುರಕ್ಷತೆ ಗಮನದಲ್ಲಿಟ್ಟುಕೊಂಡು ಶನಿವಾರ ಹಾರಂಗಿ ಜಲಾಶಯದಿಂದ ನೀರನ್ನ ಹೊರಬಿಡಲು ಅಧಿಕಾರಿಗಳು ಸಿದ್ಧತೆ ನಡೆಸಿದ್ದಾರೆ. ಆರಂಭಿಕ ಹಂತದಲ್ಲಿ ಸುಮಾರು 3,000ರಿಂದ 5,000 ಕ್ಯೂಸೆಕ್‌ಗಿಂತ ಹೆಚ್ಚಿನ ಪ್ರಮಾಣದ ನೀರನ್ನು ಹಾರಂಗಿ ನದಿಯ

ಪುಟ 2ಕ್ಕೆ

## ಮೋದಿ ಮಧ್ಯರಾತ್ರಿ ಸಂದೇಶ!

**ನವದೆಹಲಿ:** ಪ್ರಶ್ನೆಪತ್ರಿಕೆ ಸೋರಿಕೆ ತಡೆಯಲು ಕಠಿಣ ಕಾನೂನು ಜಾರಿ ಮತ್ತು ಶಿಕ್ಷೆ ವಿಧಿಸುವ ಹೊಸ ಮಸೂದೆ ಮಂಡಿಸಲು ಸರ್ಕಾರ ಸಿದ್ಧತೆ ನಡೆಸಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಘೋಷಿಸಿದರು.

ಈ ಕುರಿತು ಗುರುವಾರ ಮಧ್ಯರಾತ್ರಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ವಿಡಿಯೋ ಸಂದೇಶ ಬಿಡುಗಡೆ ಮಾಡಿರುವ ಪ್ರಧಾನಿ ಮೋದಿ ಅವರು, ಈ ಹೊಸ ನಿಯಮಗಳು ಮತ್ತು ಕಠಿಣ ಕ್ರಮಗಳ ಕುರಿತು ಶುಕ್ರವಾರ ನಡೆಯಲಿರುವ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಸುದೀರ್ಘ ಚರ್ಚೆ ನಡೆಯಲಿದೆ ಎಂದು ತಿಳಿಸಿದ್ದಾರೆ.

ಸೋಮವಾರ ಸಂಸತ್ತಿನ

ಪುಟ 2ಕ್ಕೆ




# ಪ್ರಧಾನ್ ರಾಜೀನಾಮೆವರೆಗೂ ಮಾತುಕತೆ ನಡೆಸಲ್ಲ: ರಾಗಾ

**ನವದೆಹಲಿ:** ನೀಟ್ ಪರೀಕ್ಷೆ ಪ್ರಶ್ನೆ ಪತ್ರಿಕೆ ಸೋರಿಕೆಯ ನೈತಿಕ ಹೊಣೆ ಹೊತ್ತು ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡುವವರೆಗೆ ಸರ್ಕಾರದೊಂದಿಗೆ ಯಾವುದೇ ಚರ್ಚೆ ನಡೆಸುವುದಿಲ್ಲ ಎಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಶುಕ್ರವಾರ ತಿಳಿಸಿದರು.

ದೆಹಲಿಯಲ್ಲಿ ಪ್ರತಿಭಟನೆ ನಡೆಸುತ್ತಿದ್ದ ವಿದ್ಯಾರ್ಥಿಗಳ ಮೇಲೆ ನಡೆದ ಪೊಲೀಸರ ದೌರ್ಜನ್ಯಕ್ಕೆ ಪ್ರಧಾನಿ ನರೇಂದ್ರ ಮೋದಿ ಕ್ಷಮೆಯಾಚಿಸಬೇಕು ಎಂದು ಆಗ್ರಹಿಸಿದರು.

ಸಂಸತ್ ಭವನದ ಸಂಕೀರ್ಣದಲ್ಲಿ ಮಾತನಾಡಿದ ಅವರು, ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರು ಕಾಂಗ್ರೆಸ್ ಸಂಸದರು ಚರ್ಚೆ ಪ್ರಾರಂಭಿಸಲಿ ಎಂದು ಲೋಕಸಭೆಯಲ್ಲಿ ಹೇಳಿದರು. ಯಾರದ್ದಾದರೂ ಹೆಸರು ಪ್ರಸ್ತಾಪವಾದಾಗ ಅವರಿಗೆ ಉತ್ತರಿಸಲು ಅವಕಾಶ ನೀಡುವುದು ವಾಡಿಕೆ. ಆದರೆ, ನಾನು ರಿಜಿಜು ಅವರಿಗೆ ಉತ್ತರಿಸಲು ಎದ್ದು ನಿಂತಾಗ ನನಗೆ ಮಾತನಾಡಲು ಬಿಡಲಿಲ್ಲ ಮತ್ತು ನನ್ನ ಮೈಕ್ ಆಫ್ ಮಾಡಲಾಯಿತು ರಾಹುಲ್ ಗಾಂಧಿ ದೂರಿದರು.




ನಾನು ವಿರೋಧ ಪಕ್ಷದ ನಿಲುವನ್ನು ಸ್ಪಷ್ಟವಾಗಿ ಮಂಡಿಸಲು ಬಯಸಿದ್ದೆ. ಭ್ರಷ್ಟ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಬೇಕು, ವಿದ್ಯಾರ್ಥಿಗಳ ಮೇಲೆ ಹಲ್ಲೆ ನಡೆಸಿದವರ ವಿರುದ್ಧ ಕ್ರಮ ಕೈಗೊಳ್ಳಬೇಕು ಮತ್ತು ಪ್ರಧಾನಿ ವಿದ್ಯಾರ್ಥಿಗಳ ಕ್ಷಮೆ ಕೇಳಬೇಕು ಎಂಬುದು ವಿದ್ಯಾರ್ಥಿಗಳ ಪ್ರಮುಖ ಮೂರು

ಪುಟ 2ಕ್ಕೆ

## ಗ್ರಾಪಂ ವ್ಯಾಪ್ತಿ ಮಳಿಗೆಗಳಿಗೆ ತೆರಿಗೆ

### ಸಮಿತಿ ರಚಿಸಲು ಸಚಿವ ಈಶ್ವರ್ ಖಂಡ್ರೆ ಸೂಚನೆ

**ಬೆಂಗಳೂರು:** ಗ್ರಾಮ ಪಂಚಾಯತಿ ವ್ಯಾಪ್ತಿಯ ಹೆದ್ದಾರಿ, ರಾಜ್ಯ ಮುಖ್ಯರಸ್ತೆ ಪಕ್ಕದಲ್ಲಿ ವಾಣಿಜ್ಯ ಚಟುವಟಿಕೆ ನಡೆಸುವ ಗ್ರಾನೈಟ್, ಮಾರ್ಬಲ್ ಮಾರಾಟದ ಮಳಿಗೆಗಳು, ಢಾಬಾಗಳು,



ಹೋಟೆಲ್ ಇತ್ಯಾದಿಗಳಿಗೆ ನಿಯಮಾನುಸಾರ ತೆರಿಗೆ ವಿಧಿಸಲು ಸಮಿತಿ ರಚಿಸುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ್ ಖಂಡ್ರೆ ಸೂಚನೆ ನೀಡಿದ್ದಾರೆ. ಇಲಾಖೆ ಕಾರ್ಯದರ್ಶಿಯವರಿಗೆ ಲಿಖಿತ

ಪುಟ 2ಕ್ಕೆ

## ಚಾ.ಬೆಟ್ಟದ ರೂಪಾ ಏಕಾಏಕಿ ಎತ್ತಂಗಡಿ

**ಮೈಸೂರು:** ಸಾಂಸ್ಕೃತಿಕ ನಗರಿ ಮೈಸೂರಿನ ಜನತೆ ಆಷಾಢದ ಸಂಭ್ರಮದಲ್ಲಿರುವಾಗಲೇ ಅದರ ಉಸ್ತುವಾರಿ ಹೊತ್ತಿರುವ ಶ್ರೀ ಚಾಮುಂಡೇಶ್ವರಿ ದೇವಾಲಯ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ರೂಪ ಅವರ ಜಾಗಕ್ಕೆ ಬೇರೊಬ್ಬರನ್ನು ನಿಯುಕ್ತಿ ಗೊಳಿಸಿ ಸರ್ಕಾರ ಆದೇಶ ಹೊರಡಿಸಿದೆ.



ಮೈಸೂರು ಮಹಾನಗರ ಪಾಲಿಕೆ ಉಪ ಆಯುಕ್ತರಾಗಿದ್ದ ರೂಪ ಅವರನ್ನು 2024ರ ಜುಲೈ 12ರಲ್ಲಿ ನೂತನ ಪ್ರಾಧಿಕಾರದ ಕಾರ್ಯದರ್ಶಿಯಾಗಿ ನೇಮಿಸಲಾಗಿತ್ತು. ರೂಪ ಅವರು ಅಧಿಕಾರ ವಹಿಸಿಕೊಂಡ ಬಳಿಕ ಪ್ರಾಧಿಕಾರದ ಸಿಬ್ಬಂದಿಗಳಿಗೆ ವಾಕಿಟಾಕಿ ನೀಡಿ ಭಕ್ತರೊಂದಿಗೆ ಸೌಜನ್ಯಯುತವಾಗಿ ನಡೆದುಕೊಳ್ಳುವಂತೆ ಮಾಡಿದ್ದರು.

ಪುಟ 2ಕ್ಕೆ

# ಇಂದು ಮೊದಲ ವಿಕೆಟ್ ಪತನ?

## ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಭವಿಷ್ಯ ನಿರ್ಧಾರ

**ನವದೆಹಲಿ:** ಕೇಂದ್ರ ಸರ್ಕಾರದ ಪರವಾಗಿ ಶನಿವಾರ ಮಧ್ಯಾಹ್ನ ಮತ್ತೆ ಕಾಕ್ರೋಚ್ ಜನತಾ ಪಾರ್ಟಿ ನಿಯೋಗ ಭೇಟಿ ಮಾಡಿ ಸರ್ಕಾರದ ನಿರ್ಧಾರವನ್ನು ತಿಳಿಸುತ್ತೇವೆ ಎಂದು ಕೇಂದ್ರ ಸಚಿವ ಜೆಪಿ ನಡ್ಡಾ ತಿಳಿಸಿದ್ದಾರೆ



ಸಚಿವ ಜೀತೇಂದ್ರ ಸಿಂಗ್ ಅವರೊಂದಿಗೆ ದೆಹಲಿಯ ಕಾನ್‌ಸ್ಟಿಟ್ಯೂಷನ್ ಕ್ಲಬ್‌ನಲ್ಲಿ ಶುಕ್ರವಾರ ಸಿಜೆಪಿಯ ಮುಖ್ಯ ವಕ್ತಾರ ಸೌರವ್ ದಾಸ್ ಮತ್ತು ರಾಷ್ಟ್ರೀಯ ವಕ್ತಾರ ಅಶುತೋಷ್ ರಂಕಾ ಅವರೊಂದಿಗೆ ಎರಡನೇ ಸುತ್ತಿನ ಸಭೆ ನಡೆಸಿದ ಬಳಿಕ ಅವರು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದರು. ಸುಮಾರು 2 ಗಂಟೆಗಳ ಕಾಲ ಸಭೆ ನಡೆಯಿತು. 3 ಪ್ರಮುಖ ಬೇಡಿಕೆಗಳು ಮತ್ತು ಪರೀಕ್ಷೆಗೆ ಸಂಬಂಧಿಸಿದಂತೆ 5 ಸುಧಾರಣಾ ಸಲಹೆಗಳನ್ನು ನೀಡಿದ್ದಾರೆ. ನಾಳೆ ಮಧ್ಯಾಹ್ನ ಅವರನ್ನು ಮತ್ತೆ ಭೇಟಿ ಮಾಡಿ ಸರ್ಕಾರದ ನಿರ್ಧಾರವನ್ನು ತಿಳಿಸುತ್ತೇವೆ ಎಂದು ತಿಳಿಸಿದರು. ನಾವು ಅವರ ಕಳವಳಗಳನ್ನು ಆಲಿಸಿದೆವು ಮತ್ತು ಸಮಸ್ಯೆಗಳನ್ನು ವಿವಿಧ ದೃಷ್ಟಿಕೋನಗಳಿಂದ ಚರ್ಚಿಸಲಾಯಿತು. ನಾವು ಅವರ ಬೇಡಿಕೆಗಳನ್ನು ಆಲಿಸಿದ್ದೇವೆ ಮತ್ತು ನಾವು ಅವರಿಗೆ ಉತ್ತರಿಸುತ್ತೇವೆ ಎಂದು ಹೇಳಿದರು. ಉನ್ನತ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ ರಾಜೀನಾಮೆ ನೀಡಬೇಕು ಎಂಬುದು ಸಿಜೆಪಿ ಪ್ರಮುಖ ಬೇಡಿಕೆ. ಈ ಹಿನ್ನೆಲೆಯಲ್ಲಿ ಶನಿವಾರ ಸಚಿವರ ಭವಿಷ್ಯ ನಿರ್ಧಾರವಾಗಲಿದೆ.



### ಸಚಿವರ ವಜಾಕ್ಕೆ ಒಂದು ದಿನ ಕಾಲಾವಕಾಶ: ಸಿಜೆಪಿ

**ನವದೆಹಲಿ:** ಮೂರು ಬೇಡಿಕೆಯ ಪೈಕಿ ಕೇಂದ್ರ ಸರ್ಕಾರ ನಮ್ಮ ಎರಡು ಬೇಡಿಕೆಯನ್ನು ಒಪ್ಪಿಕೊಂಡಿದೆ ಎಂದು ಕಾಕ್ರೋಚ್ ಜನತಾ ಪಕ್ಷ (ಸಿಜೆಪಿ) ತಿಳಿಸಿದೆ.

ಸಚಿವರಾದ ಜೆ.ಪಿ. ನಡ್ಡಾ ಮತ್ತು ಜಿತೇಂದ್ರ ಸಿಂಗ್ ಅವರು ಸಿಜೆಪಿಯ ಮುಖ್ಯ ವಕ್ತಾರ ಸೌರವ್ ದಾಸ್ ಮತ್ತು ರಾಷ್ಟ್ರೀಯ ವಕ್ತಾರ ಅಶುತೋಷ್ ರಂಕಾ ಅವರೊಂದಿಗೆ ಶುಕ್ರವಾರ ಎರಡನೇ ಸುತ್ತಿನ ಸಭೆ ನಡೆಸಿದರು.

ಸಭೆಯ ಬಳಿಕ ಮಾತನಾಡಿದ ವಕ್ತಾರರು, ಧರ್ಮೇಂದ್ರ ಪ್ರಧಾನ್ ರಾಜೀನಾಮೆ ಬಿಟ್ಟು ಉಳಿದ ಎರಡು ಬೇಡಿಕೆ ಈಡೇರಿಸುವ ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸಿದೆ. ನಾಳೆ ಮತ್ತೊಂದು ಸುತ್ತಿನ ಸಭೆ ನಡೆಯಲಿದೆ ಎಂದು ಹೇಳಿದರು.

ಅಶುತೋಷ್ ರಂಕಾ ಪ್ರತಿಕ್ರಿಯಿಸಿ, ಧರ್ಮೇಂದ್ರ ಪ್ರಧಾನ್ ಅವರ ರಾಜೀನಾಮೆಗೆ ನಮ್ಮ ಬೇಡಿಕೆಯ ಮೇರೆಗೆ ಸರ್ಕಾರ ನಾಳೆ ಮಧ್ಯಾಹ್ನದವರೆಗೆ ಸಮಯ ಕೇಳಿದೆ. ಸರ್ಕಾರ ಶೀಘ್ರದಲ್ಲೇ ಅವರನ್ನು ವಜಾಗೊಳಿಸುತ್ತದೆ ಎಂದು ನಾವು ಭಾವಿಸುತ್ತೇವೆ. ಆತ್ಮಹತ್ಯೆಯಿಂದ ಸಾವನ್ನಪ್ಪಿದ ನೀಟ್ ಆಕಾಂಕ್ಷಿಗಳ ಕುಟುಂಬಗಳಿಗೆ ಪರಿಹಾರ ಮತ್ತು ಎಫ್‌ಐಆರ್‌ಗಳನ್ನು ಹಿಂಪಡೆಯುವುದು, ವಿದ್ಯಾರ್ಥಿಗಳ ಮೇಲಿನ ಕಾನೂನು ಪ್ರಕರಣಗಳು ಎಂಬ ಎರಡು ಬೇಡಿಕೆಗಳಿಗೆ ಸರ್ಕಾರ ತಾತ್ವಿಕವಾಗಿ ಒಪ್ಪಿಗೆ ನೀಡಿದೆ ಎಂದು ಹೇಳಿದರು.

ಪುಟ 2ಕ್ಕೆ

## ಪ್ರಶ್ನೆ ಪತ್ರಿಕೆ ಸೋರಿಕೆಗೆ 10 ವರ್ಷ ಜೈಲು ಶಿಕ್ಷೆ

### 1 ಕೋಟಿ ದಂಡ ವಿಧಿಸಲು ಕೇಂದ್ರ ಸಂಪುಟ ಅಸ್ತು

**ನವದೆಹಲಿ:** ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ವಿಚಾರದಲ್ಲಿ ದೇಶಾದ್ಯಂತ ತೀವ್ರ ಆಕ್ರೋಶ ವ್ಯಕ್ತವಾಗುತ್ತಿರುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಇದೀಗ ಎಚ್ಚೆತ್ತುಕೊಂಡಿದೆ. ಪ್ರಶ್ನೆಪತ್ರಿಕೆ ಸೋರಿಕೆ ತಡೆಗೆ ಕಠಿಣ ಮಸೂದೆ ಜಾರಿಗೆ ಕೇಂದ್ರ ಸಚಿವ ಸಂಪುಟ ಶುಕ್ರವಾರ ಅನುಮೋದನೆ ನೀಡಿದೆ.

ಪ್ರಶ್ನೆ ಪತ್ರಿಕೆ ಸೋರಿಕೆ ಮಾಡುವರಿಗೆ 10 ವರ್ಷ ಜೈಲು ಶಿಕ್ಷೆ ಹಾಗೂ 1 ಕೋಟಿ ರೂ. ದಂಡ ವಿಧಿಸುವ ಮಸೂದೆಯನ್ನು ಈಗ ನಡೆಯುತ್ತಿರುವ ಅಧಿವೇಶನದಲ್ಲಿ ಜಾರಿಗೆ ತರಲು ಸಂಪುಟದಲ್ಲಿ ಅನುಮೋದನೆ ನೀಡಲಾಯಿತು.

2024ರಲ್ಲೂ ಇದೇ ರೀತಿಯ ಕಾನೂನನ್ನು ಜಾರಿಗೆ ತಂದಿತ್ತು. ಪಬ್ಲಿಕ್ ಪರೀಕ್ಷೆಗಳ ಅಕ್ರಮಗಳ ತಡೆ ಕಾಯ್ದೆ 2024ಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅಂಕಿತ ಹಾಕಿದ ಸುಮಾರು 4 ತಿಂಗಳ ನಂತರ ಅದೇ ವರ್ಷ ಜೂನ್ ತಿಂಗಳಲ್ಲಿ ಬಿಲ್ ಅಧಿಸೂಚನೆ ಹೊರಡಿಸಲಾಗಿತ್ತು.

ಈ ಕಾನೂನು ಜಾರಿಗೆ ಬರುವ ಮುನ್ನಾ ಕೇಂದ್ರ ಸರ್ಕಾರ ಮತ್ತು ಅದರ ಸಂಸ್ಥೆಗಳು ನಡೆಸುವ ಪರೀಕ್ಷೆಗಳಲ್ಲಿ ಅಕ್ರಮ ಮಾರ್ಗ ಅನುಸರಿಸುವ ಅಥವಾ ಅಪರಾಧ ವೆಸಗುವ ವಿವಿಧ ಸಂಸ್ಥೆಗಳ ವಿರುದ್ಧ ಕ್ರಮ ಕೈಗೊಳ್ಳಲು ಯಾವುದೇ ನಿರ್ದಿಷ್ಟ ಹಾಗೂ ಸಮಗ್ರ ಕಾನೂನು ಇರಲಿಲ್ಲ.

ಈ ಕಾಯ್ದೆಯು

ಪುಟ 2ಕ್ಕೆ

## ನೀಟ್ ಪರೀಕ್ಷೆ ಸುಧಾರಣೆ: ಸಮಗ್ರ ಮಾಹಿತಿಗೆ ಕೇಂದ್ರಕ್ಕೆ 'ಸುಪ್ರೀಂ' ಸೂಚನೆ

**ನವದೆಹಲಿ:** ನೀಟ್–ಯುಜಿ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪರೀಕ್ಷಾ ವ್ಯವಸ್ಥೆಯಲ್ಲಿ ಜಾರಿಗೆ ತರಲಾಗುತ್ತಿರುವ ಸುಧಾರಣೆಗಳ ಕುರಿತು ಸಮಗ್ರ ಅಫಿಡವಿಟ್ ಸಲ್ಲಿಸುವಂತೆ ಕೇಂದ್ರ ಸರ್ಕಾರ ಮತ್ತು ರಾಷ್ಟ್ರೀಯ ಪರೀಕ್ಷಾ ಸಂಸ್ಥೆಗೆ ಸುಪ್ರೀಂ ಕೋರ್ಟ್ ಶುಕ್ರವಾರ ನಿರ್ದೇಶನ ನೀಡಿದೆ.

ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಮತ್ತು ಅಲೋಕ್ ಅರಾಧೆ ಅವರನ್ನೊಳಗೊಂಡ ಪೀಠವು, ಪ್ರಶ್ನೆಪತ್ರಿಕೆಗಳ ಸುರಕ್ಷಿತ ಸಾಗಣೆಗಾಗಿ ಭಾರತೀಯ ವಾಯುಪಡೆಯನ್ನು ಬಳಸಿದ್ದು ಕೇವಲ ತಾತ್ಕಾಲಿಕ ಕ್ರಮವಷ್ಟೇ. ಪರೀಕ್ಷಾ



ವ್ಯವಸ್ಥೆಯಲ್ಲಿ ಶಾಶ್ವತ ಸುಧಾರಣೆಗಳು ಜಾರಿಯಾಗಬೇಕು ಎಂದು ಸ್ಪಷ್ಟಪಡಿಸಿತು. ಅಲ್ಲದೇ ಈ ಸುಧಾರಣಾ ಪ್ರಕ್ರಿಯೆಗಳನ್ನು ವರ್ಷಪೂರ್ತಿ ನಿಕಟವಾಗಿ ಮೇಲ್ವಿಚಾರಣೆ ಮಾಡುವುದಾಗಿ ಹೇಳಿದೆ.

ಉನ್ನತ ಮಟ್ಟದ ಸಮಿತಿಯು ಮೂಲ ಸೌಕರ್ಯ, ಭದ್ರತೆ, ಸಂಶೋಧನೆ ಮತ್ತು ಅಭಿವೃದ್ಧಿ, ಪಾರದರ್ಶಕತೆ,

ಪುಟ 2ಕ್ಕೆ

## ಕೃಷ್ಣಗೆ ಬೆಟ್ಟದ ಸಾರಥ್ಯ

**ಮೈಸೂರು:** ನಂಜನಗೂಡು ಶ್ರೀ ನಂಜುಂಡೇಶ್ವರ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿಯಾಗಿರುವ ಕೃಷ್ಣ ಅವರನ್ನು ಶ್ರೀ ಚಾಮುಂಡೇಶ್ವರಿ ದೇವಾಲಯದ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಯಾಗಿ ನೇಮಿಸಿ ಆದೇಶ ಹೊರಡಿಸಿದೆ.



ಜಿಲ್ಲಾಧಿಕಾರಿ ಕಚೇರಿಯಲ್ಲಿ ತಹಸೀಲ್ದಾರ್ ಆಗಿ ಬಳಿಕ ಶ್ರೀರಂಗಪಟ್ಟಣ ನಿಮಿಷಾಂಭ ದೇವಾಲಯದ ಕಾರ್ಯನಿರ್ವಾಹಕ ಅಧಿ ಕಾರಿಯಾಗಿದ್ದ ನಂತರ ಚಾಮುಂಡಿ ಬೆಟ್ಟದ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಆಗಿದ್ದರು.


ಪುಟ 2ಕ್ಕೆ

## ವಾಂಗ್ಚುಕ್ ಉಪವಾಸ ಅಂತ್ಯ

**ನವದೆಹಲಿ:** ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಖಂಡಿಸಿ ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆಗೆ ಆಗ್ರಹಿಸಿ 26 ದಿನಗಳಿಂದ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದ ಹೋರಾಟಗಾರ ಸೋನಂ ವಾಂಗ್ಚುಕ್ ಗುರುವಾರ ತಡರಾತ್ರಿ ಉಪವಾಸ ಅಂತ್ಯಗೊಳಿಸಿದರು.

ವಾಂಗ್ಚುಕ್ ಚಿಕಿತ್ಸೆ ಪಡೆಯುತ್ತಿರುವ ಗುರುಗ್ರಾಮದ ಮೇದಾಂತ ಮೆಡಿಸಿಟಿ ಆಸ್ಪತ್ರೆಗೆ ಭೇಟಿ ನೀಡಿದ್ದ ಕೇಂದ್ರ ಸಚಿವ

ಪುಟ 2ಕ್ಕೆ



## ಮತ್ತೆ ಮೆಟ್ರೋ ಪ್ರಯಾಣಿಕರಿಗೆ ದರ ಏರಿಕೆ ಶಾಕ್ ನೀಡಲು ಸಿದ್ಧ

**ಬೆಂಗಳೂರು:** ನಮ್ಮ ಮೆಟ್ರೋ ಪ್ರಯಾಣಿಕರಿಗೆ ಬಿಎಂಆರ್‌ಸಿಎಲ್ ಮತ್ತೊಮ್ಮೆ ಶಾಕ್ ನೀಡಿದೆ. ಮೂರು ವರ್ಷಗಳಿಗೊಮ್ಮೆ ಶೇ.12ರಷ್ಟು ದರ ಏರಿಕೆ ಮಾಡುವ ಬಗ್ಗೆ ಪ್ರಸ್ತಾವನೆ ಸಲ್ಲಿಸಿದೆ.

ಪ್ರತಿ ವರ್ಷ ಶೇ.5ರಷ್ಟು ಮೆಟ್ರೋ ಟಿಕೆಟ್ ದರವನ್ನ ಏರಿಕೆ ಮಾಡಲು ದರ ಪರಿಷ್ಕರಣಾ ಸಮಿತಿ ಶಿಫಾರಸು ಮಾಡಿದೆ. ಆದರೆ ಇದೀಗ ಬಿಎಂಆರ್‌ಸಿಎಲ್ ಹೊಸ ಮಾದರಿಯಲ್ಲಿ ದರ ಏರಿಕೆ ಮಾಡುವ ಪ್ರಸ್ತಾಪವನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಕೆ ಮಾಡಿದೆ.

ನಮ್ಮ ಮೆಟ್ರೋ ಸರ್ಜಾಪುರದಿಂದ ಹೆಬ್ಬಾಳ



ಮಾರ್ಗದ ಡಿಪಿಆರ್ ಸಲ್ಲಿಕೆ ಮಾಡಿದೆ. ಇದರ ಜೊತೆಗೆ ಹೊಸ ಮಾದರಿಯಲ್ಲಿ ಒಂದು ವರ್ಷದ ಬದಲು ಮೂರು ವರ್ಷಕ್ಕೊಮ್ಮೆ ದರ ಏರಿಕೆ ಮಾಡುವ

ಪುಟ 2ಕ್ಕೆ

## ಪ್ರಜ್ವಲ್‌ಗೆ ಪೆರೋಲ್ ನಿರಾಕರಣೆ

**ಬೆಂಗಳೂರು:** ಅತ್ಯಾಚಾರ ಅಪರಾಧದಲ್ಲಿ ಜೈಲು ಸೇರಿರುವು ಮಾಜಿ ಸಂಸದ ಪ್ರಜ್ವಲ್ ರೇವಣ್ಣಗೆ ಪೆರೋಲ್ ನೀಡಲು ಸಾಧ್ಯವಿಲ್ಲ ಎಂದು ಕಾರಾಗೃಹ ಇಲಾಖೆ ತಿಳಿಸಿದೆ.



ಅತ್ಯಾಚಾರ ಪ್ರಕರಣದಲ್ಲಿ ಜೈಲು ಸೇರಿರುವವರಿಗೆ ಕಾರಾಗೃಹ ಇಲಾಖೆ ಪೆರೋಲ್ ನೀಡಲು ಸಾಧ್ಯವಿಲ್ಲ. ನಮ್ಮ ಅಧಿಕಾರ ವ್ಯಾಪ್ತಿಯೂ ಇಲ್ಲ ಎಂದು ಕಾರಾಗೃಹ ಇಲಾಖೆ ಸ್ಪಷ್ಟಪಡಿಸಿದೆ.

ಈಗಾಗಲೇ ಕುಟುಂಬಸ್ಥರು ತಿಥಿಯ ದಿನ ಪೂಜೆ ಸಲ್ಲಿಸೋದಕ್ಕೆ ಕರೆತರುವ ಪ್ರಯತ್ನ ಮಾಡಿದ್ದರು. ಕಾರಾಗೃಹ ಇಲಾಖೆ ಅಧಿಕಾರ ವ್ಯಾಪ್ತಿ ಇಲ್ಲ ಎಂದು ನಿರಾಕರಿಸಿದ ಹಿನ್ನೆಲೆಯಲ್ಲಿ ನ್ಯಾಯಾಲಯಕ್ಕೆ ಅರ್ಜಿ

ಪುಟ 2ಕ್ಕೆ

# 2ನೇ ಆಷಾಢ ಶುಕ್ರವಾರಕ್ಕೆ ಹರಿದುಬಂದ ಭಕ್ತಸಾಗರ

## ಚಾಮುಂಡೇಶ್ವರಿಗೆ ಲಕ್ಷ್ಮೀ ಅಲಂಕಾರ | ವಿಐಪಿಗಳಿಂದ ಭಕ್ತರಿಗೆ ಸಮಸ್ಯೆ

**ಮೈಸೂರು:** ಆಷಾಢ ಮಾಸದ ಎರಡನೇ ಶುಕ್ರವಾರವಾದ ಅಂಗವಾಗಿ ತಾಯಿ ಚಾಮುಂಡೇಶ್ವರಿ ಲಕ್ಷ್ಮೀ ಅಲಂಕಾರದಲ್ಲಿ ಕಂಗೊಳಿಸಿದಳು.

ಮೈಸೂರಿನ ಚಾಮುಂಡಿ ಬೆಟ್ಟಕ್ಕೆ ಆಷಾಢ ಶುಕ್ರವಾರ ಹಿನ್ನೆಲೆ ಅಪಾರ ಸಂಖ್ಯೆಯಲ್ಲಿ ಭಕ್ತರು ಹರಿದುಬಂದಿದ್ದರು. ಇಡೀ ದೇವಸ್ಥಾನವನ್ನು ವಿವಿಧ ಹೂಗಳ ಮಾಲೆಗಳಿಂದ ಅಲಂಕರಿಸಲಾಗಿದೆ. ಬೆಳಗ್ಗೆಯಿಂದಲೇ ಭಕ್ತರು ಸರತಿ ಸಾಲಿನಲ್ಲಿ ನಿಂತು ತಾಯಿಯ ದರ್ಶನ ಮಾಡಿದರು.

ಆಷಾಢ ಮಾಸದ ಮೊದಲ ಶುಕ್ರವಾರದಂದು ತಾಯಿ ಚಾಮುಂಡಿಗೆ ನಾಗಲಕ್ಷ್ಮೀ ಅಲಂಕಾರ ಮಾಡಲಾಗಿತ್ತು. ಈ ಬಾರಿ 2 ಸಾವಿರ ರೂ. ಮೌಲ್ಯದ ಟಿಕೆಟ್ ಪಡೆದವರಿಗೆ ನೇರ ದರ್ಶನದ ವ್ಯವಸ್ಥೆ ಮಾಡಲಾಗಿದೆ.

ಮುಂಜಾನೆ ನಡೆದ ಅಭಿಷೇಕ, ಕುಂಕುಮಾರ್ಚನೆ, ಮಹಾಮಂಗಳಾರತಿ ಬಳಿಕ ಭಕ್ತರ ದರ್ಶನಕ್ಕೆ ಅವಕಾಶ ನೀಡಲಾಗಿದೆ. ಮುಂಜಾನೆ 5:30ರಿಂದ ಬೆಳಗ್ಗೆ 10 ಗಂಟೆಯವರೆಗೆ

ಪುಟ 2ಕ್ಕೆ



### ಗರ್ಭಗುಡಿ ಕಾದ ಡಿಸಿಪಿ

ವಿಐಪಿಗಳ ಸಂಖ್ಯೆ ಹೆಚ್ಚಾಗಿ ಎಲ್ಲರೂ ಗರ್ಭಗುಡಿ ದರ್ಶನಕ್ಕೆ ಏಕಕಾಲದಲ್ಲೇ ಹೋದ ಪರಿಣಾಮ ಭಕ್ತರಿಗೆ ಕಿರಿಕಿರಿ ಉಂಟಾಗುತ್ತಿದ್ದನ್ನು ಅರಿತ ಡಿಸಿಪಿ ಪ್ರಿಯವದನ ಎರಡು ತಾಸಿಗೂ ಹೆಚ್ಚು ಕಾಲ ಗರ್ಭಗುಡಿಯಲ್ಲೇ ನಿಂತು ಭಕ್ತರ ಸುಗಮ ದರ್ಶನಕ್ಕೆ ಅನುವು ಮಾಡಿಕೊಟ್ಟರು. ಕೆಲವು ವಿಐಪಿಗಳಿಗೆ ಪೊಲೀಸರು ಗರ್ಭಗುಡಿಯಲ್ಲೇ ಮೈಕ್ ಹಿಡಿದು ಜನಸಾಮಾನ್ಯರ ದರ್ಶನಕ್ಕೆ ಸಹಕರಿಸುವಂತೆ ಕೋರಿದರು.



## ಮೊದಲ ಪುಟದಿಂದ

### ಹರಿದುಬಂದ ಭಕ್ತಸಾಗರ

ವಿವಿಐಪಿಗಳಿಗೆ ದರ್ಶ ನಕ್ಕೆ ಅವಕಾಶವಿದೆ. ಮತ್ತೊಂದೆಡೆ ವಿಐಪಿಗಳೇ ಹೆಚ್ಚು ಆಗಮಿಸಿದ್ದು ಕರ್ತವ್ಯ ನಿರತ ಪೊಲೀಸರು, ಪ್ರಾಧಿಕಾರದ ಸಿಬ್ಬಂದಿಗಳನ್ನು ಸುಸ್ತಾಗಿಸಿತು. ನಾಲ್ಕು ತಾಸು ಸರತಿ ಸಾಲಿನಲ್ಲಿ ನಿಂತಿದ್ದ ಭಕ್ತರಿಗೂ ಕಿರಿಕಿ ರಿಯುಂಟು ಮಾಡಿತು. ಚಾಮುಂಡಿಬೆಟ್ಟದಲ್ಲಿ ಎರಡನೇ ಆಷಾಢ ಶುಕ್ರ ವಾರದ ಸಂಭ್ರಮದ ಹಿನ್ನೆಲೆಯಲ್ಲಿ ದೇವಾಲಯದ ಹೊರಗೆ ಹಾಗೂ ಒಳಗೆ ಕೆಂಪು, ಬಿಳಿ ಸೇರಿ ವಿವಿಧ ರೀತಿಯ ಹೂ ಮತ್ತು ಹಣ್ಣುಗಳಿಂದ ಅಲಂಕರಿ ಸಲಾಗಿತ್ತು. ತಾಯಿ ಚಾಮುಂಡೇಶ್ವರಿಯ ಮೂಲ ಹಾಗೂ ಉತ್ಸವ ಮೂರ್ತಿಗೆ ಗುಲಾಬಿ ಬಣ್ಣದ ಸೀರೆ ಯಿಂದ ಎಂದಿನಂತೆ ಲಕ್ಷ್ಮೀ ಅಲಂಕಾರ ಮಾಡಲಾಗಿತ್ತು.

### ಗ್ರಾಪಂ ವ್ಯಾಪ್ತಿ ಮಳಿಗೆಗಳಿಗೆ ತೆರಿಗೆ

ಸೂಚನೆ ನೀಡಿರುವ ಸಚಿವರು, ಹೆದ್ದಾರಿ, ಜಿಲ್ಲಾ ಮುಖ್ಯರಸ್ತೆ ಪಕ್ಕದಲ್ಲಿರುವ ಗ್ರಾಮಪಂಚಾಯತಿ ವ್ಯಾಪ್ತಿಯ ಕಂದಾಯ ಭೂಮಿಯಲ್ಲಿ ತಾತ್ಕಾಲಿಕ ಶೆಡ್ ನಿರ್ಮಿಸಿ ಗ್ರಾನೈಟ್ ಇತ್ಯಾದಿ ಮಾರಾಟ ಮಾಡುವ, ಹೋಟೆಲ್, ಢಾಬಾ, ಅಂಗಡಿ, ಮಳಿಗೆಗಳು ಕಾರ್ಯನಿರ್ವಹಿಸುತ್ತಿದ್ದರೂ ಇದರಿಂದ ಪಂಚಾಯತಿಗಳಿಗೆ ಸೂಕ್ತ ಆದಾಯ ಬರುತ್ತಿಲ್ಲ ಹೀಗಾಗಿ ಶುಲ್ಕ ವಿಧಿಸುವ ಬಗ್ಗೆ ನಿರ್ದೇಶನ ನೀಡಿದ್ದಾರೆ..

### ಒಂದು ದಿನ ಕಾಲಾವಕಾಶ: ಸಿಜೆಪಿ

ಈ ವೇಳೆ ಸಿಜೆಪಿ ಧರ್ಮೇಂದ್ರ ಪ್ರಧಾನ್ ಅವರನ್ನು ಸಂಪುಟದಿಂದ ತೆಗೆಯಬೇಕು. ಪ್ರತಿಭಟನಾ ನಿರತ ವಿದ್ಯಾರ್ಥಿಗಳ ಮೇಲೆ ಹಾಕಲಾಗಿರುವ ಕೇಸ್‌ಗಳನ್ನು ಹಿಂದಕ್ಕೆ ಪಡೆಯಬೇಕು ಮತ್ತು ಆತ್ಮಹತ್ಯೆ ಮಾಡಿಕೊಂಡಿರುವ ನೀಟ್ ವಿದ್ಯಾರ್ಥಿಗಳ ಕುಟುಂಬಕ್ಕೆ 1 ಕೋಟಿ ಪರಿಹಾರ ಕೊಡಬೇಕೆಂಬ ಬೇಡಿಕೆಯನ್ನು ಮುಂದಿರಿಸಿದೆ.

### ಹಾರಂಗಿ ಜಲಾಶಯ ಭರ್ತಿ

ಮೂಲಕ ಕಾವೇರಿ ನದಿಗೆ ಹರಿಸುವ ಸಾಧ್ಯತೆ ಇದೆ. ಒಳಹರಿವಿನ ಪ್ರಮಾಣ ಹೆಚ್ಚಾದರೆ, ನೀರಿನ ಬಿಡುಗಡೆ ಪ್ರಮಾಣವನ್ನ ಹಂತ ಹಂತವಾಗಿ ಹೆಚ್ಚಿಸುವ ಸಾಧ್ಯತೆಯಿದೆ.

### ಸಮಗ್ರ ಮಾಹಿತಿಗೆ ಸೂಚನೆ

ಆಡಳಿತ ಹಾಗೂ ಮಾನವ ಸಂಪನ್ಮೂಲ ಸೇರಿದಂತೆ 10 ಪ್ರಮುಖ ವಿಭಾಗಗಳ ಪ್ರಗತಿ ವರದಿಯನ್ನು ಕೇಳಿದೆ. ಪರೀಕ್ಷೆಗೂ ಮುನ್ನ, ಪರೀಕ್ಷೆಯ ಸಮಯದಲ್ಲಿ ಮತ್ತು ಪರೀಕ್ಷೆಯ ನಂತರದ ಹಂತಗಳಲ್ಲಿ ಕೈಗೊಂಡಿರುವ ಸುಧಾರಣಾ ಕ್ರಮಗಳು, ಕಂಪ್ಯೂಟರ್ ಆಧಾರಿತ ಪರೀಕ್ಷೆಗೆ ಬದಲಾಗುವ ಪ್ರಸ್ತಾವನೆ, ಡೇಟಾ ಸಂರಕ್ಷಣೆ ಮತ್ತು ಅಭ್ಯರ್ಥಿಗಳ ಪರಿಶೀಲನೆಗೆ ಡಿಜಿ ಯಾತ್ರೆ ಮಾದರಿಯ ತಂತ್ರಜ್ಞಾನ ಬಳಸುವ ಕುರಿತ ಮಾಹಿತಿ, ಭದ್ರತೆ, ಮೇಲ್ವಿಚಾರಣೆ ಮತ್ತು ಜಾಗೃತ ದಳಕ್ಕಾಗಿ ಹೊಸದಾಗಿ ನೇಮಕಗೊಂಡಿರುವ ಹೆಚ್ಚುವರಿ ಡೈರೆಕ್ಟರ್ ಜನರಲ್‌ಗಳ ಪ್ರಗತಿ ವರದಿ ನೀಡುವಂತೆ ಸೂಚಿಸಿದೆ.

### 10 ವರ್ಷ ಜೈಲು ಶಿಕ್ಷೆ

ಕೇಂದ್ರ ಲೋಕಸೇವಾ ಆಯೋಗ, ಸಿಬ್ಬಂದಿ ನೇಮಕಾತಿ ಆಯೋಗ, ರೈಲ್ವೆ, ಬ್ಯಾಂಕಿಂಗ್ ನೇಮಕಾತಿ ಪರೀಕ್ಷೆಗಳು ಮತ್ತು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ಮುಂತಾದವು ನಡೆಸುವ ಪಬ್ಲಿಕ್ ಪರೀಕ್ಷೆಗಳಲ್ಲಿ ಅಕ್ರಮ ಮಾರ್ಗಗಳನ್ನು ತಡೆಗಟ್ಟುವ ಗುರಿಯನ್ನು ಹೊಂದಿದೆ.

ನಕಲು ಮಾಡುವುದನ್ನು ತಡೆಯಲು ಈ ಹಿಂದಿನ ಮಸೂದೆಯಲ್ಲಿ ಕನಿಷ್ಠ ಮೂರರಿಂದ ಐದು ವರ್ಷಗಳ ಜೈಲು ಶಿಕ್ಷೆಯ ಅವಕಾಶವಿತ್ತು. ಆದರೆ, ಈಗ ಸಂಘಟಿತ ಅಪರಾಧದ ಮೂಲಕ ನಕಲು ಮಾಡುವಲ್ಲಿ ಭಾಗಿಯಾದವರಿಗೆ ಐದರಿಂದ 10 ವರ್ಷಗಳ ಜೈಲು ಶಿಕ್ಷೆ ಮತ್ತು ಕನಿಷ್ಠ 1 ಕೋಟಿ ರೂ. ದಂಡ ವಿಧಿಸುವ ಅವಕಾಶವನ್ನು ಇದರಲ್ಲಿ ಕಲ್ಪಿಸಲಾಗಿದೆ.

ಮಸೂದೆಯು ಪ್ರಶ್ನೆಪತ್ರಿಕೆಗಳನ್ನು ಸೋರಿಕೆ ಮಾಡುವುದು, ಉತ್ತರ ಪತ್ರಿಕೆ ಹಾಳೆಗಳನ್ನು ತಿರುಚುವುದು, ನಕಲಿ ವೆಬ್‌ಸೈಟ್‌ಗಳನ್ನು ರಚಿಸುವುದು ಮತ್ತು ನಕಲಿ ಪ್ರವೇಶ ಪತ್ರಗಳನ್ನು ನೀಡುವುದು ಸೇರಿದಂತೆ 15 ಕಾನೂನುಬಾಹಿರ ಕೃತ್ಯಗಳನ್ನು ವಿವರಿಸುತ್ತದೆ.

### ಪ್ರಧಾನ್ ರಾಜೀನಾಮೆವರೆಗೂ ಮಾತುಕತೆ ನಡೆಸಲ್ಲ: ರಾಗಾ

ಬೇಡಿಕೆಗಳಾಗಿವೆ. ಇವು ಈಡೇರದ ಹೊರತು, ನಾವು ಯಾವುದೇ ಚರ್ಚೆ ನಡೆಸುವುದಿಲ್ಲ ಎಂದೂ ಅವರು ಸ್ಪಷ್ಟಪಡಿಸಿದರು.

### ದರ ಏರಿಕೆ ಶಾಕ್ ನೀಡಲು ಸಿದ್ಧ

ಪ್ರಸ್ತಾಪವನ್ನು ಸಹ ತಿಳಿಸಿದೆ. 2033ರ ವೇಳೆಗೆ ಕಾಮಗಾರಿ ಮುಗಿಯಲಿದೆ. ಆ ವೇಳೆಗೆ ಹೊಸ ಮಾದರಿಯಲ್ಲಿ ಮೂರು ವರ್ಷಗಳಿಗೆ ಒಮ್ಮೆ ಶೇ.12ರಷ್ಟು ದರ ಏರಿಕೆ ಮಾಡಿದರೆ ಈಗಿರುವ ನಷ್ಟದ ಪ್ರಮಾಣವನ್ನ ಕಡಿಮೆ ಮಾಡುವ ಅಂದಾಜಿನ ಲೆಕ್ಕಾಚಾರವನ್ನ ಉಲ್ಲೇಖ ಮಾಡಿದೆ. ಈ ಪ್ರಸ್ತಾಪಕ್ಕೆ ಕೇಂದ್ರ ಸರ್ಕಾರ ಒಪ್ಪಿಗೆ ಸೂಚಿಸಿದ ಬಳಿಕ ಇದನ್ನ ದರ ಪರಿಷ್ಕರಣಾ ಸಮಿತಿಯೂ ಪರಿಶೀಲನೆ ಮಾಡಬೇಕಿದೆ. ಬಳಿಕವಷ್ಟೇ ಗ್ರೀನ್ ಸಿಗ್ನಲ್ ಸಿಗಲಿದೆ. ಅಂತಿಮ ನಿರ್ಧಾರ ದರ ಪರಿಷ್ಕರಣೆ ಸಮಿತಿ ನಿರ್ಧಾರ ಆಗಿರಲಿದೆ.

### ಪೆರೋಲ್ ನಿರಾಕರಣೆ

ಸಲ್ಲಿಸಲು ಮುಂದಾಗಿದ್ದಾರೆ ಎನ್ನಲಾಗಿದೆ. 15 ದಿನಗಳ ಕಾಲ ಪೆರೋಲ್ ಸಿಕ್ಕಿದರೆ ಪುಣ್ಯ ತಿಥಿ ದಿನದ ಬದಲಿಗೆ ಬೇರೊಂದು ದಿನ ಸಮಾಧಿಯ ಬಳಿ ಕರೆದುಕೊಂಡು ಹೋಗಿ ಪೂಜೆ ನೆರವೇರಿಸುವ ತಯಾರಿಯಲ್ಲಿದೆ ಕುಟುಂಬ ಎಂದು ತಿಳಿದುಬಂದಿದೆ.

### ವಾಂಗ್ಚುಕ್ ಉಪವಾಸ ಅಂತ್ಯ

ಜೆ.ಪಿ ನಡ್ಡಾ ಹಾಗೂ ಜಿತೇಂದ್ರ ಸಿಂಗ್ ಅವರು ವಾಂಗ್ಚುಕ್ ಮನವೊಲಿಸುವಲ್ಲಿ ಯಶಸ್ವಿಯಾಗಿದರು. ವಾಂಗ್ಚುಕ್ ಅವರಿಗೆ ಇಬ್ಬರೂ ಸಚಿವರು ಜ್ಯೂಸ್ ಕುಡಿಸುವ ಮೂಲಕ ನಿರಶನ ಅಂತ್ಯವಾಗಿದೆ. ಜೂ.28ರಿಂದ ಸೋನಂ ವಾಂಗ್ಚುಕ್ ಅನಿರ್ದಿಷ್ಟಾವಧಿ ಸತ್ಯಾಗ್ರಹ ನಡೆಸುತ್ತಿದ್ದರು. ಉಪವಾಸ ಕೊನೆಗೊಳಿಸಲು ನನಗೆ ತುಂಬಾ ಸಂತೋಷವಾಗುತ್ತಿದೆ ಎಂದು ವಾಂಗ್ಚುಕ್ ಹೇಳಿದರು.

### ಮೋದಿ ಮಧ್ಯರಾತ್ರಿ ಸಂದೇಶ!

ದ್ವಿತೀಯ ವಾರದ ಕಲಾಪ ಪ್ರಾರಂಭವಾಗುತ್ತಿದ್ದು, ಆದಷ್ಟು ಬೇಗ ಈ ಮಸೂದೆಯನ್ನು ಮಂಡಿಸಿ ಅಂಗೀಕರಿಸಲು ಪ್ರಯತ್ನಿಸಲಾಗುವುದು. ಈ ಪ್ರಕರಣಗಳ ತನಿಖೆ ಮತ್ತು ವಿಚಾರಣೆಯನ್ನು ಶೀಘ್ರವಾಗಿ ಮುಗಿಸಲು ಫಾಸ್ಟ್ ಕ್ ಕೋರ್ಟ್ ಸ್ಥಾಪಿಸಲಾಗುವುದು ಎಂದು ತಿಳಿಸಿದ್ದಾರೆ.

# ನೀಟ್: ಕೈನಿಂದ ಚಿಲ್ಲರೆ ರಾಜಕಾರಣ

## ರಾಜ್ಯ ಸರ್ಕಾರದ ಧೋರಣೆ ಖಂಡಿಸಿ ಮೈಸೂರಿನಲ್ಲಿ ಬೃಹತ್ ಪ್ರತಿಭಟನೆ

ಮೈಸೂರು: ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ವಿಚಾರವನ್ನು ರಾಜಕೀಯವಾಗಿ ದುರುಪಯೋಗಪಡಿಸಿಕೊಳ್ಳುತ್ತಿರುವ ರಾಜ್ಯ ಸರ್ಕಾರದ ಧೋರಣೆಯನ್ನು ಖಂಡಿಸಿ, ಮೈಸೂರು ನಗರ ಮತ್ತು ಗ್ರಾಮಾಂತರ ಬಿಜೆಪಿ ವತಿಯಿಂದ ನಗರದ ರಾಮಸ್ವಾಮಿ ವೃತ್ತದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಯಿತು.

ರಾಮಸ್ವಾಮಿ ವೃತ್ತದ ಬಳಿ ಜಮಾಯಿಸಿದ ನೂರಾರು ಬಿಜೆಪಿ ಕಾರ್ಯಕರ್ತರು, ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು. 'ರೌಡಿಸಂ ಸಂಸ್ಕೃತಿ ಮೆರೆಯುತ್ತಿರುವ ಕಾಂಗ್ರೆಸ್ ಸರ್ಕಾರಕ್ಕೆ ಧಿಕ್ಕಾರ' ಹಾಗೂ 'ದೇಶವಿರೋಧಿ ದುಷ್ಟಶಕ್ತಿಗಳ ಪ್ರೇರಣೆಯಿಂದ ಪ್ರಧಾನಿ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದ ಕಾಂಗ್ರೆಸ್ ನಾಯಕರ ನಡೆಗೆ ಧಿಕ್ಕಾರ' ಎಂದು ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆಯಲ್ಲಿ ಬಿಜೆಪಿ ರಾಜ್ಯ ಎಸ್ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಶಿವಕುಮಾರ್, ಮೈಸೂರು ವಿಭಾಗೀಯ ಸಹ ಪ್ರಭಾರಿ ಡಾ.ಸಿ.ಎನ್. ನಿಂಗರಾಜ್ ಗೌಡ, ಕಾಂಪೋಸ್ಟ್ ನಿಗಮದ ಮಾಜಿ ಅಧ್ಯಕ್ಷ ಎಸ್. ಮಹದೇವಯ್ಯ, ಜಿಲ್ಲಾಧ್ಯಕ್ಷ ಕುಂಬ್ರಳ್ಳಿ ಎನ್. ಸುಬ್ಬಣ್ಣ, ಪ್ರಧಾನ ಕಾರ್ಯದರ್ಶಿಗಳಾದ ರುದ್ರಮೂರ್ತಿ, ವಿ. ಸೋಮಸುಂದರ್, ಬಿ.ಎಂ. ರಘು, ನಗರ ವಕ್ತಾರ ಎಂ.ವಿ. ಮೋಹನ್, ಮಾಜಿ ಮೇಯರ್ ಎಸ್. ಸಂದೇಶ್ ಸ್ವಾಮಿ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎ. ಹೇಮಂತ್ ಕುಮಾರ್ ಗೌಡ, ಬಿ.ಪಿ. ಮಂಜುನಾಥ್, ನಗರಪಾಲಿಕೆ ಮಾಜಿ ಸದಸ್ಯರಾದ ಪಿ. ಪ್ರಶಾಂತ್ ಗೌಡ, ರಂಗಸ್ವಾಮಿ, ಎಂ.ಕೆ. ಶಂಕರ್, ಸೌಮ್ಯ ಉಮೇಶ್, ಪ್ರಮೀಳಾ ಭರತ್, ಗುರು ವಿನಾಯಕ, ಲಕ್ಷ್ಮೀ ಕಿರಣ್ ಗೌಡ, ರಮೇಶ್, ಮಂಗಳಾ ಸೋಮಶೇಖರ್, ಹೇಮಾ ನಂದೀಶ್, ಜಯಪ್ರಕಾಶ್ (ಜೆಪಿ), ಕಾರ್ತಿಕ್ ಮರಿಯಪ್ಪ ಸೇರಿದಂತೆ ಹಲವರು ಭಾಗವಹಿಸಿದ್ದರು.

### ಸಿಬಿಐ ತನಿಖೆ ನಡೆಸಿ 13 ಜನರ ಬಂಧನ

**ಧೀರಜ್ ಮುನಿರಾಜ್**

ಪ್ರತಿಭಟನೆಯಲ್ಲಿ ಶಾಸಕ ಹಾಗೂ ಯುವ ಮೋರ್ಚಾ ರಾಜ್ಯಾಧ್ಯಕ್ಷ ಧೀರಜ್ ಮುನಿರಾಜ್ ಮಾತನಾಡಿ, "ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಯಾದ ತಕ್ಷಣವೇ ಕೇಂದ್ರ ಸರ್ಕಾರ ಸಿಬಿಐ ತನಿಖೆಗೆ ಆದೇಶಿಸಿ 13 ಜನರನ್ನು ಬಂಧಿಸಿದೆ. ಅನೇಕ ಅಧಿಕಾರಿಗಳನ್ನು ವರ್ಗಾವಣೆ ಮಾಡಲಾಗಿದೆ. ವಿದ್ಯಾರ್ಥಿಗಳ ಹಿತ ಕಾಯಲು ಪ್ರಾಮಾಣಿಕವಾಗಿ ಶ್ರಮಿಸುತ್ತಿರುವ ಪ್ರಧಾನಿ ನರೇಂದ್ರ ಮೋದಿ ಅವರ ಮೇಲೆ ಕಾಂಗ್ರೆಸ್ ಅಪಪ್ರಚಾರ ಮಾಡುತ್ತಿದೆ. ನೀಟ್ ಪರೀಕ್ಷಾ ಪದ್ಧತಿಯಲ್ಲಿ ಅಮೂಲಾಗ್ರ ಬದಲಾವಣೆ ತರಲು ಕೇಂದ್ರ ಸರ್ಕಾರ ಸಂಕಲ್ಪ ಮಾಡಿದ್ದು, ದೇಶದ ರಾಜಕೀಯ ಅಸ್ಥಿ ರತೆಗೆ ಸಂಚು ಮಾಡುತ್ತಿರುವವರ ವಿರುದ್ಧ ಸೂಕ್ತ ಕ್ರಮವಾಗಲಿದೆ" ಎಂದರು. ಮುಂದುವರಿದು, "ಡಿ.ಕೆ.ಶಿವಕುಮಾರ್ ಅವರೇ, ನಾವು ರಾಜ್ಯದಲ್ಲಿ ಅಧಿಕಾರದಲ್ಲಿ ಇಲ್ಲದಿದ್ದರೂ ಕೇಂದ್ರದಲ್ಲಿ ಮೋದಿ ಸರ್ಕಾರವಿದೆ. ನಾವು ಮೊಟ್ಟೆ ಒಡೆಯಲು ಶುರು ಮಾಡಿದರೆ ಕಾಂಗ್ರೆಸ್ಸಿಗರು ರಸ್ತೆಯಲ್ಲಿ ಓಡಾಡಲು ಸಾಧ್ಯವಾಗುವುದಿಲ್ಲ. ಇಂತಹ ಚಿಲ್ಲರೆ ರಾಜಕಾರಣ ಬಿಡಿ" ಎಂದು ಎಚ್ಚರಿಸಿದರು.



### ಚಿಲ್ಲರೆ ರಾಜಕಾರಣ ಬಿಡಿ: ಪ್ರತಾಪ್ ಸಿಂಹ

ಮಾಜಿ ಸಂಸದ ಪ್ರತಾಪ್ ಸಿಂಹ ಮಾತನಾಡಿ, "ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಮುಚ್ಚಿ ಹಾಕದೆ ಸಿಬಿಐ ತನಿಖೆಯ ಮೂಲಕ ಭಾಗಿಯಾಗಿದ್ದವರನ್ನು ಪತ್ತೆ ಹಚ್ಚಿ ಜೈಲಿಗಟ್ಟಿದ್ದಾರೆ. ಮೊದಲು ಧರ್ಮೇಂದ್ರ ಪ್ರಧಾನ್ ಅವರ ರಾಜೀನಾಮೆ ಕೇಳುತ್ತಿದ್ದವರು ಈಗ ಪ್ರಧಾನಿ ರಾಜೀನಾಮೆ ಕೇಳುತ್ತಿದ್ದಾರೆ. ಮೋದಿ ಆಡಳಿತದಲ್ಲಿ 1.36 ಲಕ್ಷ ಸೀಟುಗಳು ಹೆಚ್ಚಾಗಿದ್ದು, ವೈದ್ಯಕೀಯ ಕಾಲೇಜುಗಳ ಸಂಖ್ಯೆ 350 ರಿಂದ 845ಕ್ಕೆ ಏರಿಕೆಯಾಗಿದೆ. ವಿದ್ಯಾರ್ಥಿಗಳನ್ನು ಎತ್ತಿಕಟ್ಟುವ ಮೂಲಕ ಮೋದಿ ಸರ್ಕಾರ ಪತನಗೊಳಿಸಲು ಷಡ್ಯಂತ್ರ ನಡೆಸಲಾಗುತ್ತಿದೆ" ಎಂದು ಕಿಡಿಕಾರಿದರು.

> "ರಾಜ್ಯದಲ್ಲಿ ಜೈರಾಜ್, ಕೊತ್ವಾಲ್ ಮಾದರಿಯ ಆಡಳಿತ ನಡೆಯುತ್ತಿದ್ದು, ಕಾನೂನು ಸುವ್ಯವಸ್ಥೆ ಸಂಪೂರ್ಣ ಕುಸಿದಿದೆ. ಜೈಲಿನಿಂದ ಕೈದಿಗಳು ಪರಾರಿಯಾದರೆ ಅಧಿಕಾರಿಗಳನ್ನು ಹೊಣೆ ಮಾಡುವ ಸರ್ಕಾರ, ನೀಟ್ ಸೋರಿಕೆಗೆ ಸಚಿವರು ರಾಜೀನಾಮೆ ನೀಡಬೇಕೆಂದು ಆಗ್ರಹಿಸುತ್ತಿರುವುದು ದ್ವಂದ್ವ ನೀತಿಯಾಗಿದೆ. ಬಿಜೆಪಿ ನಾಯಕರ ಮೇಲೆ ಮೊಟ್ಟೆ ಎಸೆಯುವ ಹಂತಕ್ಕೆ ತಲುಪಿದ್ದರೂ ಗೃಹ ಇಲಾಖೆ ಏನು ಮಾಡುತ್ತಿದೆ?"
>
> ▶▶ **ಟಿ.ಎಸ್. ಶ್ರೀವತ್ಸ** ಶಾಸಕ

> "ಸರ್ಕಾರಿ ಕಾಲೇಜುಗಳಲ್ಲಿ ರಾಹುಲ್ ಗಾಂಧಿ ಫೋಟೋ ಪ್ರದರ್ಶಿಸಿ, ವಿದ್ಯಾರ್ಥಿಗಳಲ್ಲಿ ರಾಜಕೀಯ ಪ್ರೇರಿತ ವಿಚಾರಗಳನ್ನು ತುಂಬುವ ಕೆಲಸಕ್ಕೆ ನಮ್ಮ ಸಂಪೂರ್ಣ ವಿರೋಧವಿದೆ. ಯಾವುದೇ ಕಾರಣಕ್ಕೂ ಕಾಲೇಜುಗಳನ್ನು ಕಾಂಗ್ರೆಸ್ ಕಚೇರಿಯನ್ನಾಗಿ ಮಾಡಲು ಬಿಡುವುದಿಲ್ಲ."
>
> ▶▶ **ಎಲ್. ನಾಗೇಂದ್ರ** ಬಿಜೆಪಿ ನಗರಾಧ್ಯಕ್ಷ

## ವರ್ಗಾವಣೆ ರದ್ದುಗೊಳದಿದ್ದರೆ ಹೋರಾಟ



ಮೈಸೂರು: ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಕೋಟ್ಯಂತರ ರೂ. ಅಕ್ರಮ ಸರ್ಕಾರಿ ಭೂಹಗರಣ ಎಸಗಿರುವ ಹಾಗೂ ಲೋಕಾಯುಕ್ತ ಆರೋಪ ಎದುರಿಸುತ್ತಿರುವ ಓರ್ವರನ್ನು ಅಕ್ರಮವಾಗಿ ಮರು ನಿಯೋಜನೆ ಮಾಡಿರುವುದು ಸರಿಯಲ್ಲ. ಹೀಗಾಗಿ ಆರೋಪ ಕುರಿತ ತನಿಖೆ ಪೂರ್ಣಗೊಳ್ಳುವವರೆಗೂ ಅವರನ್ನು ಅಮಾನತಿನಲ್ಲಿಡಬೇಕು. ರಮ್ಮನಹಳ್ಳಿ ಪಟ್ಟಣ ಪಂಚಾಯಿತಿಗೆ ಆಗಿರುವ ವರ್ಗಾವಣೆ ತಡೆ ಹಿಡಿಯದಿದ್ದರೆ ಉಗ್ರ ಹೋರಾಟ ನಡೆಸುವುದಾಗಿ ಸಮಾಜ ರಕ್ಷಣೆ ಸೇನೆ ಸಂಘಟನೆಯ ರಾಜ್ಯಾಧ್ಯಕ್ಷ ಕೆ.ಎಚ್. ಹನುಮಂತರಾಜು ಆರೋಪಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಹಂಚ್ಯಾ ಗ್ರಾಮದಲ್ಲಿ ಕೆರೆ ಅಂಗಳ ಮತ್ತು ಸರ್ಕಾರಿ ಖರಾಬು ಜಮೀನನ್ನು ನಕಲಿ ದಾಖಲೆಗಳ ಮೂಲಕ ಖಾಸಗಿ ವ್ಯಕ್ತಿಗಳಿಗೆ ಅಕ್ರಮವಾಗಿ ಮಾರಾಟ ಮಾಡಲಾಗಿದೆ. ಅಕ್ರಮ ಖಾತೆ ಸೃಷ್ಟಿಸಲಾಗಿದೆ. ಲೋಕಾಯುಕ್ತ ಅಧಿಕಾರಿಗಳು ಸಹಾ ವ್ಯತಿರಿಕ್ತ ವರದಿ ಸಲ್ಲಿಸಿದ್ದಾರೆ. ಹೀಗಿದ್ದರೂ ಆ ವ್ಯಕ್ತಿಯನ್ನು ಅದೇ ಸ್ಥಳಕ್ಕೆ ಮರು ನಿಯೋಜನೆ ಮಾಡಿರುವುದರಿಂದಾಗಿ ಸಾಕ್ಷ್ಯಾ?ಯಧಾರ ನಾಶ ಪಡಿಸಿ, ತನಿಖೆಗೆ ಅಡ್ಡಿಯುಂಟು ಮಾಡುವ ಸಾಧ್ಯತೆಯಿದೆ. ಹೀಗಾಗಿ ಜಿಲ್ಲಾಧಿಕಾರಿ ಈ ಬಗ್ಗೆ ಗಮನ ಹರಿಸಬೇಕೆಂದು ಒತ್ತಾಯಿಸಿದರು. ಮಂಜುನಾಥ್, ತಾಳಶಾಸನ ಮೋಹನ್, ಶರತ್‌ಕುಮಾರ್, ಕಾಂತರಾಜ್, ವಸಂತರಾಜ್ ಚೌಹಾಣ್ ಮೊದಲಾದವರು ಇದ್ದರು.

## ವರ್ಲ್ಡ್ ಹಿಸ್ಟರಿ ಕಾಂಗ್ರೆಸ್ 4ನೇ ಸಮ್ಮೇಳನ



ಮೈಸೂರು: ಕಾಲೇಜು ಶಿಕ್ಷಣ ಇಲಾಖೆ ಪುದುಚೇರಿ ವರ್ಲ್ಡ್ ಹಿಸ್ಟರಿ ಕಾಂಗ್ರೆಸ್ (ಪಿಡಬ್ಲ್ಯೂಎಚ್ ಸಿ) ಇತಿಹಾಸ ವಿಭಾಗ ಮಹಾರಾಣಿಯ ಮಹಿಳಾ ಕಲಾ ಕಾಲೇಜು ಸಂಯುಕ್ತ ಆಶ್ರಯದಲ್ಲಿ ಜು.25ರಂದು ಬೆಳಿಗ್ಗೆ 10ಕ್ಕೆ ನಗರದ ಪಡುವಾರಹಳ್ಳಿಯ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನಲ್ಲಿ ಪುದುಚೇರಿ ವರ್ಲ್ಡ್ ಹಿಸ್ಟರಿ ಕಾಂಗ್ರೆಸ್- ಅವೃತ್ತಿ 4 ಸಮ್ಮೇಳನ ಹಮ್ಮಿಕೊಳ್ಳಲಾಗಿದೆ ಎಂದು ಸ್ಥಳೀಯ ಕಾರ್ಯದರ್ಶಿ ಟಿ.ನಾಗವೇಣಿ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಸಮಾರಂಭವನ್ನು ಪ್ರೊ.ಎನ್.ಕೆ.ಲೋಕನಾಥ್ ಉದ್ಘಾಟನೆ ನೇರವೇರಿಸುವರು. ಅತಿಥಿಗಳಾಗಿ ಶಾಸಕ ಕೆ. ಹರೀಶ್ ಗೌಡ, ಪ್ರೊ.ಶೇಖ್ ಮಸ್ತಾನ್, ಪ್ರೊ. ಮುಸುಗು ಶ್ರೀನಿವಾಸ ರಾವ್, ಪ್ರೊ.ಪ್ರತಿಮಾ ಡಿ.ಎಸ್, ಡಾ.ಸಂದೀಪ್ ಕುಮಾರ್ ದಾಸರಿ, ಪ್ರೊ. ಅರವಿಂದ ಕುಮಾರ ಭಾವಹಿಸುವರು ಎಂದರು. 26ರಂದು ಸಮಾರೋಪ ಸಮಾರಂಭ ನಡೆಯಲಿದ್ದು, ಅತಿಥಿಯಾಗಿ ಉಷಾದೇವಿ, ಪ್ರೊ.ಲ್ಯಾನ್ಸಿ ಡಿಸೋಜಾ, ಪ್ರೊ.ಅರವಿಂದ್ ಕುಮಾರ್, ಸಂದೀಪ್ ಕುಮಾರ್ ದಾಸರಿ, ಪ್ರೊ.ಎಂ.ಎಸ್.ಅನಿತಾ ಭಾಗವಹಿಸುವರು ಎಂದು ತಿಳಿಸಿದರು. ಪಿಡಬ್ಲ್ಯೂಎಚ್‌ಸಿ ಎನ್ನುವುದು ಜಾಗತಿಕ ಇತಿಹಾಸ ಮತ್ತು ಸಂಶೋಧನೆಗೆ ಮೀಸಲಾಗಿರುವ ಪ್ರಮುಖ ಸಂಸ್ಥೆಯಾಗಿದೆ. ಸಮ್ಮೇಳನದಲ್ಲಿ ಇತಿಹಾಸಕಾರರು, ಪ್ರಾಧ್ಯಪಕರಾರು ಭಾಗಿಯಾಗಿ ವಿಷಯ ಮಂಡಿಸುವರು. ಹೀಗಾಗಿ ಸಂಶೋಧಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಲು ಕೋರಿದರು. ಡಾ.ಸಂದೀಪ್, ಡಾ.ತಾಹಾ, ಡಾ.ಟಿ. ನಾಗವೇಣಿ, ಡಾ.ಭಾಸ್ಕರ್, ಡಾ.ಅಶ್ವಿನಿ ಇದ್ದರು.

## ಚಾ.ಬೆಟ್ಟದ ರೂಪಾ ಏಕಾಏಕಿ ಎತ್ತಂಗಡಿ



ನ್ಯಾಯಾಲಯದ ಆದೇಶದನ್ವಯ ಬೆಟ್ಟದ ಮೇಲೆ ವಿವಿಧ ಕಾಮಗಾರಿ ಆರಂಭಕ್ಕೂ ಚಾಲನೆ ನೀಡಿದ್ದರು. ಮಾತ್ರ ವಲ್ಲದೆ, ಕಳೆದ ಬಾರಿ ಮಹಿಳಾ ಭಕ್ತರಿಗೆ ಬಾಗಿನ ಅರ್ಪಿಸಿ ಹೊಸ ಪ್ರಯೋಗ ನಡೆಸಿದ್ದರು. ಮಾತ್ರವಲ್ಲದೆ, ಸಹಸ್ರನಾಮಾರ್ಚನೆ, ಅಷ್ಟಪೂಜೆ ಹೀಗೆ ವಿವಿಧ ಧಾರ್ಮಿಕ ಕಾರ್ಯಗಳನ್ನು ನಡೆಸಿದ್ದರು. ಮಹಿಳಾ ಅಧಿಕಾರಿಯಾಗಿ ಕಳೆದ ಎರಡು ವರ್ಷಗಳಲ್ಲಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಅಕ್ರಮ ಕಟ್ಟಡ ತಲೆ ಎತ್ತುವುದನ್ನು ತಡೆಗಟ್ಟುವುದು ಸೇರಿ ಅನೇಕ ಕ್ರಮಗಳನ್ನು ಕೈಗೊಂಡಿದ್ದರು.

ಈಗಷ್ಟೇ ಆಷಾಢ ಶುಕ್ರವಾರ ಪ್ರಾರಂಭಗೊಂಡು ಎರಡನೇ ಆಷಾಢದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಮಾತ್ರವಲ್ಲದೆ, ಇತ್ತೀಚೆಗಷ್ಟೇ ಪ್ರಸಾದ ತಯಾರಿಯಲ್ಲಿ ಅಕ್ರಮ ನಡೆಸಿದ್ದಾರೆಂಬ ಆರೋಪ ಕೇಳಿ ಬಂದಿತ್ತು. ಅಲ್ಲದೆ ಇತ್ತೀಚೆಗೆ ಸಿಎಂ ಡಿ. ಕೆ.ಶಿವಕುಮಾರ್ ಜಿಲ್ಲೆಯಲ್ಲಿ ಯಾವುದೇ ಅಧಿಕಾರಿಗಳ ವರ್ಗಾವಣೆಯನ್ನು ದಸರೆ ಮುಗಿಯುವವರೆಗೂ ಮಾಡುವುದಿಲ್ಲ ಎಂದು ಹೇಳಿದ್ದರು. ಆದರೆ, ರೂಪ ಅವರನ್ನು ಏಕಾಏಕಿ ವರ್ಗಾವಣೆಗೊಳಿಸಿರುವುದು ಸಾಕಷ್ಟು ಚರ್ಚೆಗೆ ಗ್ರಾಸವಾಗಿದೆ.

#### ಕೊನೆ ದಿನವು ಕೆಲಸ

ನಿನ್ನೆ ಸರ್ಕಾರ ರೂಪ ಅವರ ಜಾಗಕ್ಕೆ ವರ್ಗಾವಣೆಗೊಳಿಸಿ ಆದೇಶ ಹೊರಡಿಸಿದೆ. ಆದರೆ, ಇಂದು ಸಹ ರೂಪ ಅವರು ಆಶಾಢ ಶುಕ್ರವಾರದ ಕರ್ತವ್ಯ ನಿರ್ವಹಿಸಿ ಗಮನ ಸೆಳೆದಿದ್ದಾರೆ.

#### ಕೃಷ್ಣಗೆ ಬೆಟ್ಟದ ಸಾರಥ್ಯ

ಬಳಿಕ ನಂಜನಗೂಡು ಶ್ರೀ ನಂಜುಂಡೇಶ್ವರ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಈಗ ಶ್ರೀ ಚಾಮುಂಡೇಶ್ವರಿ ದೇವಾಲಯ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಯಾಗಿ ಬಡ್ತಿ ನೀಡಿ ಆದೇಶ ಹೊರಡಿಸಿದೆ. ಆದರೆ, ರೂಪಾ ಅವರಿಗೆ ಸ್ಥಳ ಸೂಚಿಸದೇ ನಿರೀಕ್ಷಣೆಯಲ್ಲಿರಿಸಿದೆ.

## ಅಂಗವಿಕಲತಾ ನಿರ್ವಹಣ ತರಬೇತಿ



ಗುಂಡ್ಲುಪೇಟೆ: ಮಾರ್ಗದರ್ಶಿ ವಿಕಲಚೇತನರ ಸ್ವಯಂ ಸೇವಾ ಸಂಸ್ಥೆ, ಚಾಮರಾಜನಗರ ವತಿಯಿಂದ ಗುಂಡ್ಲುಪೇಟೆ ತಾಲೂಕಿನ ತೆರೆಕಣಾಂಬಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ವಿಕಲಚೇತನ ಮಕ್ಕಳ ಪೋಷಕರಿಗಾಗಿ ಅಂಗವಿಕಲತಾ ನಿರ್ವಹಣ ಕೌಶಲ್ಯ ತರಬೇತಿಯನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ವಿಕಲಚೇತನ ಮಕ್ಕಳನ್ನು ಪ್ರತ್ಯೇಕವಾಗಿ ಪರೀಕ್ಷಿಸಿ, ಅವರ ಅಗತ್ಯಕ್ಕೆ ಅನುಗುಣವಾಗಿ ಮನೆಯಲ್ಲಿಯೇ ಫಿಜಿಯೋಥೆರಪಿ ವ್ಯಾಯಾಮಗಳನ್ನು ಹೇಗೆ ಮಾಡಿಸಬೇಕು ಎಂಬುದರ ಕುರಿತು ಪೋಷಕರಿಗೆ ವಿವರವಾದ ಮಾಹಿತಿ ನೀಡಲಾಯಿತು. ಮಕ್ಕಳ ದೈಹಿಕ ಬೆಳವಣಿಗೆ ಮತ್ತು ದೈನಂದಿನ ಚಟುವಟಿಕೆಗಳಿಗೆ ಸಹಕಾರಿಯಾಗು ವಂತೆ, ಅವರ ಅಳತೆಗೆ ಅನುಗುಣವಾಗಿ (ಕಸ್ಟಮೈಸ್) ಅಗತ್ಯವಿರುವ ಸಹಾಯಕ ಸಾಧನಗಳ ಪಟ್ಟಿಯನ್ನೂ ಸಿದ್ಧಪಡಿಸಲಾಯಿತು

ಇದೇ ವೇಳೆ ತೆರೆಕಣಾಂಬಿ ಪ್ರಾಥಮಿಕ ಆರೋಗ್ಯ ಕೇಂದ್ರದ ಸಹಯೋಗದಲ್ಲಿ ಮಕ್ಕಳ ವೈದ್ಯಕೀಯ ತಪಾಸಣೆಯನ್ನೂ ನಡೆಸಿ, ಅವರ ಆರೋಗ್ಯ ಸ್ಥಿತಿಯನ್ನು ಪರಿಶೀಲಿಸಿ ಅಗತ್ಯ ಸಲಹೆಗಳನ್ನು ನೀಡಲಾಯಿತು. ಇಂತಹ ತರಬೇತಿ ಕಾರ್ಯಕ್ರಮಗಳು ವಿಕಲಚೇತನ ಮಕ್ಕಳ ಪುನರ್ವಸತಿ ಹಾಗೂ ಸ್ವಾವಲಂಬನೆಗೆ ಪೋಷಕರ ಪಾತ್ರವನ್ನು ಮತ್ತಷ್ಟು ಬಲಪಡಿಸಲಿವೆ ಎಂದು ಅಧಿಕಾರಿಗಳು ತಿಳಿಸಿದರು. ಕಾರ್ಯಕ್ರಮದಲ್ಲಿ ಒಟ್ಟು 13 ವಿಕಲಚೇತನ ಮಕ್ಕಳು ಹಾಗೂ 26 ಪೋಷಕರು ಭಾಗವಹಿಸಿ ತರಬೇತಿಯ ಪ್ರಯೋಜನ ಪಡೆದರು. ಕಾರ್ಯಕ್ರಮದಲ್ಲಿ ಮಾರ್ಗದರ್ಶಿ ವಿಕಲಚೇತನರ ಸ್ವಯಂ ಸೇವಾ ಸಂಸ್ಥೆಯ ಗುಂಡ್ಲುಪೇಟೆ ತಾಲೂಕು ಪುನಶ್ಚೇತನ ಸಂಯೋಜಕಿ ಹಂಸವೇಣಿ, ಪ್ರೋಗ್ರಾಂ ಮ್ಯಾನೇಜರ್ ಅಭಿಷೇಕ್, ಫಿಜಿಯೋಥೆರಪಿಸ್ಟ್ ಶ್ರೀನಿವಾಸ್, ರಾಜು, ಸಹಾಯಕ ಸಾಧನಗಳ ತಯಾರಕರಾದ ಕುಮಾರ್, ವೈದ್ಯರಾದ ಡಾ. ನಮನ್, ನಾಗೇಂದ್ರ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಸುದರ್ಶನ್, ಆರೋಗ್ಯ ನಿರೀಕ್ಷಣಾಧಿಕಾರಿ ಸವಿತಾ, ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿ, ಗ್ರಾಮೀಣ ಪುನರ್ವಸತಿ ಕಾರ್ಯಕರ್ತೆ ವಾಣಿ, ಶಾಲಾ ಶಿಕ್ಷಣ ಇಲಾಖೆಯ ವಿಶೇಷ ಶಿಕ್ಷಣ ಅಧಿಕಾರಿಗಳಾದ ರಂಜಿತಾ ಹಾಗೂ ಯಶೋಧ ಉಪಸ್ಥಿತರಿದ್ದರು.

**ಸೌಲಭ್ಯ, ಸ್ವಚ್ಛತೆ ಹಾಗೂ ಶಿಷ್ಟಾಚಾರ ಪಾಲನೆಗೆ ಮುಖಂಡರ ಸಲಹೆ; ಪೂರ್ವಭಾವಿ ಸಭೆ ವರದಿ**

# ಅರ್ಥಪೂರ್ಣವಾಗಿ ಸ್ವಾತಂತ್ರ್ಯ ದಿನಾಚರಣೆ : ಜಿಲ್ಲಾಧಿಕಾರಿ ಶ್ರೀರೂಪ

ಚಾಮರಾಜನಗರ: ಜಿಲ್ಲಾಡಳಿತದ ವತಿಯಿಂದ ಎಲ್ಲರ ಸಲಹೆ ಹಾಗೂ ಸಹಕಾರದೊಂದಿಗೆ ಆಗಸ್ಟ್ 15ರಂದು ನಗರದಲ್ಲಿ ಸ್ವಾತಂತ್ರ್ಯ ದಿನಾಚರಣೆಯನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ಜಿಲ್ಲಾಧಿಕಾರಿ ಶ್ರೀರೂಪ ಅವರು ತಿಳಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಸ್ವಾತಂತ್ರ್ಯ ದಿನಾಚರಣೆಯ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

#### ಕಟ್ಟುನಿಟ್ಟಿನ ಸಿದ್ಧತೆಗೆ ಸೂಚನೆ

ರಾಷ್ಟ್ರೀಯ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸಲು ವಿವಿಧ ಸಮಿತಿಗಳನ್ನು ರಚಿಸಲಾಗಿದ್ದು, ಆಯಾ ಸಮಿತಿಗಳ ಅಧಿಕಾರಿಗಳು ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸಲು ಸೂಚಿಸಲಾಗಿದೆ. ಸಾರ್ವಜನಿಕರು ಹಾಗೂ ಸಂಘ-ಸಂಸ್ಥೆಗಳ ಮುಖಂಡರು ನೀಡುವ ಉಪಯುಕ್ತ ಸಲಹೆ-ಅಭಿಪ್ರಾಯಗಳನ್ನು ಪರಿಗಣಿಸಿ ಅಚ್ಚುಕಟ್ಟಾಗಿ ಕಾರ್ಯಕ್ರಮ ರೂಪಿಸಲಾಗುವುದು ಎಂದರು.



ನಗರದ ಡಾ. ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಧ್ವಜಾರೋಹಣ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಅಗತ್ಯ ಸಿದ್ಧತೆ ಕೈಗೊಳ್ಳಲಾಗುತ್ತಿದೆ. ವಿದ್ಯಾರ್ಥಿಗಳಿಗೆ ಸ್ವಾತಂತ್ರ್ಯ ಹೋರಾಟ ಮತ್ತು ದೇಶಪ್ರೇಮ ಬಿಂಬಿಸುವ ರೂಪಕಗಳ ತಾಲೀಮು ನಡೆಸಲಾಗುವುದು. ಕ್ರೀಡಾಂಗಣದಲ್ಲಿ ಶುದ್ಧ ಕುಡಿಯುವ ನೀರು, ವೈದ್ಯಕೀಯ ತಂಡ ಸೇರಿದಂತೆ ಅಗತ್ಯ ಆರೋಗ್ಯ ಸಿಬ್ಬಂದಿಯನ್ನು ನಿಯೋಜಿಸಲಾಗುವುದು. ಯಾವುದೇ ಲೋಪಕ್ಕೆ ಆಸ್ಪದ ನೀಡದಂತೆ ಕಾರ್ಯಕ್ರಮ ಆಯೋಜಿಸಲಾಗುವುದು ಎಂದು ಭರವಸೆ ನೀಡಿದರು.

#### ಸಂಸ್ಥಾಪನಾ ದಿನಾಚರಣೆಗೆ ಮನವಿ

ಸಭೆಯಲ್ಲಿದ್ದ ಸಂಘಟನೆಗಳ ಮುಖಂಡರು ಮಾತನಾಡಿ, "ಚಾಮರಾಜನಗರ ಜಿಲ್ಲೆಯು 1997ರ ಆಗಸ್ಟ್ 15ರಂದು ನೂತನ ಜಿಲ್ಲೆಯಾಗಿ ಉದಯಿಸಿತು. ಹೀಗಾಗಿ ಸ್ವಾತಂತ್ರ್ಯ ದಿನದಂದೇ 'ಜಿಲ್ಲಾ ಸಂಸ್ಥಾಪನಾ ದಿನಾಚರಣೆ'ಯನ್ನು ಸಹ ಅರ್ಥಪೂರ್ಣವಾಗಿ ಆಚರಿಸಬೇಕು" ಎಂದು ಸಲಹೆ ನೀಡಿದರು. ಈ ಪ್ರಸ್ತಾಪವನ್ನು ಪರಿಶೀಲಿಸಿ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ತಿಳಿಸಿದರು.

#### ಕಡ್ಡಾಯ ಆಚರಣೆಗೆ ಆಗ್ರಹ


ಬ್ಯಾಂಕುಗಳು, ಗ್ರಾಮ ಪಂಚಾಯತಿಗಳು, ಹಾಲು ಒಕ್ಕೂಟ ಹಾಗೂ ಎಲ್ಲಾ ಸರ್ಕಾರಿ/ಖಾಸಗಿ ಸಂಸ್ಥೆಗಳಲ್ಲಿ ಕಡ್ಡಾಯವಾಗಿ ಸ್ವಾತಂತ್ರ್ಯ ದಿನ ಆಚರಿಸಲು ಸ್ಪಷ್ಟ ಆದೇಶ ಹೊರಡಿಸಬೇಕು. ಸರ್ಕಾರಿ ಕಚೇರಿಗಳಲ್ಲಿ ದೀಪಾಲಂಕಾರ ಮಾಡಬೇಕು, ನಗರದಾದ್ಯಂತ ವಿಶೇಷ ಸ್ವಚ್ಛತಾ ಕಾರ್ಯಕ್ರಮ ಹಮ್ಮಿಕೊಳ್ಳಬೇಕು ಹಾಗೂ ಸಂಜೆ ಚಾಮರಾಜೇಶ್ವರ ದೇವಾಲಯದ ಮುಂಭಾಗ ದೇಶಭಕ್ತಿ ಬಿಂಬಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಎಂದು ಮುಖಂಡರು ಒತ್ತಾಯಿಸಿದರು.

#### ಗಣ್ಯರ ಉಪಸ್ಥಿತಿ

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಅಇಔ) ಮೋನಾ ರೋತ್, ಡಿವೈಎಸ್ಪಿ ಸ್ನೇಹ ರಾಜ್, ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಂಘಟನಾ ಮುಖಂಡರಾದ ಚಾ.ರಂ. ಶ್ರೀನಿವಾಸಗೌಡ, ಸಿ.ಎಂ. ಕೃಷ್ಣಮೂರ್ತಿ, ಬಸ ವನಪುರ ರಾಜಶೇಖರ್, ಸೋಮಶೇಖರ ಬಿಸಲವಾಡಿ, ರಾಮಸಮುದ್ರ ಸುರೇಶ್, ಮಹೇಶ್ ಗೌಡ, ಜಿ. ಬಂಗಾರು, ಎಲ್.ಸುರೇಶ್, ವೀರಭದ್ರಸ್ವಾಮಿ, ಸಿ.ಎಂ. ನರಸಿಂಹಮೂರ್ತಿ, ಪಣ್ಯದಹುಂಡಿ ರಾಜು, ಶಿವಣ್ಣ ಹೊಸೂರು, ಮಂಜು ಕೋಡಿಉಗನೆ, ಆಲೂರು ನಾಗೇಂದ್ರ, ಮಹದೇವಸ್ವಾಮಿ ಸೇರಿದಂತೆ ಹಲವರು ಭಾಗವಹಿಸಿದ್ದರು.

# ನೆಮ್ಮದಿ ಪ್ರತಿಯೊಬ್ಬರ ಜೀವನಕ್ಕೂ ಬಹಳ ಮುಖ್ಯ : ಎನ್.ಮಹೇಶ್

**ಉತ್ತುವಳ್ಳಿಯಲ್ಲಿ ಹಿರಿಯ ನಾಗರಿಕರ ಆರೈಕೆ ನೆಮ್ಮದಿ ಕೇಂದ್ರ ಉದ್ಘಾಟನೆ । ಬ್ಯಾಂಕ್ ಆಫ್ ಬರೋಡದಿಂದ ನೆಮ್ಮದಿ ಕೇಂದ್ರಕ್ಕೆ ವಾಷಿಂಗ್ ಮಿಷನ್ ಕೊಡುಗೆ**




ಚಾಮರಾಜನಗರ: ಮನಸ್ಸಿನ ಶಾಂತಿ, ನೆಮ್ಮದಿ ಪ್ರತಿಯೊಬ್ಬರ ಜೀವನಕ್ಕೂ ಬಹಳ ಮುಖ್ಯವಾಗಿದೆ ಎಂದು ಮಾಜಿ ಸಚಿವರು, ಬಿಜೆಪಿ ರಾಜ್ಯಾ ಉಪಾಧ್ಯಕ್ಷ ಎನ್.ಮಹೇಶ್ ಹೇಳಿದರು.

ತಾಲೂಕಿನ ಉತ್ತುವಳ್ಳಿ ಕೆಎಸ್ಎಸ್ಐಡಿಸಿ ಲೇಔಟ್ ಹಿಂಭಾಗದಲ್ಲಿ ಆಶ್ರಯ ಸೇವಾ ಚಾರಿಟೇಬಲ್ ಟ್ರಸ್ಟ್, ಫೆವಾರ್ಡ್-ಕ ಹಾಗೂ ಡೀಮ್ ಇಂಡಿಯಾ ನೆಟ್‌ವರ್ಕ್ ಸಹಯೋಗದಲ್ಲಿ ಆರಂಭವಾಗಲಿರುವ ಹಿರಿಯ ನಾಗರೀಕರ ಆರೈಕೆ ನೆಮ್ಮದಿ ಕೇಂದ್ರವನ್ನು ಉದ್ಘಾಟಿಸಿ ಮಾತನಾಡಿದರು.

ಸಾಮಾನ್ಯವಾಗಿ ಇಂತಹ ಆಶ್ರಯಸ್ಥಾನಗಳಿಗೆ ವೃದ್ದಾಶ್ರಮ, ಅನಾಥಾಶ್ರಮ ಎಂದು ಹೆಸರು ಇಡುತ್ತಾರೆ ಆದರೆ ಆಶ್ರಯ ಸೇವಾ ಚಾರಿಟೇಬಲ್ ಟ್ರಸ್ಟ್‌ನ ಅಧ್ಯಕ್ಷ ರಮೇಶ್ ಪ್ರಭು ನೆಮ್ಮದಿ ಎಂದು ಅತ್ಯುತ್ತಮವಾದ ಹೆಸರು ಇಟ್ಟಿದ್ದಾರೆ. ರಮೇಶ್ ಪ್ರಭು ಅವರು ನಿರಾಶ್ರಿತರು, ಮನೆ ಬಿಟ್ಟಿರವರಿಗೆ ನೆಮ್ಮದಿ ಕೊಡುವ ಕೆಲಸ ಮಾಡುತ್ತಿರುವುದು ಒಂದು ಪುಣ್ಯದ ಕೆಲಸವಾಗಿದೆ ಇದಕ್ಕೆ ಎಲ್ಲರ ಸಹಕಾರ ಅಗತ್ಯವಾಗಿದೆ ಎಂದರು.

ನೆಮ್ಮದಿ ಮನೆಯಲ್ಲೂ ಸಾಮರಸ್ಯ ಇದ್ದಾಗ ನೆಮ್ಮದಿ ಇರುತ್ತದೆ. ಹಗಲಿನಲ್ಲಿ ನೆಮ್ಮದಿ ಇಲ್ಲದಿದ್ದರೆ. ರಾತ್ರಿ ಮಲಗುವಾಗ ನೆಮ್ಮದಿ ಸಿಗೋದಿಲ್ಲ ಸಮಾಜದಲ್ಲಿ ನೆಮ್ಮದಿ ಬದುಕು ಆಗಬೇಕಾದರೆ ಪ್ರತಿಯೊಬ್ಬರೂ ಹಗಲಿನಲ್ಲಿ ನೆಮ್ಮದಿ ಅಗತ್ಯ ಅಂತಹ ಕೆಲಸವನ್ನು ಆಶ್ರಯ ಸೇವಾ ಚಾರಿಟೇಬಲ್ ಟ್ರಸ್ಟ್ ಮಾಡುತ್ತಿದೆ ಇದಕ್ಕೆ ಎಲ್ಲರ ಸಹಕಾರ ಅಗತ್ಯವಾಗಿದೆ ಎಂದರು. ಹರವೆ ವಿರಕ್ತಮಠದ ಶ್ರೀಸರ್ಪಭೂಷಣಸ್ವಾಮೀಜಿ, ಚುಂಚನಹಳ್ಳಿ ಮತ್ತು ನವಿಲೂರು ಪಟ್ಟದ ಮಠದ ಚನ್ನಬಸವಸ್ವಾಮೀಜಿ ದಿವ್ಯಸಾನಿಧ್ಯವಹಿಸಿದ್ದರು. ಮಿಮಿಕ್ರಿ ಗೋಪಿ ನಾಮಫಲಕ ಅನಾವರಣಗೊಳಿಸಿದರು. ಚಾಮರಾಜನಗರ ಬ್ಯಾಂಕ್ ಆಫ್ ಬರೋಡ ವ್ಯವಸ್ಥಾಪಕ ಶ್ರೀಧರಮೂರ್ತಿ ನೆಮ್ಮದಿ ಆರೈಕೆ ಕೇಂದ್ರಕ್ಕೆ ವಾಷಿಂಗ್ ಮಿಷನ್ ಕೊಡುಗೆಯಾಗಿ ನೀಡಿದರು. ಫೆವಾರ್ಡ್-ಕ. ಜಿಲ್ಲಾ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟದ ಜಿಲ್ಲಾಧ್ಯಕ್ಷ ಕೆ.ಎನ್.ಮಂಟೇಲಿಂಗಯ್ಯ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ.ಕೆ.ರವಿಕುಮಾರ್, ಪರಿಸರಪ್ರೇಮಿ ವೆಂಕಟೇಶ್, ದಲಿತ ಮಹಾಸಭಾ ರಾಜ್ಯ ಉಪಾಧ್ಯಕ್ಷ ವೆಂಕಟರಮಣಸ್ವಾಮಿ ಪಾಪು, ದೇಬೂರು ಅಶೋಕ್, ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾ ಯುವ ಘಟಕದ ರಾಜ್ಯ ಕಾರ್ಯದರ್ಶಿ ಹೆಚ್.ಎಂ.ಪ್ರಣವ್, ಉದ್ಯಮಿ ಫಣಿರಾಜ್‌ಮೂರ್ತಿ, ಹಾಸ್ಯ ಕಲಾವಿದ ಉಮ್ಮತ್ತೂರು ಬಸವರಾಜು, ಶೋಭಾ, ಭಾಸ್ಕರ್, ಟ್ರಸ್ಟ್ ನ ಗೌರವಾಧ್ಯಕ್ಷ ಗುರುಸ್ವಾಮಿ, ಅಧ್ಯಕ್ಷ ರಮೇಶ್ ಪ್ರಭು, ಮನು, ಸುರೇಶ್‌ನಾಗ್, ಪ್ರಕಾಶ್, ಅಂಬರೀಶ್, ಮಹದೇವಪ್ಪ, ರವಿಕುಮಾರ್, ಗಾಯಿತ್ರಿ, ತ್ರಿವೇಣಿ, ಜಯಮ್ಮ ಹಾಜರಿದ್ದರು.

**ವರ್ತಮಾನ**
**ಜಾಹಿರಾತಿಗೆ ಉತ್ತಮ ಮಾಧ್ಯಮ**

**ಕಾವೇರಿ ನೀರಾವರಿ ನಿಗಮ ನಿಯಮಿತ**
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಕಾನೀನಿನಿ., ಹೇಮಾವತಿ ಅಣೆಕಟ್ಟು ವಿಭಾಗ, ಗೊರೂರು, ಹಾಸನ ಜಿಲ್ಲೆ

**ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 05/2026-27, Date:18.07.2026**

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದ್ಯಾದೇಶ 1999-2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ-2 & ಕೆ.ಡಬ್ಲ್ಯೂ-4ರ ನಿಯಮದನ್ವಯ ಎಗ್ಸಿಕ್ಯುಟಿವ್ ಇಂಜಿನಿಯರ್ ರವರ ಕಚೇರಿ, ಕಾವೇರಿ ನೀರಾವರಿ ನಿಗಮ(ನಿ) ಹೇಮಾವತಿ ಅಣೆಕಟ್ಟು ವಿಭಾಗ, ಗೊರೂರು ರವರು ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ (ನಿ.,) ಬೆಂಗಳೂರು ರವರ ಪರವಾಗಿ KPWD Class-II and above of any State/Central Government/Public Sector organization ನಲ್ಲಿ ನೋಂದಾಯಿತರಾದ ಗುತ್ತಿಗೆದಾರರಿಂದ ದ್ವಿಲಕೋಟೆ ಪದ್ಧತಿಯಲ್ಲಿ ಒಂದು ಕಾಮಗಾರಿಗೆ ಟೆಂಡರ್ ಕರೆಯಲಾಗಿದೆ. ಟೆಂಡರ್ ಮೊತ್ತ ರೂ.381.06ಲಕ್ಷ ಮತ್ತು KPWD Class-III and above of any State/Central Government/Public Sector organization ನಲ್ಲಿ ನೋಂದಾಯಿತರಾದ ಗುತ್ತಿಗೆದಾರರಿಂದ ಏಕಲಕೋಟೆ ಪದ್ಧತಿಯಲ್ಲಿ ಒಂದು ಕಾಮಗಾರಿಗೆ ಟೆಂಡರ್ ಕರೆಯಲಾಗಿದೆ. ಟೆಂಡರ್ ಮೊತ್ತ ರೂ.33.82 ಲಕ್ಷ, EMD ಮತ್ತು ಟೆಂಡರ್ ಪ್ರೊಸೆಸ್ಸಿಂಗ್ ಫೀ ಕೆ.ಪಿ.ಪಿ.ಪೋರ್ಟಲ್ ನಿಯಮಾನುಸಾರ, ಟೆಂಡರ್ ಡಾಕ್ಯುಮೆಂಟ್‌ಗಳನ್ನು ವೆಬ್ ಸೈಟ್ https://kppp.karnataka.gov.in ಮೂಲಕ ದಿನಾಂಕ: 24.07.2026 ರಿಂದ 01.08.2026 ರ ವರೆಗೆ ಪಡೆಯಬಹುದು (Down load), ತಾಂತ್ರಿಕ ಬಿಡ್ ತೆರೆಯುವ ದಿನಾಂಕ 03.08.2026 ರ ಬೆಳಗ್ಗೆ 10.00 ಗಂಟೆಯ ನಂತರ. ಮೇಲಿನ ವಿವರಗಳು ಭವಿಷ್ಯದಲ್ಲಿ ಸಂದರ್ಭೋಚಿತವಾಗಿ ಬದಲಾವಣೆಗೆ ಒಳಪಟ್ಟಿರುತ್ತದೆ. ಹೆಚ್ಚಿನ ವಿವರ ಹಾಗೂ ನಿಬಂಧನೆಗಳಿಗೆ https://kppp.karnataka.gov.in ಅಂತರ್ಜಾಲ ತಾಣದಲ್ಲಿ (ಇಲಾಖೆ) ಅಥವಾ ಹೇಮಾವತಿ ಅಣೆಕಟ್ಟು ವಿಭಾಗ, ಗೊರೂರು ಕಚೇರಿಯಲ್ಲಿ ಕೆಲಸದ ವೇಳೆಯಲ್ಲಿ (ರಜಾದಿನ ಹೊರತುಪಡಿಸಿ) ಪಡೆಯಬಹುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್, ಹೇಮಾವತಿ ಅಣೆಕಟ್ಟು ವಿಭಾಗ, ಕಾನೀನಿನಿ, ಗೊರೂರು

ವಾಸಾಸಂಇ/ಹಿಸನಿ/ಹಾಸನ/352/ಕೆಎಸ್‌ಎಂಸಿಎ/2026-27


# ಮೋದಿ ರಾಜೀನಾಮೆಗೆ ಆಗ್ರಹ



ಮೈಸೂರು: ನೀಟ್ ಪರೀಕ್ಷೆ ಅಕ್ರಮಗಳ ವಿರುದ್ಧ ಹೋರಾಟ ನಡೆಸುತ್ತಿರುವ ವಿದ್ಯಾರ್ಥಿಗಳ ಮೇಲೆ ಅಮಾನುಷ ದೌರ್ಜನ್ಯ ಎಸಗಿರುವ ಪೊಲೀಸರ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು. ನೈತಿಕ ಹೊಣೆ ಹೊತ್ತು ಪ್ರಧಾನಿ ನರೇಂದ್ರ ಮೋದಿ ರಾಜೀನಾಮೆ ನೀಡಬೇಕು ಎಂದು ರಾಜ್ಯ ದಲಿತ ಸಂಘರ್ಷ ಸಮಿತಿ ಲಕ್ಷ್ಮಿನಾರಾಯಣ ನಾಗರವಾರ ಸ್ಥಾಪಿತ ಬಣದ ರಾಜ್ಯ ಸಂಘಟನಾ ಸಂಚಾಲಕ ದೇವಗಳ್ಳಿ ಸೋಮಶೇಖರ್ ಆಗ್ರಹಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ನೀಟ್ ಪರೀಕ್ಷೆ ಪ್ರಶ್ನೆ ಪತ್ರಿಕೆಗಳನ್ನು ಸೋರಿಕೆ ಮಾಡಿ ಆ ಮೂಲಕ ನಿಜವಾದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಅನ್ಯಾಯವೆಸಗಿ ಪ್ರಶ್ನೆಪತ್ರಿಕೆಗಳನ್ನು ಹಣವಂತರಿಗೆ ಮಾರಾಟ ಮಾಡಿಕೊಂಡು ಸಾವಿರಾರು ಕೋಟಿ ರೂ. ಅಕ್ರಮ ಎಸಗಿರುವ ಮತ್ತು ಪರೀಕ್ಷೆಯನ್ನು ಪಾರದರ್ಶಕವಾಗಿ ನಡೆಸಲಾಗದ ಅಸಮರ್ಥ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಬೇಕು. ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿಗಳ ಕುಟುಂಬಕ್ಕೆ ತಲಾ ಒಂದು ಕೋಟಿ ರೂ. ಪರಿಹಾರ ನೀಡಬೇಕು ಎಂದು ಒತ್ತಾಯಿಸಿದರು. ಯುವ ಸಮುದಾಯಗಳ ಬೆಂಬಲದಿಂದಲೇ ಅಧಿಕಾರ ಹಿಡಿದ ಪ್ರಧಾನಿ ನರೇಂದ್ರ ಮೋದಿ ಬೆಂಬಲದಿಂದಲೇ ಅಧಿಕಾರ ಹಿಡಿದ ಪ್ರಧಾನಿ ನರೇಂದ್ರ ಮೋದಿ ಯುವಕರಿಗೆ, ವಿದ್ಯಾರ್ಥಿಗಳಿಗೆ, ಜನಸಾಮಾನ್ಯ ರಿಗೆ ಕೇವಲ ಸುಳ್ಳು ಭರವಸೆ ಮಾತ್ರ ನೀಡಿದ್ದಲ್ಲದೆ, ವಿದ್ಯಾರ್ಥಿ ಸಮೂಹಕ್ಕೆ ಯಾವುದೇ ಉದ್ಯೋಗ ಸೃಷ್ಟಿಸದೇ ದ್ರೋಹವೆಸಗಿದ್ದಾರೆ ಎಂದು ಆರೋಪಿಸಿದರು. ಎಸ್.ಡಿ. ಸಣ್ಣಸ್ವಾಮಿ, ಬೊಕ್ಕಹಳ್ಳಿ ಲಿಂಗಯ್ಯ, ಆಲಗೂಡು ಶಿವಣ್ಣ, ಮೋಹನ್‌ಕುಮಾರ್, ಎಂ. ರಾಜಶೇಖರ್, ಪುಟ್ಟಮಾದಯ್ಯ, ಶಿವಣ್ಣ ನೂರಲಕುಪ್ಪೆ ಮೊದಲಾದವರು ಇದ್ದರು.

# ಬಿಜೆಪಿ ಮುಖಂಡ ರಾಜೇಶ್ ಕೈ ಸೇರ್ಪಡೆ



ಗುಂಡ್ಲುಪೇಟೆ: ತಾಲ್ಲೂಕಿನ ಆಲತ್ತೂರು ಗ್ರಾಮದ ಬಿಜೆಪಿ ಮುಖಂಡ ರಾಜೇಶ್ ಅವರು ಬಿಜೆಪಿ ತೊರೆದು ಕಾಂಗ್ರೆಸ್ ಪಕ್ಷಕ್ಕೆ ಅಧಿಕೃತವಾಗಿ ಸೇರ್ಪ ಡೆಯಾದರು.

ಪಟ್ಟಣದ ಶಾಸಕರ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಾಸಕ ಎಚ್.ಎಂ. ಗಣೇಶ್ ಪ್ರಸಾದ್ ಅವರು ಕಾಂಗ್ರೆಸ್ ಪಕ್ಷದ ಶಾಲು ಹೊದಿಸಿ ರಾಜೇಶ್ ಅವರನ್ನು ಪಕ್ಷಕ್ಕೆ ಆತ್ಮೀಯವಾಗಿ ಬರಮಾಡಿಕೊಂಡರು ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ತತ್ವ-ಸಿದ್ಧಾಂತಗಳನ್ನು ಮೆಚ್ಚಿ ಪಕ್ಷ ಸೇರ್ಪಡೆಯಾಗಿರುವುದಾಗಿ ರಾಜೇಶ್ ತಿಳಿಸಿದರು. ಈ ವೇಳೆ ಮಾತನಾಡಿದ ಶಾಸಕ ಗಣೇಶ್ ಪ್ರಸಾದ್, ಕಾಂಗ್ರೆಸ್ ಪಕ್ಷವು ಜನಪರ ಮತ್ತು ಅಭಿ ವೃದ್ಧಿ ಪರ ಚಿಂತನೆಗಳನ್ನು ಹೊಂದಿದ್ದು, ಪಕ್ಷಕ್ಕೆ ಸೇರ್ಪಡೆಯಾಗುತ್ತಿರುವ ಹೊಸ ಕಾರ್ಯಕರ್ತರು ಸಂಘಟನೆಯ ಬಲವರ್ಧನೆಗೆ ಶ್ರಮಿಸಬೇಕು ಎಂದು ಕರೆ ನೀಡಿದರು. ರಾಜೇಶ್ ಅವರ ಸೇರ್ಪಡೆಯಿಂದ ಆಲತ್ತೂರು ಭಾಗದಲ್ಲಿ ಕಾಂಗ್ರೆಸ್ ಇನ್ನಷ್ಟು ಸದೃಢವಾಗಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಚಾಮುಲ್ ನಿರ್ದೇಶಕ ನಂಜುಂಡಪ್ರಸಾದ್, ಮಾಜಿ ಕಾಡಾ ಅಧ್ಯಕ್ಷ ನಂಜಪ್ಪ ಹಂಗಳ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಿ.ಬಿ. ರಾಜಶೇಖರ್, ಆಲತ್ತೂರು ಜಯರಾಂ, ಎಪಿಎಂಸಿ ನಿರ್ದೇಶಕ ಮಹದೇವಪ್ಪ, ಹಾಪ್‌ಕಾಮ್ಸ್ ಮಾಜಿ ಅಧ್ಯಕ್ಷ ಶಿವಕುಮಾರ್ ಹಂಗಳ, ಮಾಜಿ ತಾ.ಪಂ. ಸದಸ್ಯ ನಾಗರಾಜು, ಲೋಕೇಶ್ ಗೋಪಾ ಲಪುರ ಕಾರ್ಯಕರ್ತರು ಉಪಸ್ಥಿತರಿದ್ದರು.

# ಎಸ್‌ಆರ್ ಡಿಜಿಟಲೀಕರಣ ಪೂರ್ಣಗೊಳಿಸಿ

## ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್ ಸೂಚನೆ । ಜುಲೈ 28ರೊಳಗೆ ಶೇ. 100ರಷ್ಟು ಪ್ರಗತಿ ಸಾಧಿಸಲು ನೋಡಲ್ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ

ಮಡಿಕೇರಿ: ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆಗೆ ಸಂಬಂಧಿಸಿದಂತೆ ಗಣತಿ ನಮೂನೆಯ ಡಿಜಿಟಲೀಕರಣ ಪ್ರಕ್ರಿಯೆಯು ಪ್ರಸ್ತುತ ಶೇ. 80 ರಷ್ಟು ಪೂರ್ಣಗೊಂಡಿದ್ದು, ಇದೇ ಜುಲೈ 28ರೊಳಗೆ ಶೇ. 100 ರಷ್ಟು ಪ್ರಗತಿ ಸಾಧಿಸಬೇಕು ಎಂದು ಜಿಲ್ಲಾಧಿಕಾರಿ ಎಸ್.ಜೆ. ಸೋಮಶೇಖರ್ ಅವರು ನೋಡಲ್ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದ್ದಾರೆ.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಎಸ್‌ಆರ್ ಪ್ರಗತಿ ಪರಿಶೀಲನೆ ಸಂಬಂಧ ನೋಡಲ್ ಅಧಿಕಾರಿಗಳೊಂದಿಗೆ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

**ಅರ್ಹ ಮತದಾರರು ಹೊರಗುಳಿಯದಂತೆ ಎಚ್ಚರ ವಹಿಸಿ**

ಜಿಲ್ಲೆಯಲ್ಲಿ ಎಸ್‌ಆರ್ ಸಂಬಂಧ ಗಣತಿ ನಮೂನೆ ವಿತರಣಾ ಕಾರ್ಯವು ಈಗಾಗಲೇ ಶೇ. 100 ರಷ್ಟು ಪೂರ್ಣಗೊಂಡಿದೆ. ಆದಾಗ್ಯೂ, ಯಾರಾದರೂ ಅರ್ಹ ಮತದಾರರು ಬಿಟ್ಟು ಹೋಗಿದ್ದಲ್ಲಿ ತಕ್ಷಣವೇ ನಮೂನೆ ವಿತರಿಸಿ, ಭರ್ತಿ ಮಾಡಿದ ಅರ್ಜಿಗಳನ್ನು ಪಡೆದು ಡಿಜಿಟಲೀಕರಣಗೊಳಿಸಬೇಕು. ಪ್ರತಿಯೊಬ್ಬ ನೋಡಲ್ ಅಧಿಕಾರಿಯೂ ತಮ್ಮ ವ್ಯಾಪ್ತಿಯಲ್ಲಿ ಈ ಕಾರ್ಯವನ್ನು ಜವಾಬ್ದಾರಿಯಿಂದ ನಿರ್ವಹಿಸಬೇಕು. ಯಾವುದೇ ಅರ್ಹ ಮತದಾರರು ಪಟ್ಟಿಯಿಂದ ಹೊರಗುಳಿಯದಂತೆ ನೋಡಿಕೊಳ್ಳುವುದು ನಮ್ಮ ಪ್ರಮುಖ ಕರ್ತವ್ಯವಾಗಿದೆ ಎಂದು ಎಸ್.ಜೆ. ಸೋಮಶೇಖರ್ ಹೇಳಿದರು.



**ಜಿಲ್ಲೆಯ ಮತದಾರರ ಅಂಕಿ-ಅಂಶಗಳು:**

| | |
|---|---|
| ಒಟ್ಟು ಮತದಾರರು | 4,68,657 (ಎಲ್ಲರಿಗೂ ನಮೂನೆ ವಿತರಿಸಲಾಗಿದೆ) |
| ಈವರೆಗೆ ಡಿಜಿಟಲೀಕರಣಗೊಂಡ ನಮೂನೆಗಳು: | 3,68,524 |
| ಮೃತಪಟ್ಟ ಮತದಾರರು: | 12,323 |
| ಶಾಶ್ವತವಾಗಿ ಸ್ಥಳಾಂತರಗೊಂಡವರು: | 24,676 |
| ಎರಡು ಕಡೆ ಹೆಸರು ಹೊಂದಿರುವವರು: | 3,484 |
| ಗೈರುಹಾಜರಿ ಮತದಾರರು: | 5,339 |
| ಇತರ ಕಾರಣಗಳಿಂದ ನಮೂನೆ ಸಲ್ಲಿಸದವರು: | 75 |

**ಪರಿಷ್ಕರಣೆ ವೇಳಾಪಟ್ಟಿ:**

- **ಮನೆ-ಮನೆ ಭೇಟಿ ಹಾಗೂ ಮತಗಟ್ಟೆ ಪುನರ್ ವಿಂಗಡಣೆ** ಆಗಸ್ಟ್ 08ರವರೆಗೆ
- **ಕರಡು ಮತದಾರರ ಪಟ್ಟಿ ಪ್ರಕಟಣೆ** ಆಗಸ್ಟ್ 17
- **ಹಕ್ಕು ಮತ್ತು ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ** ಆಗಸ್ಟ್ 17 ರಿಂದ ಸೆಪ್ಟೆಂಬರ್ 16
- **ಆಕ್ಷೇಪಣೆಗಳ ವಿಲೇವಾರಿ ಹಂತ** ಆಗಸ್ಟ್ 17 ರಿಂದ ಅಕ್ಟೋಬರ್ 15

**ಗುಣಮಟ್ಟ ಪರಿಶೀಲನೆ ಮತ್ತು ವಿಶೇಷ ಗಮನ**

ಡಿಜಿಟಲೀಕರಣದ ಜೊತೆಗೆ ಮಾಹಿತಿಯ ಗುಣಮಟ್ಟ ಪರಿಶೀಲನೆಯೂ ಅತ್ಯಂತ ಅಗತ್ಯವಾಗಿದೆ. ಜಿಲ್ಲೆಯಲ್ಲಿ ಶಾಶ್ವತವಾಗಿ ಸ್ಥಳಾಂತರಗೊಂಡವರು, ಮೃತಪಟ್ಟವರು, ಎರಡು ಕಡೆ ಹೆಸರು ಹೊಂದಿರುವವರು ಹಾಗೂ ಇತರ ಕಾರಣಗಳಿಂದ ನಮೂನೆ ಸಲ್ಲಿಸದ 45,897 ಮತದಾರರಿದ್ದು, ಈ ಬಗ್ಗೆ ವಿಶೇಷ ಗಮನ ಹರಿಸಿ ಮರುಪರಿಶೀಲನೆ ನಡೆಸಬೇಕು. ಬಿಎಲ್‌ಒ ಹಾಗೂ ಬಿಎಲ್‌ಎಗಳ ಸಭೆ ಕರೆದು, ತಂಡವಾಗಿ ಕೆಲಸ ಮಾಡುವ ಮೂಲಕ ಪ್ರಕ್ರಿಯೆಯನ್ನು ಯಶಸ್ವಿಗೊಳಿಸಬೇಕು ಎಂದು ತಿಳಿಸಿದರು.

**ಅಂತಿಮ ಮತದಾರರ ಪಟ್ಟಿ ಪ್ರಕಟಣೆ: ಅ. 19**

ಸಭೆಯಲ್ಲಿ ನೋಡಲ್ ಅಧಿಕಾರಿಗಳಾದ ಮಂಜುನಾಥ್, ಶೇಖರ್, ಭಾಸ್ಕರ್, ಹೆಚ್. ಆರ್. ರಮೇಶ್, ಮಿಲನ ಭರತ್, ಬಾಲಕೃಷ್ಣ ರೈ, ಆಶಾ, ಗೌರಿ, ಗಿರೀಶ, ಗೋಪಿ, ನಾಚಪ್ಪ, ವಿ.ಟಿ. ವಿಸ್ಮಯಿ, ಕೃಷ್ಣಪ್ರಸಾದ್, ಸಿದ್ಧರಾಜು ಹಾಗೂ ಚುನಾವಣಾ ಶಿರಸ್ತೇದಾರರಾದ ಮಹೇಶ್, ಅನಿಲ್ ಕುಮಾರ್ ಸೇರಿದಂತೆ ಇತರರು ಉಪಸ್ಥಿತರಿದ್ದು, ತಮ್ಮ ತಮ್ಮ ವ್ಯಾಪ್ತಿಯ ಡಿಜಿಟಲೀಕರಣ ಪ್ರಗತಿ ವರದಿ ನೀಡಿದರು.

# ಡಿಕೆಶಿ ಸಿಎಂ ಆಗಿದ್ದು, ಖುಷಿ ಇದೆ

ಮೈಸೂರು: ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗಿರುವುದು ನಾನೇ ಸಿಎಂ ಆದಷ್ಟು ಖುಷಿಯಿದೆ. ಹೀಗಾಗಿ ನನಗೆ ಸಚಿವ ಸ್ಥಾನವೂ ಬೇಡ, ನಾನು ಆಕಾಂಕ್ಷಿಯೂ ಅಲ್ಲ ಎಂದು ಶಾಸಕ ರವಿಗಾಣಿಗ ಹೇಳಿದರು.

ಮೈಸೂರಿನ ಚಾಮುಂಡಿ ಬೆಟ್ಟದಲ್ಲಿ ಚಾಮುಂಡೇಶ್ವರಿ ದರ್ಶನ ಪಡೆದು ಮಾತನಾಡಿದ ಅವರು, ಆಷಾಢ ಚಾಮುಂಡೇಶ್ವರಿಗೆ ಪವಿತ್ರ ದಿನ ಆಗಿರುವುದರಿಂದ ಭೇಟಿ ನೀಡಿದ್ದೇನೆ. ಯಾವ ದುಷ್ಟ ಶಕ್ತಿಗಳು ಡಿ.ಕೆ.ಶಿವಕುಮಾರ್ ಅವರ ಆಡಳಿತಕ್ಕೆ ಅಡ್ಡ ಆಗುವುದು ಬೇಡ ಸುಸೂತ್ರವಾಗಿ ಎರಡು ವರ್ಷ ಆಡಳಿತ ನಡೆಸಲಿ. ರಾಜ್ಯದಲ್ಲಿ ಮಳೆ, ಬೆಳೆ ಅಗಲಿ ಎಂದು ಪ್ರಾರ್ಥಿಸಿದ್ದೇನೆ. ಚೆಲುವರಾಯಸ್ವಾಮಿ ಮೂರು ವರ್ಷ ಸಚಿವರಾಗಿ ಒಳ್ಳೆ ಕೆಲಸ ಮಾಡಿದ್ದು, ಅವರು ಕೇಳುತ್ತಿದ್ದಾರೆ ಅವರಿಗೂ ಕೊಡಿ. ರಮೇಶ್ ಬಂಡಿಸಿದ್ದೇಗೌಡ ಮೂರು ಬಾರಿ ಶಾಸಕರಾಗಿದ್ದು ಅವರು ಕೇಳುತ್ತಿದ್ದು, ಅವರಿಗೂ ಕೊಡಿ. ನರೇಂದ್ರಸ್ವಾಮಿಯವರು ಸಹ ಹಿರಿಯರಿದ್ದು ಅವರಿಗೂ ಕೊಡಿ ಎಂದರು.



ಒಕ್ಕಲಿಗರು ಮಂತ್ರಿ ಸ್ಥಾನ ಕೇಳುವ ಕುರಿತು ಪ್ರತಿಕ್ರಿಯಿಸಿ ಒಕ್ಕಲಿಗ ಸಮುದಾಯದವರೇ ಮುಖ್ಯಮಂತ್ರಿಯಾಗಿದ್ದಾರೆ. ಹೀಗಾಗಿ ನಮ್ಮ ಸಮುದಾಯದವರು ಮಂತ್ರಿ ಸ್ಥಾನಕ್ಕಾಗಿ ಕಾಟ ಕೊಡುವುದು ಸರಿಯಲ್ಲ. ವಿಶಾಲ ಮನೋ ಭಾವನೆ ಬೆಳೆಸಿಕೊಂಡು ಬೇರೆಯವರಿಗೆ ಅವಕಾಶ ಕೊಡಬೇಕಿದೆ. ನಮ್ಮ ಸಮುದಾಯದವರು ಮುಖ್ಯಮಂತ್ರಿ ಆಗಿರುವಾಗ ಬೇರೆ ಸಮುದಾಯದವರಿಗೆ ಅವಕಾಶ ನೀಡಬೇಕು. ಈ ವೇಳೆ ನನ್ನನ್ನು ಮಾಡಿ ಎಂದು ರಂಪ ರಾಮಾಯಣ ಮಾಡುವುದು ಸರಿಯಲ್ಲ ಎಂದರು. ಕೆಪಿಎಸ್ ಸಿ, ನೀಟ್ ಅಕ್ರಮದ ರೂವಾರಿಗಳನ್ನು ಒಳಗೆ ಹಾಕಬೇಕು. ಪ್ರಧಾನಿ ನರೇಂದ್ರ ಮೋದಿ ಪ್ರತಿಷ್ಠೆಯಾಗಿ ನೀಟ್ ಅಕ್ರಮ ಪರಿಗಣಿಸಬಾರದು. ನಡೆಯುತ್ತಿರುವ ಪ್ರತಿಭಟನೆ ಕೇಂದ್ರ ಸರ್ಕಾರಕ್ಕೆ ಎಚ್ಚರಿಕೆಯ ಗಂಟೆಯಾಗಿದೆ. ಕೇಂದ್ರ ಸಚಿವರ ರಾಜೀನಾಮೆ ಪಡೆಯಿರಿ, ಅವರ ತಪ್ಪಿಲ್ಲ ಎಂದಾದರೆ ಮತ್ತೆ ಸೇರಿಸಿಕೊಳ್ಳಿ ಅದನ್ನು ಬಿಟ್ಟು ಆನೆ ನಡೆದಿದ್ದೇ ದಾರಿ ಎಂಬಂತೆ ಇರುವುದು ಸರಿಯಲ್ಲ. ಒಬ್ಬರ ರಾಜೀನಾಮೆಯಿಂದ ನಿಮ್ಮ ಸರ್ಕಾರ ಬೀಳಲ್ಲ, ಕಳಂಕವೂ ಆಗಲ್ಲ. ವಿದ್ಯಾರ್ಥಿಗಳ ಭಾವನೆಗೆ ಬೆಲೆ ಕೊಡಿ ಒಂದು ಸಾಮಾಜಿಕ ಸಂದೇಶಕ್ಕೆ ಇಷ್ಟೊಂದು ಜನ ಸೇರಿದ್ದಾರೆಂದರೆ ಅವರ ಶಕ್ತಿ ಏನೂ ಎಂಬುದು ಅರ್ಥ ಮಾಡಿಕೊಳ್ಳಿ ಎಂದರು.

ಜಿರಳೆಗಳ ಜತೆ ತಿಗಣೆ ಸೇರಿವೆ ಎಂಬ ಹೇಳಿಕೆ ಕುರಿತು ಪ್ರತಿಕ್ರಯಿಸಿ, ತಿಗಣೆ ಒಮ್ಮೆ ಕಚ್ಚಿದರೆ ರಾತ್ರಿಯೆಲ್ಲಾ ನಿದ್ದೆ ಕೊಡಲ್ಲ. ಅದರ ಶಕ್ತಿ ಏನೆಂಬುದು ಅರಿವಿರಲಿ. ಯುವ ಸಮುದಾಯದ ಮತ ಪಡೆದು ಅಧಿಕಾರಕ್ಕೇರಿದ್ದೀರಿ ಅವರ ಭಾವನೆಗೆ ಬೆಲೆ ಕೊಡುವುದು ಕಲಿಯಿರಿ ಎಂದರು.

# ಆಹಾರ, ನೀರಿಗೆ ಆದ್ಯತೆ ನೀಡಿ

ಗುಂಡ್ಲುಪೇಟೆ: ಬರ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸಲು ಕುಡಿಯುವ ನೀರು, ಜಾನುವಾರುಗಳಿಗೆ ಮೇವು ಹಾಗೂ ಸಾರ್ವಜನಿಕ ಆರೋಗ್ಯಕ್ಕೆ ಮೊದಲ ಆದ್ಯತೆ ನೀಡಬೇಕು ಎಂದು ಶಾಸಕ ಎಚ್.ಎಂ. ಗಣೇಶ್ ಪ್ರಸಾದ್ ಅಧಿಕಾರಿಗಳಿಗೆ ಸೂಚಿಸಿದರು.

ಪಟ್ಟಣದ ತಾಲೂಕು ಕಚೇರಿ ಸಭಾಂಗಣದಲ್ಲಿ ಅವರ ಅಧ್ಯಕ್ಷತೆಯಲ್ಲಿ ನಡೆದ ತಾಲೂಕು ಮಟ್ಟದ ವಿಪತ್ತು ನಿರ್ವಹಣಾ ಸಮಿತಿ ಸಭೆಯಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳಿಂದ ಬರ ಪರಿಸ್ಥಿತಿ, ಬೆಳೆ ನಷ್ಟ, ಕುಡಿಯುವ ನೀರು, ಮೇವು ಹಾಗೂ ಆರೋಗ್ಯ ಇಲಾಖೆಯ ಸಿದ್ಧತೆ ಕುರಿತು ಮಾಹಿತಿ ಪಡೆದು ಅವರು ಮಾತನಾಡಿದರು.

ಕುಡಿಯುವ ನೀರಿನ ಸಮಸ್ಯೆ ಯಾವುದೇ ಗ್ರಾಮದಲ್ಲೂ ಉಂಟಾಗದಂತೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಕ್ರಮವಹಿಸಬೇಕು. ಅಗತ್ಯವಿರುವ ಕಡೆ ಹೊಸ ಬೋರ್ವೆಲ್ಲ್‌ಗಳನ್ನು ಕೊರೆಸಬೇಕು. ಗ್ರಾಮಗಳಲ್ಲಿನ ಮೇಲ್ಮಟ್ಟದ ನೀರಿನ ಟ್ಯಾಂಕ್‌ಗಳನ್ನು ನಿಯಮಿತವಾಗಿ ಸ್ವಚ್ಛಗೊಳಿಸಿ ಕಡ್ಡಾಯವಾಗಿ ಕ್ಲೋರಿನೇಷನ್ ಮಾಡಬೇಕು. ಚರಂಡಿಗಳಲ್ಲಿ ನೀರು ನಿಲ್ಲದಂತೆ ನೋಡಿಕೊಂಡು ಗ್ರಾಮಗಳಲ್ಲಿ ಸ್ವಚ್ಛತೆ ಕಾಪಾಡಬೇಕು ಎಂದು ನಿರ್ದೇಶಿಸಿದರು.

ಕೃಷಿ ಇಲಾಖೆ ಅಧಿಕಾರಿ ಶಶಿಧರ್ ಮಾತನಾಡಿ, ಮುಂಗಾರು ಹಂಗಾಮಿನ ಬೆಳೆ ವಿಮೆ ಪರಿಹಾರದ ಕುರಿತು ಮಾಹಿತಿ ನೀಡಿದರು. ಮಳೆಯಾಶ್ರಿತ ಜೋಳ ಬೆಳೆಗೆ 2,012 ರೈತರು 2,606.78 ಎಕರೆ



ಪ್ರದೇಶದಲ್ಲಿ ನೋಂದಣಿ ಮಾಡಿಕೊಂಡಿದ್ದು, ಮೊದಲ ಹಂತದಲ್ಲಿ ಶೇ.25ರಂತೆ ಪ್ರತಿ ಎಕರೆಗೆ 4,492 ರೂ .ಪರಿಹಾರವನ್ನು ಒಂದೇ ಕಂತಿನಲ್ಲಿ ಪಾವತಿಸಲಾಗುವುದು. ಸೂರ್ಯಕಾಂತಿ ಬೆಳೆಗೆ 7,912 ರೈತರು 8,926.48 ಎಕರೆ ಪ್ರದೇಶದಲ್ಲಿ ನೋಂದಣಿ ಮಾಡಿಕೊಂಡಿದ್ದು, ಮೊದಲ ಹಂತದಲ್ಲಿ ಶೇ.25ರಷ್ಟು ಪರಿಹಾರ ನೀಡಲಾಗು ವುದು. ಇಳುವರಿ ಅಂದಾಜು ಪ್ರಯೋಗಗಳ ಬಳಿಕ ಉಳಿದ ಶೇ.75ರಷ್ಟು ಪರಿಹಾರ ಬಿಡುಗಡೆ ಮಾಡಲಾಗುವುದು. ತಾಲೂಕಿನಲ್ಲಿ ಬೆಳೆ ನಷ್ಟ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಜಂಟಿ ಸರ್ವೇ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು ಎಂದರು. ತೋಟಗಾರಿಕೆ ಇಲಾಖೆ ಅಧಿಕಾರಿ ಭಾಸ್ಕರ್, ಪಶುಸಂಗೋಪನಾ ಇಲಾಖೆ ಸಹಾಯಕ ನಿರ್ದೇಶಕ ಮಾದೇಶ್ ಮಾತನಾಡಿದರು. ಸಭೆಯಲ್ಲಿ ತಹಶೀಲ್ದಾರ್ ಎಂ.ಎಸ್. ತನ್ಮಯ್, ಕಾರ್ಯ ನಿರ್ವಾಹಕ ಅಧಿಕಾರಿ ಷಣ್ಮುಗಂ, ಇಂಜಿನಿಯರ್ ಅನೂಫ್, ಸಿಡಿಪಿಒ ಹೇಮಾವತಿ, ಕಾವೇರಿ ನೀರಾವರಿ ನಿಗಮದ ಎಇಇ ಮಹೇಶ್, ಕೆಇಬಿ ಎಇಇ ಸಿದ್ದಲಿಂಗಪ್ಪ ಉಪಸ್ಥಿತರಿದ್ದರು.

**ನೀಟ್ ಪರೀಕ್ಷೆಯಿಂದ ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿಗಳ ಕುಟುಂಬಕ್ಕೆ 2 ಕೋಟಿ ಪರಿಹಾರ ನೀಡುವಂತೆ ಶ್ರೀನಿವಾಸಗೌಡ ಆಗ್ರಹಿಸಿ ಪ್ರತಿಭಟನೆ**

# ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆಗೆ ಒತ್ತಾಯ

ಚಾಮರಾಜನಗರ, ನೀಟ್ ಪರೀಕ್ಷೆಯಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆ ಮಾಡಿರುವ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯನ್ನು ವಿಧಿಸಿ, ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿ ಕರ್ನಾಟಕ ಸೇನಾಪಡೆ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.ನಗರದ ಭುವನೇಶ್ವರಿ ವೃತ್ತದಲ್ಲಿ ಜಮಾಯಿಸಿದ ಪ್ರತಿಭಟನಾನಿರತರು ಕೇಂದ್ರ

ಸರ್ಕಾರ, ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆ ನೇತೃತ್ವ ವಹಿಸಿದ್ದ ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ ಶ್ರೀನಿವಾಸ್ ಗೌಡ ಮಾತನಾಡಿ, ಕೇಂದ್ರ ಸರ್ಕಾರ ವಿದ್ಯಾರ್ಥಿಗಳ ಭವಿಷ್ಯದ ಜೊತೆ ಚೆಲ್ಲಾಟ ಆಡುತ್ತಿದೆ. ಇದು ನಿಜವಾಗಲು ಅತ್ಯಂತ ಖಂಡನೀಯವಾದದ್ದು. ಇಡೀ ದೇಶಾದ್ಯಂಕ ಬಹಳ ದೊಡ್ಡ ಮಟ್ಟದಲ್ಲಿ ಹೋರಾಟ ನೀಟ್ ಪರೀಕ್ಷೆ ವಿಚಾರದಲ್ಲಿ ನಡೆಯುತ್ತಿದೆ. ನೀಟ್ ಪರೀಕ್ಷೆಯ ಪಶ್ನೆಪತ್ರಿಕೆ ಮೂರು ಬಾರಿ ಸೋರಿಕೆಯಾಗಿದ್ದು, ಅನೇಕ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂ



ಡಿದ್ದಾರೆ. ಇದಕ್ಕೆ ನೇರಹೊಣೆ ಕೇಂದ್ರ ಸರ್ಕಾರವಾಗಿದೆ ಎಂದು ಆರೋಪಿಸಿದರು.

ದೇಶಾದ್ಯಂತ ವಿದ್ಯಾರ್ಥಿ ಸಂಘಟನೆಗಳು ಬಹಳ ದೊಡ್ಡಮಟ್ಟದಲ್ಲಿ ಹೋರಾಟ ಮಾಡುತ್ತಿದ್ದರೂ ಸಹ ಕೇಂದ್ರ ಸರ್ಕಾರ ಯಾವುದೇ ಕ್ರಮಕೈಗೊಂಡಿಲ್ಲ ಇದರ ನೈತಿಕ ಹೊಣೆಹೊತ್ತು ಕೇಂದ್ರ ಶಿಕ್ಷಣ ಸಚಿವರು ರಾಜೀನಾಮೆ ನೀಡಬೇಕಾಗಿತ್ತು. ಇನ್ನೂ ಕೊಟ್ಟಿಲ್ಲ. ಕೇಂದ್ರ ಸರ್ಕಾರ ಯಾವ ಉದ್ದೇಶಕ್ಕಾಗಿ ಶಿಕ್ಷಣ ಸಚಿವರನ್ನು ಉಳಿಸಿಕೊಂಡಿದ್ದೀರಿ ನಿಮಗೆ ಗೌರವ ಇಲ್ಲವೇ ವಿದ್ಯಾರ್ಥಿಗಳ ಭವಿಷ್ಯವನ್ನು ಏನೆಂದು ತಿಳಿದುಕೊಂಡಿದ್ದೀರಿ ನೀವು? ಕೇಂದ್ರದಲ್ಲಿ ಅಧಿಕಾರಕ್ಕೆ ಬರಲು ವಿದ್ಯಾರ್ಥಿಗಳೇ ಕಾರಣವಾಗಿದೆ ಇಂತಹ ವಿದ್ಯಾರ್ಥಿಗಳ ಮೇಲೆ ಮಾರಣಶಾಸನ ಬರೆಯಲು ಕೇಂದ್ರ ಸರ್ಕಾರ ಹೊರಟಿದೆ ಎಂದು ದೂರಿದರು.

ಕೇಂದ್ರ ಸರ್ಕಾರಕ್ಕೆ ವಿದ್ಯಾರ್ಥಿಗಳ ಮೇಲೆ ಗೌರವ ಇದ್ದರೆ ಶಿಕ್ಷಣ ಸಚಿವರಿಂದ ರಾಜೀನಾಮೆ ಪಡೆಯಬೇಕಿತ್ತು. ಪ್ರತಿಭಟನಾನಿರತ ವಿದ್ಯಾರ್ಥಿಗಳಿಂದ ಪ್ರಧಾನಿಗಳು ಮನವಿ ಸ್ವೀಕರಿಸಿ, ವಿದ್ಯಾರ್ಥಿಗಳಿಗೆ ಬೆಂಬಲ ನೀಡಬೇಕಿತ್ತು. ಅದನ್ನು ಬಿಟ್ಟು ಇನ್ನೂ ನಾಟಕ ಆಡುತ್ತಾ ಕುಳಿತಿದ್ದೀರಾ ? ವಿದ್ಯಾರ್ಥಿಗಳು ಮುಂದಿನ ದಿನಗಳಲ್ಲಿ ನಿಮಗೆ ತಕ್ಕಪಾಠ ಕಲಿಸಿ ನಿಮ್ಮನ್ನು ಮನೆಗೆ ಕಳುಹಿಸುತ್ತಾರೆ. ನೀಟ್ ಪರೀಕ್ಷೆಯಿಂದ ಆತ್ಮಹತ್ಯೆ ಮಾಡಿಕೊಂಡಿರುವ ಕುಟುಂಬಕ್ಕೆ ಕನಿಷ್ಠ 2 ಕೋಟಿ ರೂ. ಪರಿಹಾರ ನೀಡಬೇಕು. ಕೇಂದ್ರ ಶಿಕ್ಷಣ ಸಚಿವರಿಂದ ರಾಜೀನಾಮೆ ಪಡೆಯಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಕಂಡಕ್ಟರ್ ಚಾ.ಸಿ.ಸೋಮನಾಯಕ ಪಣ್ಯದಹುಂಡಿ ರಾಜು, ಆಟೋ ಲಿಂಗರಾಜು, ಪೂರ್ಣನಂದ, ಸಿ.ಎಂ.ನರಸಿಂಹಮೂರ್ತಿ, ರವಿಚಂದ್ರ ಪ್ರಸಾದ್ ಕಹಳೆ, ರಾಚಪ್ಪ, ಅಮಚವಾಡಿ ರಾಜು, ಶಿವು, ಮರಿಯಾಲಹುಂಡಿ ಕುಮಾರ್, ತಾಂಡವ ಮೂರ್ತಿ, ವೀರಭದ್ರ ಇತರರು ಭಾಗವಹಿಸಿದ್ದರು.

**ಬಂಡೀಪುರ ಅಭಯಾರಣ್ಯಕ್ಕೆ ಅತಿಕ್ರಮ ಪ್ರವೇಶ**

# ಇಬ್ಬರಿಗೆ 25 ಸಾವಿರ ರೂ. ದಂಡ

ಗುಂಡ್ಲುಪೇಟೆ: ತಾಲೂಕಿನ ಬಂಡೀಪುರ ಅಭಯಾರಣ್ಯಕ್ಕೆ ಅಕ್ರಮ ಪ್ರವೇಶ ಮಾಡಿದ್ದ ಇಬ್ಬರು ವ್ಯಕ್ತಿಗಳಿಗೆ ಅರಣ್ಯ ಇಲಾಖೆ 25 ಸಾವಿರ ರೂ. ದಂಡ ವಿಧಿಸಿ, ಮುಚ್ಚಳಿಕೆ ಪತ್ರ ಬರೆಸಿಕೊಂಡಿದೆ.



ತಮಿಳುನಾಡು ಮೂಲದ ಬೈಕ್ ಸವಾರರಿಗೆ ದಂಡ ವಿಧಿಸಿದ್ದು, ಇಬ್ಬರು ಬಂಡೀಪುರದ ನಿಷೇಧಿತ ಸಫಾರಿ ಮಾರ್ಗವಾಗಿ ಅತಿಕ್ರಮ ಪ್ರವೇಶ ಮಾಡಿದ್ದು, ಇದನ್ನು ಗಮನಿಸಿದ ಸ್ಥಳೀಯರು ಅರಣ್ಯಾಧಿಕಾರಿಗಳಿಗೆ ಮಾಹಿತಿ ತಿಳಿಸಿದ್ದರು. ಈ ಸುದ್ದಿಯೂ ಸಹ ಮಾಧ್ಯಮದಲ್ಲಿಯೂ ಪ್ರಕಟವಾಗಿತ್ತು. ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಸಿಎಫ್ ನಂದೀಶ್ ಅವರ ನಿರ್ದೇಶನದಂತೆ ಅಧಿಕಾರಿಗಳ ತಂಡ ಅರಣ್ಯದೊಳಗೆ ಅಕ್ರಮ ಪ್ರವೇಶ ಮಾಡಿದ್ದ ತಮಿಳುನಾಡು ಮೂಲದ ಇಬ್ಬರು ವ್ಯಕ್ತಿಗಳನ್ನು ಕರೆಸಿ 25 ಸಾವಿರ ರೂ. ದಂಡ ವಿಧಿಸುವ ಜೊತೆಗೆ ಮುಚ್ಚಳಿಕೆ ಪತ್ರ ಬರೆಸಿಕೊಂಡು, ಮತ್ತೊಮ್ಮೆ ಕಾಡಿಗೆ ಅತಿಕ್ರಮ ಪ್ರವೇಶ ಮಾಡದಂತೆ ಎಚ್ಚರಿಕೆ ನೀಡಿದ್ದಾರೆ.

# ನೇರ ಫೋನ್ ಇನ್ ಕಾರ್ಯಕ್ರಮದಲ್ಲಿ 33 ದೂರು ದಾಖಲು

### ತ್ವರಿತವಾಗಿ ಸಮಸ್ಯೆ ಪರಿಹರಿಸಲು ಜಿಲ್ಲಾಧಿಕಾರಿ ಶ್ರೀರೂಪ ಸೂಚನೆ

ಚಾಮರಾಜನಗರ, ಸಾರ್ವಜನಿಕರ ಕುಂದು ಕೊರತೆಗಳನ್ನು ಆಲಿಸಿ ಪರಿಹರಿಸುವ ಉದ್ದೇಶದಿಂದ ಜಿಲ್ಲಾಡಳಿತದಿಂದ ಇಂದು ನಡೆದ ನೇರ ಫೋನ್ ಇನ್ ಕಾರ್ಯಕ್ರಮದಲ್ಲಿ ಒಟ್ಟು 33 ದೂರುಗಳು ದಾಖಲಾದವು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ಜಿಲ್ಲಾಧಿಕಾರಿ ಶ್ರೀರೂಪ ಅವರ ನೇತೃತ್ವದಲ್ಲಿ ನಡೆದ ನೇರ ಫೋನ್ ಇನ್ ಕಾರ್ಯಕ್ರಮದಲ್ಲಿ ಜಿಲ್ಲೆಯ ವಿವಿಧ ಭಾಗಗಳಿಂದ ಜನತೆ ಕರೆ ಮಾಡಿ ತಮ್ಮ ಅಹವಾಲು, ಸಮಸ್ಯೆಗಳನ್ನು ಹೇಳಿಕೊಂಡರು.



ಯಳಂದೂರಿನ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರಿಗೆ ಕುಳಿತುಕೊಳ್ಳಲು ಆಸನಗಳು ಇಲ್ಲ, ಹಿರಿಯ ನಾಗರಿಕರು, ಮಹಿಳೆಯರು ಪರಿತಪಿಸುವಂತಾಗಿದೆ. ಶೀಘ್ರವೇ ಬಸ್ ನಿಲ್ದಾಣದಲ್ಲಿ ಕುರ್ಚಿಗಳ ವ್ಯವಸ್ಥೆ ಮಾಡುವಂತೆ ಬಿಳಿಗಿರಿರಂಗನಬೆಟ್ಟದ ನಿವಾಸಿಯೊಬ್ಬರು ಮನವಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿಗಳು ಸೂಕ್ತ ಸೌಲಭ್ಯ ಕಲ್ಪಿಸಲು ಸೂಚಿಸಲಾಗುವುದು ಎಂದರು. ನಗರದ ವಿನಾಯಕ ಲೇಔಟ್ ನಿಂದ ಮಹಿಳೆಯೊಬ್ಬರು ಕರೆ ಮಾಡಿ ನಗರಸಭೆ ವತಿಯಿಂದ ಬಡಾವಣೆಗೆ ಕಸ ಸಂಗ್ರಹಣೆಗೆ ಬರುತ್ತಿಲ್ಲ. ಚರಂಡಿಗಳಲ್ಲಿ ನೀರು ತುಂಬಿದೆ. ಕುಡಿಯುವ ನೀರಿನ ಸಮಸ್ಯೆಯು ಇದೆ ಎಂದು ಅಹವಾಲು ಹೇಳಿಕೊಂಡರು. ಜಿಲ್ಲಾಧಿಕಾರಿಯವರು ಮಾತನಾಡಿ ನಗರಸಭೆ ಆಯುಕ್ತರನ್ನು ನಿಮ್ಮ ಬಡಾವಣೆಗೆ ಕಳುಹಿಸಿ ಸಮಸ್ಯೆ ಪರಿಹಾರಕ್ಕೆ ಕ್ರಮ ತೆಗೆದುಕೊಳ್ಳಲಾಗುತ್ತದೆ ಎಂದು ತಿಳಿಸಿದರು.

ನಾಗವಳ್ಳಿ ನಿವಾಸಿಯೊಬ್ಬರು ವಾಹನ ನಿಲುಗಡೆ ಎಲ್ಲೆಂದರಲ್ಲಿ ಮಾಡುತ್ತಿರುವುದರಿಂದ ಓಡಾಟಕ್ಕೆ ತೊಂದರೆಯಾಗುತ್ತಿದೆ. ಶಾಲಾ ಕಾಲೇಜು ಸಮಯದಲ್ಲಿ ಪೋಷಕರು ಸಹ ಏಕಮುಖ ಸಂಚಾರದಲ್ಲಿ ವಿರುದ್ಧವಾದ ದಿಕ್ಕಿನಿಂದ ವಾಹನಗಳನ್ನು ಚಲಾಯಿಸುತ್ತಿದ್ದು, ಸಂಚಾರಿ ನಿಯಮಗಳನ್ನು ಪಾಲನೆ ಮಾಡುತ್ತಿಲ್ಲ. ಈ ಬಗ್ಗೆ ಹೆಚ್ಚು ನಿಗಾವಹಿಸಬೇಕಿದೆ ಎಂದರು. ಹಿರಿಯ ಪೊಲೀಸ್ ಅಧಿಕಾರಿಗಳು ಫೋನ್ ಇನ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದಾರೆ. ನೀವು ಪ್ರಸ್ತಾಪಿಸಿರುವ ಎಲ್ಲ ವಿಷಯಗಳ ಬಗ್ಗೆ ಕ್ರಮವಹಿಸಲಿದ್ದಾರೆ. ಎಂದು ಜಿಲ್ಲಾಧಿಕಾರಿಯವರು ಹೇಳಿದರು. ಯರಿಯೂರು ಗ್ರಾಮದ ನಿವಾಸಿಯೊಬ್ಬರು ಕರೆ ಮಾಡಿ ರಾಷ್ಟ್ರೀಯ ಹೆದ್ದಾರಿಯಲ್ಲಿ ರಸ್ತೆ ವಿಭಜಕ, ಹಂಪ್ಸ್ ಗಳನ್ನು ಅಗತ್ಯವಿರುವೆಡೆ ಅಳವಡಿಸದೆ ಇರುವ ಕಾರಣದಿಂದ ಅಪಘಾತಗಳು ಸಂಭವಿಸುತ್ತಿವೆ. ವಾಹನ ಸಂಚಾರರಿಗೆ ಮಾರ್ಗದರ್ಶನ ಮಾಡುವ ಫಲಕಗಳು ಇಲ್ಲ ಎಂದು ಗಮನಸೆಳೆದರು. ಇದಕ್ಕೆ ಉತ್ತರಿಸಿದ ಜಿಲ್ಲಾಧಿಕಾರಿಯವರು ನಾನು ಸಹ ಗಮನಿಸಿದ್ದೇನೆ. ಅಧಿಕಾರಿಗಳಿಗೆ ಈ ಬಗ್ಗೆ ಸೂಚಿಸಿದ್ದೇನೆ. ಮುಂದಿನ ಒಂದು ತಿಂಗಳೊಳಗೆ ಈ ಎಲ್ಲಾ ಅಳವಡಿಕೆ ಕಾಮಗಾರಿ ಕೆಲಸವನ್ನು ಪೂರ್ಣಗೊಳಿಸಲಾಗುವುದೆಂದರು.

ಇರಸವಾಡಿ ಗ್ರಾಮದ ಪ್ರಾಥಮಿಕ ಸರ್ಕಾರಿ ಶಾಲೆಯಲ್ಲಿ ಶೌಚಾಲಯವಿಲ್ಲ, ಊರಿನ ಚರಂಡಿಯ ಡೆಕ್ ಕುಸಿದಿರುವುದರಿಂದ ನೀರು ಸರಾಗವಾಗಿ ಹರಿಯುತ್ತಿಲ್ಲ, ಇರಸವಾಡಿ ಹಾಗೂ ಪಕ್ಕದ ಗ್ರಾಮದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡಲಾಗುತ್ತಿದೆ ಎಂದು ಸ್ಥಳೀಯರೊಬ್ಬರು ಹೇಳಿದರು. ಈ ಬಗ್ಗೆ ಪ್ರತಿಕ್ರಿಯಿಸಿದ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಅವರು ಪಂಚಾಯಿತಿ ವತಿಯಿಂದ ದುರಸ್ಥಿಗೆ ಅಗತ್ಯಕ್ರಮ ತೆಗೆದುಕೊಳ್ಳಲಾಗುತ್ತದೆ ಎಂದರು. ಅಕ್ರಮ ಮದ್ಯ ಮಾರಾಟ ತಡೆಗೆ ಅಬಕಾರಿ ಇಲಾಖೆ ಅಧಿಕಾರಿಗಳಿಗೆ ಸುಚಿಸಲಾಗುತ್ತದೆ ಎಂದು ಜಿಲ್ಲಾಧಿಕಾರಿ ಶ್ರೀರೂಪ ಅವರು ತಿಳಿಸಿದರು. ಜಮೀನಿನ ಖಾತೆ, ಜಮೀನಿಗೆ ಓಡಾಡುವ ದಾರಿಯಲ್ಲಿ ಒತ್ತುವರಿ, ಬಸ್ ತಂಗುದಾಣ, ಪೈಪ್ ಲೈನ್ ಸರಿಪಡಿಸುವಿಕೆ, ರಸ್ತೆ ದುರಸ್ತಿ, ಸಿಮ್ಸ್ ಆಸ್ಪತ್ರೆಗೆ ರಾತ್ರಿ ವೇಳೆಯ ಸಮರ್ಪಕ ಬಸ್‌ಸೇವೆ, ನಗರದ ಡಾ. ಬಿ.ಆರ್. ಅಂಬೇಡ್ಕರ್ ಉದ್ಯಾನವನದಲ್ಲಿ ಸ್ವಚ್ಛತೆ, ಸಂತೇಮರಹಳ್ಳಿಯಲ್ಲಿ ಕಬಿನಿ ಚಾನಲ್‌ಗೆ ತಡೆಗೋಡೆ ನಿರ್ಮಾಣ, ಬಹಿಷ್ಕಾರ, ಗುಂಡ್ಲುಪೇಟೆ ಭಾಗದಲ್ಲಿ ಸಮರ್ಪಕ ವಿದ್ಯುತ್ ಪೂರೈಕೆ ಸೇರಿದಂತೆ ಇನ್ನಿತರ ಹಲವು ದೂರುಗಳು ಹಾಗೂ ವೈಯಕ್ತಿಕ ಸಮಸ್ಯೆಗಳನ್ನು ಪರಿಹರಿಸಲು ಸಾರ್ವಜನಿಕರಿಂದ ಮನವಿ ಬಂದವು.

ಕಾರ್ಯಕ್ರಮದ ಬಳಿಕ ಅಧಿಕಾರಿಗಳನ್ನುದ್ದೇಶಿಸಿ ಮಾತನಾಡಿದ ಜಿಲ್ಲಾಧಿಕಾರಿ ಶ್ರೀರೂಪ ಅವರು ನಾಗರಿಕರಿಂದ ಕೇಳಿಬರುವ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸಬೇಕು. ಈ ಹಿಂದಿನ ಫೋನ್ ಇನ್ ಕಾರ್ಯಕ್ರಮದಲ್ಲಿ ದಾಖಲಾದ ಬಹುತೇಕ ದೂರುಗಳಿಗೆ ಕ್ರಮವಹಿಸಲಾಗಿದೆ. ಇಂದು ಬಂದಿರುವ ಕರೆಗಳಿಗೆ ಅಧಿಕಾರಿಗಳು ಕೂಡಲೇ ಕಾರ್ಯಪ್ರವೃತ್ತರಾಗಿ ಸಮಸ್ಯೆ ಪರಿಹರಿಸಿ ವರದಿ ಸಲ್ಲಿಸುವಂತೆ ಸೂಚಿಸಿದರು. ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎನ್. ಶಶಿಧರ್, ಡಿವೈಎಸ್‌ಪಿ ಸ್ನೇಹ ರಾಜ್, ವಿವಿಧ ಇಲಾಖೆಗಳ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ನೇರ ಫೋನ್ ಇನ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಶಾಸಕ ಸಿ.ಪುಟ್ಟರಂಗಶೆಟ್ಟಿ ಮತದಾರರಿಗೆ ಶ್ವೇತಪತ್ರ ಹೊರಡಿಸಲಿ



ಚಾಮರಾಜನಗರ: ಕ್ಷೇತ್ರದಲ್ಲಿ ನಡೆದಿರುವ ಅಭಿವೃದ್ಧಿ ಕಾರ್ಯಗಳ ಬಗ್ಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರು ಬಿಜೆಪಿ ನಾಯಕರಿಗೆ ಶ್ವೇತಪತ್ರ ಹೊರಡಿಸುವ ಅಗತ್ಯವಿಲ್ಲ ಆದರೆ ಕ್ಷೇತ್ರದ ಮತದಾರರ ತಿಳುವಳಿಕೆಗಾಗಿ ಹೊರಡಿಸಬೇಕು ಎಂದು ಬಿಜೆಪಿ ಯುವಮೋರ್ಚಾದ ಜಿಲ್ಲಾಧ್ಯಕ್ಷ ಸೂರ್ಯಕುಮಾರ್ ಆಗ್ರಹಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್ ಪತ್ರಿಕಾಗೋಷ್ಠಿ ಮಾಡಿ ಶಾಸಕರು ಬಿಜೆಪಿ ನಾಯಕರಿಗೆ ಶ್ವೇತಪತ್ರ ಹೊರಡಿಸುವ ಅಗತ್ಯವಿಲ್ಲ, ಶಾಸಕರು ಕ್ಷೇತ್ರದ ಅಭಿವೃದ್ಧಿಗೆ 2ಸಾವಿರ ಕೋಟಿಗೂ ಹೆಚ್ಚಿನ ಅನುದಾನ ತಂದಿದ್ದಾರೆ. ಕ್ಷೇತ್ರದ ಸಮಗ್ರ ಅಭಿವೃದ್ಧಿ. ಮಾಡಿದ್ದಾರೆ. ಅವರು ಕ್ಷೇತ್ರಕ್ಕೆ ಬಂದರೆ ನಾವು ಅಭಿವೃದ್ಧಿ ಕೆಲಸ ತೋರಿಸುತ್ತೇವೆ. ಬಿಜೆಪಿಯವರಿಗೆ ಟೀಕೆ ಮಾಡುವುದೇ ಅವರ ಕೆಲಸವಾಗಿದೆ ಎಂದು ಹೇಳಿಕೆ ನೀಡಿದ್ದಾರೆ. ನೀವು ಬಿಜೆಪಿ ನಾಯಕರಿಗೆ ಶ್ವೇತಪತ್ರ ಹೊರಡಿಸುವ ಅಗತ್ಯವಿಲ್ಲ ಕ್ಷೇತ್ರದ ಮತದಾರರಿಗೆ ಹೊರಡಿಸಬೇಕು ಎಂದು ಹೇಳಿದರು.

ಎಂ.ರಾಮಚಂದ್ರ, ಉಡಿಗಾಲ ಕುಮಾರಸ್ವಾಮಿ ಅವರು ಕ್ಷೇತ್ರದ ಮತದಾರರು. ಅವರು ಬಿಜೆಪಿ ರಾಜ್ಯ ನಾಯಕರ ಮೆಚ್ಚಿಸಿಕೊಳ್ಳುವ ಅವಶ್ಯಕತೆ ಇಲ್ಲ ಬಿ.ಕೆ.ರವಿಕುಮಾರ್ ಅವರೇ ತಾವೂ ಮುಂದೆ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಲು, ಜಿ.ಪಂ. ಚುನಾವಣೆಯಲ್ಲಿ ಟಿಕೆಟ್ ಗಿಟ್ಟಿಸಿಕೊಳ್ಳಲು ತಾವು ಪುಟ್ಟರಂಗಶೆಟ್ಟಿ ಅವರನ್ನು, ಮೆಚ್ಚಿಸಿಕೊಳ್ಳಲು ಪತ್ರಿಕಾಗೋಷ್ಠಿ ಮಾಡಿದ್ದೀರಿ ಎಂದು ದೂರಿದರು. ಬಿಜೆಪಿ ಜಿಲ್ಲಾ ವಕ್ತಾರ ಮನೋಜ್ ಪಟೇಲ್ ಮಾತನಾಡಿ, ಕ್ಷೇತ್ರದಲ್ಲಿ ನಾಲ್ಕು ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಸಿ. ಪುಟ್ಟರಂಗಶೆಟ್ಟಿ ಅವರು, ಚಾಮರಾಜನಗರದ ಅಭಿವೃದ್ಧಿಗೆ ನೀಡಿದ ವಿಶೇಷ ಕೊಡುಗೆಯಾದರೂ ಏನು? ತಮ್ಮ ನಾಲ್ಕು ಅವಧಿಗಳಲ್ಲಿ ಅವರು ಕ್ಷೇತ್ರದಲ್ಲಿ ಮಾಡಿರುವ ಒಂದು ಗಮನಾರ್ಹ ಸಾಧನೆಯನ್ನಾದರೂ ಜನತೆಯ ಮುಂದೆ ಇಡಲಿ ಎಂದು ಒತ್ತಾಯಿಸಿದರು. ಕ್ಷೇತ್ರದಲ್ಲಿ ಕೈಗೆತ್ತಿಕೊಂಡಿರುವ ಬಹುತೇಕ ಮುಖ್ಯ ಕಾಮಗಾರಿಗಳು ಅರ್ಧಕ್ಕೆ ನಿಂತು ಅಪೂರ್ಣಗೊಂಡಿವೆ. ಶಾಸಕರು ಯಾವ ಕೆಲಸವನ್ನು ಪೂರ್ಣಗೊಳಿಸಿದ್ದಾರೆ ಎಂಬುದನ್ನು ಸ್ಪಷ್ಟಪಡಿಸಲಿ. ಉದಾಹರಣೆಗೆ, ಕರಿನಂಜನಪುರ ಹಾಗೂ ಸೋಮವಾರಪೇಟೆ ಮಾರ್ಗವು ಸೂಕ್ತ ನಿರ್ವಹಣೆ ಇಲ್ಲದೆ ಸಂಪೂರ್ಣವಾಗಿ ಮುಚ್ಚಿಹೋಗಿದೆ ಎಂದರು.

**ಕೇಂದ್ರದ ಯೋಜನೆಗಳಿಗೆ ತಮ್ಮದೆಂದು ಬೀಗುತ್ತಿದ್ದಾರೆ:**

ನಗರದಲ್ಲಿ ಅಭಿವೃದ್ಧಿಯಾಗಿರುವ ಜೋಡಿ ರಸ್ತೆಯು ಕೇಂದ್ರ ರಸ್ತೆ ನಿಧಿ (ಸಿಆರ್‌ಎಫ್) ಯಿಂದ ಬಂದಿರುವುದಾಗಿದೆ. ಹಾಗೂ ಅಮೃತ್ ಯೋಜನೆ ಕೂಡ ಕೇಂದ್ರ ಸರ್ಕಾರದ್ದಾಗಿದೆ. ಆದರೆ, ಶಾಸಕರು ಈ ಕೇಂದ್ರದ ಯೋಜನೆಗಳನ್ನು ಸಮರ್ಪಕವಾಗಿ -ಅನುಷ್ಠಾನಗೊಳಿಸುವಲ್ಲಿ ಸಂಪೂರ್ಣ ವಿಫಲರಾಗಿದ್ದಾರೆ ಎಂದು ದೂರಿದರು.ಗ್ರಾಮೀಣ ಪ್ರದೇಶಗಳಲ್ಲಿ ರಸ್ತೆಗಳ ಸ್ಥಿತಿ ಅತ್ಯಂತ ಶೋಚನೀಯ ವಾಗಿದೆ. ಜಲ್ಲಿ ಹಾಕಿರುವ ರಸ್ತೆಗಳಿಗೆ ಹಲವು ದಿನಗಳಾದರೂ ಡಾಂಬರೀಕರಣ ಮಾಡಿಲ್ಲ. ಬಿಜೆಪಿ ಬೆಂಬಲಿತ ವಾರ್ಡ್ ಮತ್ತು ಗ್ರಾಮಗಳಿಗೆ ಅಭಿವೃದ್ಧಿ ಅನುದಾನ ನೀಡದೆ ದ್ವೇಷದ ರಾಜಕಾರಣ ಮಾಡುತ್ತಿದ್ದಾರೆ ಎಂದು ಆರೋಪಿಸಿದರು. ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಎಸ್‌ಸಿ ಮೋರ್ಚಾದ ಪ್ರಧಾನ ಕಾರ್ಯದರ್ಶಿ ರಾಮಸಮುದ್ರ ಶಿವು, ಎಸ್‌ಟಿ ಮೋರ್ಚಾದ ಜಿಲ್ಲಾ ಉಪಾಧ್ಯಕ್ಷ ಬುಲೆಟ್ ಚಂದ್ರು. ಯುವ ಮೋರ್ಚಾದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಆನಂದ್‌ಭಗೀರಥ್, ಯುವ ಮೋರ್ಚಾ ದ ನಗರ ಮಂಡಲ ಅಧ್ಯಕ್ಷ ಪ್ರವೀಣ್ ನಾಯಕ, ಗ್ರಾ.ಪಂ.ಮಾಜಿ ಸದಸ್ಯ ಮಂಗಲ ರವಿ, ಹಾಜರಿದ್ದರು.

# ಶಿಕ್ಷಣ ಸಚಿವರ ರಾಜೀನಾಮೆಗೆ ಆಗ್ರಹ

## ನೀಟ್ ಪರೀಕ್ಷಾ ಅಕ್ರಮ, ವಿದ್ಯಾರ್ಥಿಗಳ ಆತ್ಮಹತ್ಯೆ ಖಂಡಿಸಿ ಡಿಎಸ್‌ಎಸ್ ಪ್ರತಿಭಟನೆ




ಚಾಮರಾಜನಗರ: ನೀಟ್ ಪರೀಕ್ಷಾ ಅಕ್ರಮ, ಪ್ರಶ್ನೆ ಪತ್ರಿಕೆ ಸೋರಿಕೆ, ವಿದ್ಯಾರ್ಥಿಗಳ ಆತ್ಮಹತ್ಯೆ ಪ್ರಕರಣಗಳು ಹಾಗೂ ಹೋರಾಟಗಾರರ ಮೇಲಿನ ಹಲ್ಲೆಗೆ ನೈತಿಕ ಹೊಣೆಹೊತ್ತು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ತಕ್ಷಣವೇ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ (ಡಿ.ಜಿ. ಸಾಗರ್ ಬಣ) ಜಿಲ್ಲಾ ಸಮಿತಿ ವತಿಯಿಂದ ನಗರದ ಜಿಲ್ಲಾಡಳಿತ ಭವನದ ಮುಂಭಾಗ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಸಮಿತಿಯ ಜಿಲ್ಲಾ ಸಂಚಾಲಕ ಸಿ.ಎಂ. ಶಿವಣ್ಣ ಅವರ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು ಕೇಂದ್ರ ಸರ್ಕಾರ ಹಾಗೂ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ ಘೋಷಣೆಗಳನ್ನು ಕೂಗಿದರು. ಬಳಿಕ ಜಿಲ್ಲಾಧಿಕಾರಿಗಳ ಮುಖಾಂತರ ಪ್ರಧಾನ ಮಂತ್ರಿಯವರಿಗೆ ಮನವಿ ಪತ್ರ ಸಲ್ಲಿಸಿದರು.

### ನಿಷ್ಪಕ್ಷಪಾತ ತನಿಖೆಗೆ ಆಗ್ರಹ

ಪರೀಕ್ಷಾ ಅಕ್ರಮಗಳ ಬಗ್ಗೆ ತಕ್ಷಣವೇ ನಿಷ್ಪಕ್ಷಪಾತ ನ್ಯಾಯಾಂಗ ತನಿಖೆಗೆ ಆದೇಶಿಸಬೇಕು. ಪರೀಕ್ಷಾ ಅಕ್ರಮದ ಹೊಣೆ ಹೊತ್ತು ಶಿಕ್ಷಣ ಸಚಿವರು ರಾಜೀನಾಮೆ ನೀಡಬೇಕು. ಅಕ್ರಮದಿಂದಾಗಿ ಪ್ರಾಣ ಕಳೆದುಕೊಂಡ ಅಮಾಯಕ ವಿದ್ಯಾರ್ಥಿಗಳ ಕುಟುಂಬಗಳಿಗೆ ಸೂಕ್ತ ಪರಿಹಾರ ಘೋಷಿಸಬೇಕು ಹಾಗೂ ಮುಂದಿನ ದಿನಗಳಲ್ಲಿ ಮುಕ್ತ, ನ್ಯಾಯಸಮ್ಮತ ಮತ್ತು ಪಾರದರ್ಶಕವಾಗಿ ಪರೀಕ್ಷೆಗಳನ್ನು ನಡೆಸಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಸಂಘಟನಾ ಸಂಚಾಲಕ ರಂಗಸ್ವಾಮಿ, ಖಜಾಂಚಿ ರವಿಕುಮಾರ್ ಗುಂಟಾಪುರ, ಯಳಂದೂರು ತಾಲೂಕು ಸಂಚಾಲಕ ಮಲ್ಲಿಕಾರ್ಜುನ, ಆಟೋ ಉಮೇಶ್, ಚನ್ನಬಸವಮ್ಮ, ಪುಟ್ಟಬಸವಮ್ಮ, ಲಕ್ಷ್ಮಮ್ಮ, ನಂಜಮ್ಮ, ಚಿನ್ನಸ್ವಾಮಿ, ಶೇಖರ್, ಸಿದ್ದಪ್ಪ ಸೇರಿದಂತೆ ಹಲವು ಮುಖಂಡರು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.

### ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯದ ಜೊತೆ ಆಟ

**ನೀಟ್ ಪರೀಕ್ಷಾ ಪ್ರಶ್ನೆಪತ್ರಿಕೆ ಸೋರಿಕೆಯಿಂದಾಗಿ ಬಡ ಹಾಗೂ ಮಧ್ಯಮ ವರ್ಗದ ಕುಟುಂಬಗಳ ಲಕ್ಷಾಂತರ ವಿದ್ಯಾರ್ಥಿಗಳ ವರ್ಷಗಳ ಕಠಿಣ ಶ್ರಮ ಮಣ್ಣು ಪಾಲಾಗಿದೆ. ಮನನೊಂದ ಹಲವು ಅಭ್ಯರ್ಥಿಗಳು ಆತ್ಮಹತ್ಯೆಗೆ ಶರಣಾಗಿದ್ದಾರೆ. ಪರೀಕ್ಷಾ ಅಕ್ರಮ, ಆಡಳಿತಾತ್ಮಕ ವೈಫಲ್ಯಗಳಿಗೆ ಹೊಣೆಗಾರಿಕೆಯೇ ಇಲ್ಲದಂತಾಗಿದೆ. ಕೇಂದ್ರ ಸರ್ಕಾರವು ಅಮಾಯಕ ವಿದ್ಯಾರ್ಥಿಗಳ ಜೀವನದ ಜೊತೆ ಚೆಲ್ಲಾಟವಾಡುತ್ತಿದ್ದು, ಪ್ರತಿಭಟನಾ ನಿರತ ವಿದ್ಯಾರ್ಥಿಗಳ ಮೇಲೆ ಪೊಲೀಸರು ನಡೆಸಿದ ಹಲ್ಲೆ ಪ್ರಜಾಪ್ರಭುತ್ವ ವಿರೋಧಿಯಾಗಿದೆ. ದೆಹಲಿಯಲ್ಲಿ ನಡೆಯುತ್ತಿರುವ ವಿದ್ಯಾರ್ಥಿಗಳ ಹೋರಾಟವನ್ನು ಬೆಂಬಲಿಸಿ ರಾಜ್ಯಾದ್ಯಂತ ನಮ್ಮ ಸಂಘಟನೆ ಹೋರಾಟಕ್ಕಿಳಿದಿದೆ ಎಂದರು.**

### ಧರ್ಮೇಂದ್ರ ಪ್ರಧಾನ್ ರಾಜೀನಾಮೆಗೆ ಪಟ್ಟು

**ಪ್ರತಿಭಟನೆಯ ನೇತೃತ್ವ ವಹಿಸಿ ಮಾತನಾಡಿದ ಡಿಎಸ್‌ಎಸ್ ಜಿಲ್ಲಾ ಸಂಚಾಲಕ ಸಿ.ಎಂ. ಶಿವಣ್ಣ, ನೀಟ್ ಪರೀಕ್ಷೆಯಲ್ಲಿ ನಡೆದಿರುವ ವ್ಯಾಪಕ ಅಕ್ರಮವನ್ನು ಖಂಡಿಸಿ ಹಾಗೂ ಸಚಿವರ ರಾಜೀನಾಮೆಗೆ ಆಗ್ರಹಿಸಿ ದೆಹಲಿಯ ಜಂತರ್ ಮಂತರ್‌ನಲ್ಲಿ ನೀಟ್ ಅಭ್ಯರ್ಥಿಗಳು, ಪರಿಸರ ಹಾಗೂ ಶಿಕ್ಷಣ ತಜ್ಞ ಸೋನಮ್ ವಾಂಗ್ಚುಕ್ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದರೂ ಕೇಂದ್ರ ಸರ್ಕಾರ ಸ್ಪಂದಿಸದಿರುವುದು ತೀವ್ರ ಖಂಡನೀಯ. ಕೇಂದ್ರ ಸರ್ಕಾರಕ್ಕೆ ವಿದ್ಯಾರ್ಥಿಗಳ ಬಗ್ಗೆ ಕನಿಷ್ಠ ಕಾಳಜಿ ಇದ್ದರೆ ಸೋನಮ್ ವಾಂಗ್ಚುಕ್ ಅವರ ಜೀವ ರಕ್ಷಣೆಗೆ ತಕ್ಷಣ ಮಧ್ಯ ಪ್ರವೇಶಿಸಬೇಕು. ಹೋರಾಟನಿರತ ವಿದ್ಯಾರ್ಥಿಗಳ ಬೇಡಿಕೆ ಈಡೇರಿಸುವ ನಿಟ್ಟಿನಲ್ಲಿ ತುರ್ತು ಮಾತುಕತೆ ನಡೆಸಬೇಕು ಎಂದು ಒತ್ತಾಯಿಸಿದರು.**

### ಇಂದು ಪ್ರತಿಭಟನೆ

ಮೈಸೂರು: ನಗರ ಹಾಗೂ ಗ್ರಾಮಾಂತರ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿಯಿಂದ ನೀಟ್ ಅಕ್ರಮ ಖಂಡಿಸಿನಮ್ಮ ನಗರದ ರಾಮಸ್ವಾಮಿ ವೃತ್ತದಲ್ಲಿ ಜು.25ರಂದು ಮಧ್ಯಾಹ್ನ 12ಕ್ಕೆ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಮೈಸೂರು ನಗರ ಕಾಂಗ್ರೆಸ್ ಅಧ್ಯಕ್ಷ ಸೈಯದ್ ಅಬ್ರರ್ ಹೇಳಿದರು.

ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನೀಟ್ ಅಕ್ರಮದಿಂದ 21 ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅವರ ಕುಟುಂಬಕ್ಕೆ ಪರಿಹಾರ ನೀಡಬೇಕು. ಎನ್‌ಟಿಎ ರದ್ದು ಮಾಡಬೇಕು. ಕೇಂದ್ರ ಶಿಕ್ಷಣ ಸಚಿವ ಧರ್ಮೇದ್ರ ಪ್ರಧಾನ್ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿ ಪ್ರತಿಭಟನೆ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ನೀಟ್ ಅಕ್ರಮ ಖಂಡಿಸಿ ನಡೆಸುತ್ತಿರುವ ವಿದ್ಯಾರ್ಥಿಗಳ ಮೇಲಿನ ಪೊಲೀಸ್ ದೌರ್ಜನ್ಯ ಸರಿಯಲ್ಲ. ಅಕ್ರಮದಿಂದ ವಿದ್ಯಾರ್ಥಿ ಗಳಿಗೆ ಅನ್ಯಾಯ ಎಸಗಲಾಗಿದೆ. ಪ್ರತಿಭಟನೆ ಹಕ್ಕು ಕಸಿದುಕೊಳ್ಳುವ ಹುನ್ನಾರ ಕೇಂದ್ರ ಸರ್ಕಾರ ನಡೆಸುತ್ತಿದೆ ಎಂದು ದೂರಿದರು. ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷರಾದ ಚಂದನ್ ಕುಮಾರ್ ಮಾತನಾಡಿ, ಅಕ್ರಮ ತಡೆಯುವಲ್ಲಿ ಕೇಂದ್ರ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಸರ್ವಾಧಿಕಾರಿ ಧೋರಣೆ ನಡೆಸುತ್ತಿದೆ. ಇದನ್ನು ಖಂಡಿಸಿ ಉಗ್ರ ಹೋರಾಟ ಕೈಗೊಳ್ಳಲಾಗಿದೆ. ನ್ಯಾಯ ಒದಗಿಸದಿದ್ದಲ್ಲಿ ಮುಂದಿನ ದಿನದಲ್ಲಿ ಉಪವಾಸ ಸತ್ಯಾಗ್ರಹ ನಡೆಸಲಾಗುವುದು ಎಚ್ಚರಿಸಿದರು. ನಗರ ಉಪಾಧ್ಯಕ್ಷರಾದ ನವೀನ್, ಆಡಳಿತ ಉಸ್ತುವಾರಿ ಫೈರೋಜ್ ಇತರರು ಭಾಗವಹಿಸಿದ್ದರು.




# ನಾಳೆ ನಾಟಕ ಪ್ರದರ್ಶನ

ಮೈಸೂರು: ರಂಗಾನಂದ ಕಲಾ ಸಂಘದ ವತಿಯಿಂದ ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರದಲ್ಲಿ ಜುಲೈ 26ರಂದು ಸಂಜೆ 6.30ಕ್ಕೆ ಪೌರಾಣಿಕ ನಾಟಕ ಆಶ್ವತ್ಥಾಮ ನಾಟಕ ಪ್ರದರ್ಶನ ನಡೆಯಲಿದೆ ಎಂದು ಸಂಘದ ಅಧ್ಯಕ್ಷ ರಂಗಸ್ವಾಮಿ ಹೇಳಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಡಾ. ರಾಜ್ ಕುಮಾರ್ ಅವರಿಗೆ ರಂಗ ನಮನದ ಸರಣಿಯ 3ನೇ ನಾಟಕ ಇದಾಗಿದೆ. ಚಲನಚಿತ್ರ ನಟ ರಾಜಾನಂದ ವಿರಚಿತ ನಾಟಕವನ್ನು ತಾವೇ ನಿರ್ದೇಶಿಸಿ ಅಭಿಯಿಸುತ್ತಿರುವುದಾಗಿ ತಿಳಿಸಿದರು. ಅತಿಥಿಯಾಗಿ ನಿವೃತ್ತ ಕೆಎಎಸ್ ಅಧಿಕಾರಿ ಪುಟ್ಟಮಾದಯ್ಯ ಭಾಗವಸುವರು. ಪ್ರಾಚಾರ್ಯ ಎನ್. ಉದಯಕುಮಾರ್ ಅಧ್ಯಕ್ಷತೆ ವಹಿಸುವರು. ವಿಧಾನ ಪರಿಷತ್ ಸದಸ್ಯ ಆರ್. ರಘು ಕೌಟಿಲ್ಯ ಅವರಿಗೆ ಸನ್ಮಾನಿಸಲಾಗುವುದು. ಪ್ರವೇಶ ಉಚಿತ ಇರಲಿದೆ ಎಂದು ತಿಳಿಸಿದರು. ಸಂಘದ ನಾಗೇಂದ್ರ ಪ್ರಭು, ವಸಂತ ಶಾಸ್ತ್ರಿ, ಡಿ.ನಾಗೇಂದ್ರ ಕುಮಾರ ಹಾಜರಿದ್ದರು.



# ಶಾಸಕ ಸಿ.ಪುಟ್ಟರಂಗಶೆಟ್ಟಿರಿಂದ ಪರಿಹಾರದ ಚೆಕ್ ವಿತರಣೆ

**ಚಾಮರಾಜನಗರ**, ಸಂಕಷ್ಟ ಪರಿಹಾರ ನಿಧಿ ಯೋಜನೆಯಡಿ ಮೀನುಗಾರಿಕೆ ನಡೆಸುವ ಸಂದರ್ಭದಲ್ಲಿ ಮೃತಪಟ್ಟ ತಾಲ್ಲೂಕಿನ ಅಟ್ಟುಗೂಳಿಪುರದ ನಿವಾಸಿ ಶಿವಸ್ವಾಮಿ ಕುಟುಂಬಕ್ಕೆ ಶಾಸಕ ಸಿ.ಪುಟ್ಟರಂಗಶೆಟ್ಟಿ ನಗರದ ಪ್ರವಾಸಿಮಂದಿರದಲ್ಲಿ 10 ಲಕ್ಷ ರೂ.ಗಳ ಪರಿಹಾರದ ಚೆಕ್ ನೀಡಿದರು.

ಇದೇ ವೇಳೆ ಅವರು ಮಾತನಾಡಿ, ತಾಲ್ಲೂಕಿನ ಅಟ್ಟುಗೂಳಿಪುರದ ಶಿವಸ್ವಾಮಿ ಸುವರ್ಣಾವತಿ ಜಲಾಶಯದಲ್ಲಿ ಮೀನುಹಿಡಿಯುವ ವೃತ್ತಿ ಮಾಡುತ್ತಿದ್ದರು. ಆ ಸಂದರ್ಭದಲ್ಲಿ ಶಿವಸ್ವಾಮಿ ಮೃತಪಟ್ಟಿದ್ದರು. ಇವರಿಗೆ ಸೂಕ್ತ ಪರಿಹಾರ ನೀಡುವಂತೆ ಮೀನುಗಾರಿಕೆ ಇಲಾಖೆಗೆ ಅರ್ಜಿ ಸಲ್ಲಿಕೆಯಾಗಿತ್ತು. ಇಲಾಖೆಯಿಂದ ಮೃತರ ಕುಟುಂಬಕ್ಕೆ 10 ಲಕ್ಷ ರೂ. ಮಂಜೂರಾಗಿದ್ದು, ಶಿವಸ್ವಾಮಿ ಪತ್ನಿ ಬಸಮಣ ಅವರಿಗೆ ವಿತರಣೆ ಮಾಡಲಾಗಿದೆ ಎಂದರು.

ಇದೇವೇಳೆ ಚಾಮರಾಜನಗರ ವಿಧಾನ ಸಭಾ ಕ್ಷೇತ್ರಕ್ಕೆ 20

**▸▸ ಮೀನುಗಾರಿಕೆ ನಡೆಸುವ ಸಂದರ್ಭದಲ್ಲಿ ಮೃತಪಟ್ಟ ಕುಟುಂಬಕ್ಕೆ 10 ಲಕ್ಷ ರೂ.**



25–26 ನೇ ಸಾಲಿನ ರಾಜ್ಯವಲಯ ಮತ್ತು ಜಿಲ್ಲಾವಲಯ ಸೇರಿ ಒಟ್ಟು 23 ಮೀನುಗಾರರಿಗೆ ತಲಾ 10 ಸಾವಿರ ಮೌಲ್ಯದ ಮೀನುಗಾರಿಕೆ ಸಲಕರಣೆ ಕಿಟ್ಸ್, ಫೈಬರ್ ಗ್ಲಾಸ್ ಹರಿಗೋಲು ವಿತರಿಸಿದರು. ಮೀನುಗಾರರು ಇಲಾಖೆಯಿಂದ ನೀಡಿರುವ ಸಲಕರಣೆಗಳನ್ನು ಹಾಳಾಗದಂತೆ ಕಾಪಾಡಿಕೊಳ್ಳಬೇಕು, ಇವುಗಳನ್ನು ಸದ್ಬಳಕೆ ಮಾಡಿಕೊಂಡು, ಆರ್ಥಿಕವಾಗಿ ಸಬಲರಾಗಬೇಕು, ಮೀನು ಹಿಡಿಯುವ ಸಂದರ್ಭದಲ್ಲಿ ಮುಂಜಾಗ್ರತೆ ಕ್ರಮವಹಿಸಬೇಕು. ಮಳೆಗಾಳಿ ಎದುರಾದಾಗ ನದಿಗೆ ಇಳಿಯದಂತೆ ಎಚ್ಚರವಹಿಸಬೇಕು ಎಂದರು. ಕಾರ್ಯಕ್ರಮದಲ್ಲಿ ಮೀನುಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ಎಸ್. ವಿವೇಕ್ ಸಹಾಯಕ ಶ್ರೀನಿವಾಸ, ಉಮೇಶ್ ಸಿಬ್ಬಂದಿ ವರ್ಗ ಹಾಗೂ ಮೀನುಗಾರರು ಹಾಜರಿದ್ದರು.

# ಬೈಕ್ ರ್‍ಯಾಲಿ ಮೂಲಕ ಕಾರ್ಗಿಲ್ ವಿಜಯ ದಿವಸ್

ಮೈಸೂರು: ಜಿಲ್ಲಾ ಮಾಜಿ ಸೈನಿಕರ ಸಂಘಗಳ ಒಕ್ಕೂಟದಿಂದ ಕಾರ್ಗಿಲ್ ವಿಜಯ್ ದಿವಸದ ಅಂಗವಾಗಿ ನಗರದ ಮೆಟ್ರೋಪೋಲ್ ವೃತ್ತದಿಂದ ಬೆಳಿಗ್ಗೆ 10.30ಕ್ಕೆ ಬೈಕ್ ರೇಲಿ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಜಿಲ್ಲಾಧ್ಯಕ್ಷ ಕೆ.ಪಿ.ದಿವಾಕರ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಮೆಟ್ರೋಪೋಲ್ ವೃತ್ತದಲ್ಲಿನ ಫೀಲ್ಡ್ ಮಾರ್ಷಲ್ ಕಾರಿಯಪ್ಪ ಪ್ರತಿಮೆಗೆ ಮಾಲಾರ್ಪಣೆ ಮಾಡಿ ನಗರದ ಮುಖ್ಯ ರಸ್ತೆಗಳಲ್ಲಿ ರ್‍ಯಾಲಿ ನಡೆಸಿ ಚಿಕ್ಕಮ್ಮನಿಕೇತನ ಕಲ್ಯಾಣ ಮಂಟಪದಲ್ಲಿ ಕೊನೆಗೊಂಡು ನಂತರ 12ಗಂಟೆಗೆ ಸಭಾ ಕಾರ್ಯಕ್ರಮ ನಡೆಯಲಿದೆ. ಈ ವೇಳೆ ಮಾಜಿ ಸೈನಿಕರಿಗೆ ಸನ್ಮಾನಿಸಲಾಗುವುದು ಎಂದರು.

ಯುವ ಪೀಳಿಗೆಯಲ್ಲಿ ದೇಶ ಪ್ರೇಮ ಮೂಡಿಸುವ ಸಲುವಾಗಿ ಹಾಗೂ ಹುತಾತ್ಮ ಯೋಧರಿಗೆ ಗೌರವ ಸಲ್ಲಿಸಲು ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ರೋಟರಿ ಕ್ಲಬ್ ಆಫ್ ಹೇರಿಟೇಜ್ ಅಧ್ಯಕ್ಷ ಆರ್. ಎನ್. ಶಿವಕುಮಾರ್ ವಹಿಸುವರು. ಅತಿಥಿಗಳಾಗಿ ವಿಧಾನ ಪರಿಷತ್ ಸದಸ್ಯ ಸಿ. ಎನ್. ಮಂಜೇಗೌಡ, ಶಾಸಕ ಕೆ.ಹರೀಶ್ ಗೌಡ, ಟಿ. ಎಸ್.ಶ್ರೀವತ್ಸ, ಎಂ. ಕೆ. ಸೋಮಶೇಖರ್, ಎಚ್.ವಿ.ರಾಜೀವ್, ಸಿ.ಎಲ್.ಆನಂದ್, ಮಂಜುನಾಥ್ ರೆಡ್ಡಿ, ಯಶಸ್ವಿ ಎಸ್.ಸೋಮಶೇಖರ್ ಭಾಗವಹಿಸುವರು ಎಂದು ತಿಳಿಸಿದರು. ಆರ್.ಎನ್. ಶಿವಕುಮಾರ್, ಎಸ್.ನಟರಾಜು, ರಾಜೇಶ್, ಭಾಗವಹಿಸಿದ್ದರು.




ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

**ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಮಾಡಿದ ಮೀಸಲಾತಿ 107ರ ಸಂಭ್ರಮಾಚರಣೆ ಕಾರ್ಯಕ್ರಮ**

# ಯುವಕರ ಭವಿಷ್ಯಕ್ಕೆ ಮದ್ಯಪಾನ ನಿಷೇಧವಾಗಲಿ: ನಾಗಲಕ್ಷ್ಮಿಚೌಧರಿ

ಮೈಸೂರು: ಯುವಕರ ಉತ್ತಮ ಭವಿಷ್ಯಕ್ಕಾಗಿ ರಾಜ್ಯದಲ್ಲಿ ಮದ್ಯಪಾನವನ್ನು ನಿಷೇಧ ಮಾಡಿಸಲೇಬೇಕು ಎಂದು ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌಧರಿ ಹೇಳಿದರು.

ನಗರದ ನಂಜರಾಜ ಬಹದ್ದೂರ್ ಛತ್ರದಲ್ಲಿ ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆಯ ವತಿಯಿಂದ ಶುಕ್ರವಾರ ನಡೆದ ವೇದಿಕೆಯ 15ನೇ ವರ್ಷದ ವಾರ್ಷಿಕೋತ್ಸವ ಹಾಗೂ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಮಾಡಿದ ಮೀಸಲಾತಿ 107ರ ಸಂಭ್ರಮಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಹಳ್ಳಿಗಳಲ್ಲಿ, ಗ್ರಾಮಗಳಲ್ಲಿ ಮದ್ಯದ ವ್ಯಾಪರ ಹೆಚ್ಚಾಗಿದೆ. ಟಾರ್ಗೆಟ್ ರೀಚ್ ಮಾಡಲು ಸಣ್ಣ ಸಣ್ಣ ಅಂಗಡಿಗಳಲ್ಲೂ ಮದ್ಯ ವ್ಯಾಪರ ಮಾಡುತ್ತಿದ್ದಾರೆ. ಮಕ್ಕಳು ಪೆನ್ನು, ಪೆನ್ಸಿಲ್, ಬುಕ್ ಹಿಡಿಯ ಬೇಕಾದ ಮಕ್ಕಳು ಇಂದು ಮದ್ಯವನ್ನು ಮಾರಾಟ ಮಾಡುತ್ತಿದ್ದಾರೆ. ಉತ್ತರ ಕರ್ನಾಟಕದಲ್ಲಿ ಮದ್ಯ ಮಾರಾಟದ ಟಾರ್ಗೆಟ್ ರೀಚ್ ಮಾಡಿಸುವ ಸಲುವಾಗಿ ಮದುವೆ ಸಮಾರಂಭದಲ್ಲಿಯೂ 9ನೇ ತರಗತಿಯ 4 ಮಕ್ಕಳ ಕೈಯಲ್ಲಿ ಸರಾಯಿ ಮಾರಾಟ ಮಾಡಿಸುತ್ತಿದ್ದರು. ಆ ನಾಲ್ಕು ಮಕ್ಕಳಲ್ಲಿ ಒಬ್ಬ ವಿದ್ಯಾರ್ಥಿ ಅಪ್ಪ, ಅಮ್ಮನ ಕೈಗೆ ಸಿಕ್ಕಿ ಬಿಳುತ್ತೇನೆ ಎಂಬ ಭಯದಿಂದ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡನು ಎಂದು ತಿಳಿಸಿದರು.




ಮಾಜಿ ಮುಖ್ಯಮಂತ್ರಿ ನಿಜಲಿಂಗಪ್ಪ ಅವರ ಅವಧಿಯಲ್ಲಿ ಯಂಡ, ಸಾರಾಯಿ ಕುಡಿದು ಅನೇಕರು ಸಾವೀಗಿಡಾಗಿದ್ದರು. ಅಂದು ನಿಜಲಿಂಗಪ್ಪ ಅವರ ಕ್ಯಾಬಿನೆಟ್‌ನಲ್ಲಿ ಮಂತ್ರಿಯಾಗಿದ್ದ ಯಶೋಧರಮ್ಮ ದಾಸಪ್ಪ ಅವರು ರಾಜ್ಯದಲ್ಲಿ ಮದ್ಯಪಾನ ನೀಷೇದ ಮಾಡುವಂತೆ ಒತ್ತಾಯ ಮಾಡಿದ್ದರು. ಪ್ರಪಂಚದಲ್ಲಿ ಮಹಿಳೆಯರಿಗೆ ಮಿಸಲಾತಿಯೇ ಇರಲಿಲ್ಲ. ಮಹಿಳೆಯರಿಗಾಗಿ ಶಾಲೆಗಳನ್ನು, ಕಾಲೇಜುಗಳನ್ನು, ಆಸ್ಪತ್ರೆಗಳನ್ನು ನಾಲ್ವಡಿ ಕೃಷ್ಣರಾಜ ಒಡೆಯರ್ ಕಟ್ಟಿದರು. ಅಂತಹ ಹಾದಿಯಲ್ಲಿ ಯಶೋಧರಮ್ಮ ದಾಸಪ್ಪ ಬಂದರು ಎಂದು ಹೇಳಿದರು.

ಸುಶೀಲ ನಂಜಪ್ಪ(ಸಹಕಾರ ಕ್ಷೇತ್ರ), ಡಾ.ಸೋನಿಯಾ ಮಂದಣ್ಣ(ವೈದ್ಯಕೀಯ), ಡಾ.ಲಕ್ಷ್ಮಿದೇವಿ (ವೈದ್ಯಕೀಯ), ಸುಧಾಮಣಿ( ಉದ್ಯಮಿ), ಕವಿತಾ ಶ್ರೀನಿವಾಸ(ಶಿಕ್ಷಕಿ), ಚೂಡಾರತ್ನಮ್ಮ (ಸಂಕಲ್ಪಯಾತ್ರಿ), ಪಾರ್ವತಮ್ಮ(ಕ್ರೀಡಾಪಟು), ಡಿ.ಸಿ.ವಿಜಯಲಕ್ಷ್ಮಿ (ಗಾಯಕಿ) ಅವರಿಗೆ ಪದ್ಮಭೂಷಣ ಯಶೋಧರಮ್ಮ ದಾಸಪ್ಪ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆಯ ರಾಜ್ಯಾಧ್ಯಕ್ಷೆ ಹೆಚ್.ಎಲ್.ಯಮುನಾ, ಗೌರವಾಧ್ಯಕ್ಷ ಹೆಚ್.ಕೆ.ರಾಮು, ಕೃಷಿ ವಿಜ್ಞಾನಿಗಳಾದ ಹೆಚ್.ಎಲ್.ವಸಂತ ಕುಮಾರ್, ಡಾ.ವಸಂತ ಕುಮಾರ್, ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್ ಸೇರಿದಂತೆ ಇತರರಿದ್ದರು.

# ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಪ್ರಗತಿ ಪರಿಶೀಲನಾ ಸಭೆ

**ನಾಗಮಂಗಲ :** ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯದ ಪ್ರಗತಿ ಪರಿಶೀಲನಾ ಸಭೆಯು ಶುಕ್ರವಾರ ನಾಗಮಂಗಲದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಯಿತು.

ಸಭೆಯಲ್ಲಿ ಎಸ್‌ಐಆರ್ ಕಾರ್ಯದ ಪ್ರಗತಿ, ಮನೆ-ಮನೆಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸುವ ಕಾರ್ಯ, ಅರ್ಜಿಗಳ ವಿಲೇವಾರಿ ಹಾಗೂ ಮತದಾರರ ಪಟ್ಟಿಯ ನಿಖರತೆಯನ್ನು ಖಚಿತಪಡಿಸುವ ಕುರಿತು ಜಿಲ್ಲಾಧಿಕಾರಿಗಳು ಅಧಿಕಾರಿಗಳೊಂದಿಗೆ ಸಮಗ್ರವಾಗಿ ಪರಿಶೀಲನೆ ನಡೆಸಿದರು.

ಬಿಎಲ್‌ಒಗಳು, ಬಿಎಲ್‌ಒ ಮೇಲ್ವಿ ಚಾರಕರು ಹಾಗೂ ಸಂಬಂಧಿಸಿದ ಅಧಿಕಾರಿಗಳು ಭಾರತ ಚುನಾವಣಾ ಆಯೋಗದ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ, ನಿಗದಿತ ಅವಧಿಯೊಳಗೆ ಗುಣಮಟ್ಟದೊಂದಿಗೆ ಎಸ್‌ಐಆರ್ ಕಾರ್ಯವನ್ನು ಪೂರ್ಣ ಗೊಳಿಸಬೇಕು. ಮತದಾರರ ಪಟ್ಟಿಯ ಪರಿಷ್ಕರಣೆ ಕಾರ್ಯದಲ್ಲಿ ಯಾವುದೇ ನಿರ್ಲಕ್ಷ್ಯಕ್ಕೆ ಅವಕಾಶ ನೀಡದೆ, ನಿಖರತೆ ಹಾಗೂ ಪಾರದರ್ಶಕತೆಯನ್ನು ಕಾಪಾಡಿಕೊಂಡು ಕಾರ್ಯನಿರ್ವಹಿಸುವಂತೆ ಜಿಲ್ಲಾಧಿಕಾರಿಗಳು ಸೂಚಿಸಿದರು.

ಸಭೆಯಲ್ಲಿ ಉಪ ನಿರ್ದೇಶಕರು, ಪಶು ಸಂಗೋಪನಾ ಇಲಾಖೆ, ನಾಗಮಂಗಲ ವಿಧಾನಸಭಾ ಕ್ಷೇತ್ರದ ಚುನಾವಣಾ ನೋಂದಣಾಧಿಕಾರಿ (ERO),ತಹಶೀಲ್ದಾರ್, ಚುನಾವಣಾ ಶಾಖೆಯ ಅಧಿಕಾರಿಗಳು, ಬಿಎಲ್‌ಒ ಮೇಲ್ವಿಚಾರಕರು ಹಾಗೂ ಸಂಬಂಧಿಸಿದ ಅಧಿಕಾರಿಗಳು ಉಪಸ್ಥಿತರಿದ್ದರು.



# ವಿಶೇಷ ಚೇತನ ಮಕ್ಕಳ ವಸತಿ ಶಾಲೆಗಳ ಸಮಸ್ಯೆ ನಿವಾರಣೆಗೆ ಕ್ರಮ

## ಪ್ರತಿ ಮೂರು ತಿಂಗಳಿಗೊಮ್ಮೆ ಮೇಲ್ವಿಚಾರಣಾ ಸಭೆ ನಡೆಸಲು ಸಿಇಒ ನಂದಿನಿ ಕೆ.ಆರ್. ಸೂಚನೆ

**ಮಂಡ್ಯ:** ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ನಂದಿನಿ ಕೆ.ಆರ್. ಅವರ ಅಧ್ಯಕ್ಷತೆಯಲ್ಲಿ ಗುರುವಾರ ಜಿಲ್ಲೆಯ ಭೌದ್ಧಿಕ ವಿಶೇಷ ಚೇತನ ಮಕ್ಕಳ ವಸತಿ ಶಾಲೆಗಳ ಶಿಕ್ಷಕರ ಕುಂದುಕೊರತೆ ಸಭೆ ನಡೆಯಿತು.

ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ 6 ಭೌದ್ಧಿಕ ವಿಶೇಷ ಚೇತನ ಮಕ್ಕಳ ವಸತಿ ಶಾಲೆಗಳ ಶಿಕ್ಷಕರು ಶಾಲೆಗಳ ಆಡಳಿತ, ಮೂಲಸೌಕರ್ಯ, ವಿದ್ಯಾರ್ಥಿಗಳಿಗೆ ಒದಗಿಸಲಾಗುತ್ತಿರುವ ಸೌಲಭ್ಯಗಳು ಹಾಗೂ ಶಿಕ್ಷಕರು ಎದುರಿಸುತ್ತಿರುವ ವಿವಿಧ ಸಮಸ್ಯೆಗಳ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು.

ಪ್ರತಿ ಮೂರು ತಿಂಗಳಿಗೊಮ್ಮೆ ಮೇಲ್ವಿಚಾರಣಾ ಸಭೆ ಆಯೋಜಿಸಲು ಸೂಚನೆ: ಭೌದ್ಧಿಕ ವಿಶೇಷಚೇತನ ಮಕ್ಕಳ ಶಾಲೆಗಳನ್ನು ನಡೆಸುತ್ತಿರುವ ಸಂಸ್ಥೆಗಳು ಮಕ್ಕಳಿಗೆ ಗುಣಮಟ್ಟದ ಶಿಕ್ಷಣಕ್ಕೆ ಪೂರಕವಾದ ಸುರಕ್ಷಿತ ಹಾಗೂ ಸೂಕ್ತ ಕಲಿಕಾ ವಾತಾವರಣವನ್ನು ಕಲ್ಪಿಸಿರುವ ಬಗ್ಗೆ, ಸರ್ಕಾರದ ನಿಯಮಾವಳಿಗಳ ಪ್ರಕಾರ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸಿರುವ ಬಗ್ಗೆ ಹಾಗೂ ಸರ್ಕಾರದಿಂದ ಬಿಡುಗಡೆಯಾಗುವ ಅನುದಾನವನ್ನು ನಿಯಮಾನುಸಾರ ಮತ್ತು ಉದ್ದೇಶಿತ ರೀತಿಯಲ್ಲಿ ಬಳಸುತ್ತಿರುವ ಬಗ್ಗೆ ನಿರಂತರ ಮೇಲ್ವಿಚಾರಣೆ ನಡೆಸಬೇಕು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ನಂದಿನಿ ಕೆ.ಆರ್. ಸೂಚಿಸಿದರು.



ಈ ಸಂಬಂಧ ಅಂಗವಿಕಲರ ಕಲ್ಯಾಣ ಇಲಾಖೆಯ ಅಧಿಕಾರಿಗಳು ಪ್ರತಿ ಮೂರು ತಿಂಗಳಿಗೊಮ್ಮೆ ಮೇಲ್ವಿಚಾರಣಾ ಸಭೆಯನ್ನು ಆಯೋಜಿಸಿ, ಶಾಲೆಗಳ ಕಾರ್ಯನಿರ್ವಹಣೆ, ಮಕ್ಕಳ ಶೈಕ್ಷಣಿಕ ಪ್ರಗತಿ, ಮೂಲಸೌಕರ್ಯ, ಸಿಬ್ಬಂದಿ ಲಭ್ಯತೆ, ಅನುದಾನದ ಬಳಕೆ ಹಾಗೂ ನಿಯಮಗಳ ಅನುಸರಣೆಯ ಕುರಿತು ಸಮಗ್ರ ಪರಿಶೀಲನೆ ನಡೆಸಿ, ಕಂಡುಬರುವ ಲೋಪಗಳನ್ನು ತ್ವರಿತವಾಗಿ ಸರಿಪಡಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ನಿರ್ದೇಶನ ನೀಡಿದರು.

ಸಭೆಯಲ್ಲಿ ಮಾತನಾಡಿದ ಶಿಕ್ಷಕರು, ಶಾಲೆಗಳಿಗೆ ಅನುದಾನ ಬಿಡುಗಡೆ ವಿಳಂಬವಾಗುತ್ತಿರುವ ಕಾರಣ ಶಿಕ್ಷಕರಿಗೆ ಮಾಸಿಕ ಗೌರವಧನ ಪಾವತಿಯಲ್ಲೂ ವಿಳಂಬವಾಗುತ್ತಿದೆ ಎಂದು ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಜಿ.ಪಂ. ಮುಖ್ಯ ಕಾರ್ಯನಿರ್ವಹಣಾಧಿಕಾರಿ ನಂದಿನಿ ಕೆ.ಆರ್. ಅವರು, ಜಿಲ್ಲಾ ಪಂಚಾಯತ್ ಸಾಮಾನ್ಯ ಸಭೆಯಲ್ಲಿ ವೇತನೇತರ ಮೊತ್ತದ ಕ್ರಿಯಾಯೋಜನೆಗೆ ಈಗಾಗಲೇ ಅನುಮೋದನೆ ದೊರೆತಿದ್ದು, ಸಂಬಂಧಿತ ಇಲಾಖೆಯೊಂದಿಗೆ ಸಮನ್ವಯ ಸಾಧಿಸಿ ತುರ್ತಾಗಿ ಅನುದಾನ ಬಿಡುಗಡೆ ಮಾಡಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು. ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಹಾಗೂ ಅಗತ್ಯ ಸೌಲಭ್ಯಗಳಲ್ಲಿ ಯಾವುದೇ ವ್ಯತ್ಯಯ ಉಂಟಾಗದಂತೆ ಎಲ್ಲಾ ಸಂಬಂಧಿತ ಅಧಿಕಾರಿಗಳು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸೂಚಿಸಿದರು.

ಸಭೆಯಲ್ಲಿ ಜಿ.ಪಂ. ಮುಖ್ಯ ಲೆಕ್ಕಾಧಿಕಾರಿ ಶ್ರೀನಿವಾಸ್ ನಾಯಕ್, ಅಂಗವಿಕಲರ ಅಭಿವೃದ್ಧಿ ಇಲಾಖೆಯ ಕೋಮಲ್ ಕುಮಾರ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಜು.26ರಂದು ಮಂಡ್ಯದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ

**ಮಂಡ್ಯ:** ಜಿಲ್ಲಾ ಬ್ರಾಹ್ಮಣ ಸಭೆ, ಅವಿಜ್ಞಾ ಚಾರಿಟಬಲ್ ಟ್ರಸ್ಟ್ ಹಾಗೂ ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಸಂಯುಕ್ತ ಆಶ್ರಯದಲ್ಲಿ ಅಖಿಲ ಭಾರತೀಯ ಬ್ರಾಹ್ಮಣ ಮಹಾಸಂಘದ ವತಿಯಿಂದ ಜುಲೈ 26ರಂದು ಬೆಳಿಗ್ಗೆ 9ರಿಂದ ಮಧ್ಯಾಹ್ನ 2ರವರೆಗೆ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದೆ ಎಂದು ಸಂಘದ ಜಿಲ್ಲಾಧ್ಯಕ್ಷ ಶ್ರೀಪತಿ ಭಾರದ್ವಾಜ್ ತಿಳಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾರ್ವಜನಿಕರ ಆರೋಗ್ಯದ ಹಿತದೃಷ್ಟಿಯಿಂದ ನಗರದ ಬಂದೀಗೌಡ ಬಡಾವಣೆಯ ಗಾಯತ್ರಿ ಸಮುದಾಯ ಭವನದಲ್ಲಿ ಶಿಬಿರ ನಡೆಯಲಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಭಾಗವಹಿಸಿ ಇದರ ಸದುಪಯೋಗ ಪಡೆಯುವಂತೆ ಮನವಿ ಮಾಡಿದರು.




ಶಿಬಿರದಲ್ಲಿ ರಕ್ತದೊತ್ತಡ (ಬಿಪಿ), ರಕ್ತದಲ್ಲಿನ ಸಕ್ಕರೆ ಪ್ರಮಾಣ (ಶುಗರ್), ಎತ್ತರ, ತೂಕ, ಇಸಿಜಿ, ಪಿಎಫ್‌ಟಿ ಸೇರಿದಂತೆ ವಿವಿಧ ಆರೋಗ್ಯ ತಪಾಸಣೆಗಳನ್ನು ಉಚಿತವಾಗಿ ನಡೆಸಲಾಗುವುದು. ಅಗತ್ಯವಿರುವವರಿಗೆ ನಾರಾಯಣ ಹೃದಯಾಲಯದ ತಜ್ಞ ವೈದ್ಯರಿಂದ ಸಲಹೆ ಹಾಗೂ ಸಮಾಲೋಚನೆಯೂ ನೀಡಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ಆರ್. ಬಾಲಾಜಿ ಹಾಗೂ ಮಹಿಳಾ ಘಟಕದ ಅಧ್ಯಕ್ಷೆ ಮಮತಾ ರಮೇಶ್ ಉಪಸ್ಥಿತರಿದ್ದರು.

# ಮೆಟ್ರಿಕ್ ಪೂರ್ವ / ಮೆಟ್ರಿಕ್ ನಂತರದ ವಿದ್ಯಾರ್ಥಿವೇತನಕ್ಕಾಗಿ ಅರ್ಜಿ ಅಹ್ವಾನ

**ಬೆಂಗಳೂರು:** ಸಮಾಜ ಕಲ್ಯಾಣ ಇಲಾಖೆ ವತಿಯಿಂದ 2026-27 ನೇ ಸಾಲಿನ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಯೋಜನೆಯಡಿ ಅರ್ಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿವೇತನಕ್ಕಾಗಿ https://ssp.postmatric.karnataka.gov.inವೆಬ್ ಸೈಟ್ ನ ಮೂಲಕ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು ಅರ್ಜಿಗಳನ್ನು ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಜಂಟಿ ನಿರ್ದೇಶಕರ ಕಚೇರಿ, ಸಮಾಜ ಕಲ್ಯಾಣ ಇಲಾಖೆ, ನಂ.21/1, ಜೆಲಿಟ್ಟಾ ಟವರ್ಸ್, ಮೊದಲನೇ ಮಹಡಿ, ಸಂಪಂಗಿರಾಮನಗರ, ಬೆಂಗಳೂರು?560027 ದೂರವಾಣಿ: 080-22240449/9480843019. ಸಹಾಯಕ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಉತ್ತರ ತಾಲ್ಲೂಕು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹತ್ತಿರ, ಯಲಹಂಕ ಎನ್.ಇ.ಎಸ್, ಬೆಂಗಳೂರು ಉತ್ತರ – 560064 ದೂರವಾಣಿ: 080-28461351/9480843051. ಸಹಾಯಕ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಎಸ್. ಕರಿಯಪ್ಪ ರಸ್ತೆ,ಕನಕಪುರ ಮುಖ್ಯರಸ್ತೆ ,ಬನಶಂಕರಿ, ಬೆಂಗಳೂರು- 560070 ದೂರವಾಣಿ: 080-26711096/9480843050. ಸಹಾಯಕ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ,ಬೆಂಗಳೂರು ಪೂರ್ವ ತಾಲ್ಲೂಕು, ಟಿ.ಸಿ.ಪಾಳ್ಯ ಮುಖ್ಯರಸ್ತೆ, ಬೆಂಗಳೂರು-560049, ದೂರವಾಣಿ ಸಂಖ್ಯೆ : 080-29535045/ 9480843049. ಸಮಾಜ ಕಲ್ಯಾಣ ಇಲಾಖೆ, ಆನೇಕಲ್ ತಾಲ್ಲೂಕು ಟಿ.ಎ.ಪಿ.ಸಿ.ಎಂ.ಎಸ್ ಬಿಲ್ಡಿಂಗ್. ಬಸ್ಟಾಂಡ್ ಹಿಂಭಾಗ ಆನೇಕಲ್, ಬೆಂಗಳೂರು-562106, ದೂರವಾಣಿ ಸಂಖ್ಯೆ : 080-27859557/9480843052 ಸಂಪರ್ಕಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 080-22240449, ಇ-ಮೇಲ್ dswourban@gmail.com ಅನ್ನು ಸಂಪರ್ಕಿಸಬಹುದು ಎಂದು ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



**ಬೆಂಗಳೂರು ನಗರ ಜಿಲ್ಲಾ ಪಂಚಾಯತ್ ಸಹಯೋಗದೊಂದಿಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಜುಲೈ 21 ರಂದು ಸರ್ಜಾಪುರ ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಯಲ್ಲಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಡೆಂಗೀ ವಿರೋಧಿ ಮಾಸಾಚರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.**
**ಇದೇ ಸಂದರ್ಭದಲ್ಲಿ ಸಾರ್ವಜನಿಕರಲ್ಲಿ ಡೆಂಗೀ ತಡೆಗೆ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಅರಿವು ಮೂಡಿಸುವುದರ ಜೊತೆಗೆ ?ಪರಿಶೀಲಿಸಿ, ಸ್ವಚ್ಛಗೊಳಿಸಿ ಹಾಗೂ ಮುಚ್ಚಿಡಿ" ಎಂಬ ಘೋಷವಾಕ್ಯದೊಂದಿಗೆ ನರ್ಸಿಂಗ್ ವಿದ್ಯಾರ್ಥಿಗಳಿಂದ ಹಾಗೂ ಆಶಾ ಕಾರ್ಯಕರ್ತೆಯರಿಂದ ಜಾಥಾ ಕಾರ್ಯಕ್ರಮವನ್ನು ಮಾಡಲಾಯಿತು. ಕಾರ್ಯಕ್ರಮದಲ್ಲಿ ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳು, ತಾಲ್ಲೂಕು ಆರೋಗ್ಯಾಧಿಕಾರಿಗಳು ಹಾಗೂ ಆರೋಗ್ಯ ಇಲಾಖೆಯ ಸಿಬ್ಬಂದಿವರ್ಗದವರು ಉಪಸ್ಥಿತರಿದರು.**

# ಶತ್ರು-ಮಿತ್ರ ಕೀಟ ಹಾಗೂ ತರಕಾರಿಯಲ್ಲಿ ಕೀಟ ನಿರ್ವಹಣೆ ಕುರಿತು ರೈತರಿಗೆ ಉಚಿತ ತರಬೇತಿ

**ಬೆಂಗಳೂರು ನಗರ ಜಿಲ್ಲೆ:** ಬೆಂಗಳೂರು ನಗರ ಜಿಲ್ಲೆಯ ಆನೇಕಲ್ ತಾಲ್ಲೂಕಿನ ರಾಮಕೃಷ್ಣಪುರ, ಜಿಲ್ಲಾ ಕೃಷಿ ತರಬೇತಿ ಕೇಂದ್ರ ಆರ್.ಕೆ.ಶಾಲಾವತಿಯಿಂದ ಜುಲೈ 27 ರಂದು ಬೆಳಿಗ್ಗೆ 10 ಗಂಟೆಗೆ ರೈತರಿಗೆ ಶತ್ರು ಮತ್ತು ಮಿತ್ರ ಕೀಟ ಹಾಗೂ ತರಕಾರಿಯಲ್ಲಿ ಕೀಟ ನಿರ್ವಹಣೆ ಕುರಿತು ಒಂದು ದಿನದ ಉಚಿತ ತರಬೇತಿ ಕಾರ್ಯಕ್ರಮವನ್ನು ಕೊಡ್ಲಿಪುರ ಗ್ರಾಮದ ಶ್ರೀ ಬಸವೇಶ್ವರ ದೇವಸ್ಥಾನ ಅತ್ತಿಬೆಲೆ ಹೋಬಳಿ ಆನೇಕಲ್ ತಾಲ್ಲೂಕಿನ ಅತ್ತಿಬೆಲೆ ಹೋಬಳಿಯಲ್ಲಿ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದಲ್ಲಿ ಕೀಟಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ರಾಮೇಗೌಡ ಅವರು ಶತ್ರು ಹಾಗೂ ಮಿತ್ರ ಕೀಟಗಳ ಮಹತ್ವ, ಬೆಳೆ ಸಂರಕ್ಷಣೆಯಲ್ಲಿ ಅವುಗಳ ಪಾತ್ರ ಮತ್ತು ತರಕಾರಿ ಬೆಳೆಗಳಲ್ಲಿ ವೈಜ್ಞಾನಿಕ ಕೀಟ ನಿರ್ವಹಣೆಯ ಕುರಿತು ಮಾಹಿತಿ ನೀಡಲಿದ್ದಾರೆ.

ಇದೇ ವೇಳೆ ಕೃಷಿ ಇಲಾಖೆಯ ಅಧಿಕಾರಿಗಳು ಇಲಾಖೆಯ ವಿವಿಧ ಯೋಜನೆಗಳು, ಬೆಳೆ ವಿಮೆ ಹಾಗೂ ಪರ್ಯಾಯ ಬೆಳೆ ಯೋಜನೆಗಳ ಕುರಿತು ರೈತರಿಗೆ ಮಾಹಿತಿ ನೀಡಲಿದ್ದಾರೆ.


ತರಬೇತಿಯಲ್ಲಿ ಭಾಗವಹಿಸಲು ಆಸಕ್ತ ರೈತರು ಹಾಗೂ ರೈತ ಮಹಿಳೆಯರು ದೂರವಾಣಿ ಸಂಖ್ಯೆ 6363695621 ಅನ್ನು ಸಂಪರ್ಕಿಸಿ ಹೆಸರು ನೋಂದಾಯಿಸಿಕೊಳ್ಳಬಹುದು. ತರಬೇತಿಗೆ ಹಾಜರಾಗುವವರು ಫ್ರೂಟ್ಸ್ ಐಡಿ (FID) ಅಥವಾ ಆಧಾರ್ ಕಾರ್ಡ್ ಕಡ್ಡಾಯವಾಗಿ ತರಬೇಕು ಎಂದು ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಸಹಾಯಕ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸೋಲಿಗೆ ಸೋಲದ ಆಶುತೋಷ್



ಡಾ.ಸುಧಾಕರ.ಜಿ.ಲಕ್ಕವಳ್ಳಿ

ದೇಶದ ಪ್ರತಿಷ್ಠಿತ ತಾಂತ್ರಿಕ ಸಂಸ್ಥೆಯೊಂದರ ಚಿನ್ನದ ಪದಕ ವಿಜೇತರೊಬ್ಬರು ಐದು ವರ್ಷಗಳ ಕಾಲ ಮನೆಯಲ್ಲಿ ಕುಳಿತಿದ್ದರೆ ಹೇಗಿರುತ್ತದೆ? ಲಕ್ನೋದ ಆಶುತೋಷ್ ಕುಮಾರ್ ಅವರ ಕಥೆ ಅದೇ. ವಿದ್ಯುತ್ ವಿಭಾಗದಲ್ಲಿ ಶೇಕಡಾ ತೊಂಬತ್ತೊಂಬತ್ತು ಅಂಕಗಳೊಂದಿಗೆ ಪದವಿ ಮುಗಿಸಿ, ಉತ್ತಮ ಸಂಬಳದ ಕೆಲಸವನ್ನು ಬಿಟ್ಟು ಅವರು ಆಯ್ದುಕೊಂಡಿದ್ದು ದೇಶಸೇವೆಯ ಹಾದಿ. ಗುರಿ ಒಂದೇ, ನಾಗರಿಕ ಸೇವಾ ಪರೀಕ್ಷೆ. ಆದರೆ ಬದುಕು ಅವರನ್ನು ಸುಲಭವಾಗಿ ಬಿಡಲಿಲ್ಲ.




ಮೊದಲ ಮೂರು ಪ್ರಯತ್ನಗಳು ಸತತ ಸೋಲು. ಅತ್ಯುತ್ತಮ ವಿದ್ಯಾರ್ಥಿ ಎಂಬ ಹೆಗ್ಗಳಿಕೆಯೂ ನಾಗರಿಕ ಸೇವಾ ಪರೀಕ್ಷೆಯ ಮುಂದೆ ನಿಷ್ಪ್ರಯೋಜಕವಾಯಿತು. ಗೆಳೆಯರು ದೊಡ್ಡ ಕಂಪನಿಗಳಲ್ಲಿ ನೆಲೆಸುತ್ತಿದ್ದಾಗ ಆಶುತೋಷ್ ಮಾತ್ರ ಪುಸ್ತಕದೊಂದಿಗೆ ಹೋರಾಡುತ್ತಿದ್ದರು. ಸಮಾಜದ ಪ್ರಶ್ನೆ, ಮನೆಯ ಒತ್ತಡ, ವೈಯಕ್ತಿಕ ಹತಾಶೆ ಎಲ್ಲವನ್ನೂ ಮೀರಿ ಅವರು ಒಂದು ಮಾತನ್ನು ಮಾತ್ರ ನಂಬಿದರು: "ಗೆಲುವಿನಲ್ಲಿ ಮಾತ್ರ ಯಶಸ್ಸಿಲ್ಲ, ಸೋತು ಎದ್ದು ನಿಲ್ಲುವ ಛಲವೇ ನಿಜವಾದ ಗೆಲುವು."

ಸ್ಫೂರ್ತಿ ಸುಧೆ-78

ನಾಲ್ಕನೇ ಪ್ರಯತ್ನದಲ್ಲಿ ಅವರು ಇತಿಹಾಸ ಬರೆದರು. ಎರಡು ಸಾವಿರದ ಇಪ್ಪತ್ತೊಂದರ ಪರೀಕ್ಷೆಯಲ್ಲಿ ದೇಶಕ್ಕೆ ಎಪ್ಪತ್ತೇಳನೇ ಸ್ಥಾನ. ಆದರೆ ಅಸಲಿ ಅಚ್ಚರಿ ಇನ್ನಿತ್ತು. ವ್ಯಕ್ತಿತ್ವ ಪರೀಕ್ಷೆ ಎಂಬ ಅತ್ಯಂತ ಕಠಿಣ ಘಟ್ಟದಲ್ಲಿ ಎರಡು ನೂರ ಎಪ್ಪತ್ತೈದಕ್ಕೆ ಎರಡು ನೂರ ಆರು ಅಂಕ ಪಡೆದು ದೇಶದಲ್ಲೇ ಪ್ರಥಮರಾದರು. ಲೆಕ್ಕಾಚಾರಕ್ಕೂ ನಿಲುಕದ ಈ ಸಾಧನೆ ಅವರ ನಿರಂತರ ಪರಿಶ್ರಮದ ಫಲ.

ಐದು ವರ್ಷದ ಕತ್ತಲೆಯ ಬಳಿಕ ಬಂದ ಬೆಳಕಿನ ಕಥೆ ಇದು. ಆಶುತೋಷ್ ತೋರಿಸಿಕೊಟ್ಟ ಪಾಠ ಸ್ಪಷ್ಟ: ನೀವು ಯಾವ ಕ್ಷೇತ್ರದ ಮೇರು ವಿದ್ಯಾರ್ಥಿಯಾಗಿದ್ದರೂ ಪರವಾಗಿಲ್ಲ, ಹೊಸ ಗುರಿಗೆ ಶೂನ್ಯದಿಂದ ಆರಂಭಿಸುವ ಧೈರ್ಯ ಬೇಕು. ಸೋಲಿಗೆ ಹೆದರದಿದ್ದರೆ ಸಿಂಹಾಸನವೂ ಕಾದಿರುತ್ತದೆ. ಅವರ ಜೀವನ ಇಂದಿನ ಯುವಕರಿಗೆ ಸ್ಫೂರ್ತಿಯ ದೀಪ.

# ಇಟ್ಟಿಗೆಯ ಮೇಲೆ ನಿಂತ ವಿಠ್ಠಲ ಆಷಾಢ ಏಕಾದಶಿ ಭಕ್ತ ಪುಂಡಲೀಕ ಮತ್ತು ವಾರಕರಿ ಪರಂಪರೆ



ಸಾಕ್ಷಿ ಶ್ರೀಕಾಂತ ತಿಕೋಟಿಕರ,

"ಪಂಢರಾಪುರ ಎಂಬ ದೊಡ್ಡ ನಗರ, ಅಲ್ಲಿ ವಿಠೋಬನೆಂಬ ಸಾಹುಕಾರ?" ಎಂದು ಹರಿದಾಸ ಶ್ರೇಷ್ಠ ವಿಜಯದಾಸರು ಹಾಡಿದ ಕೀರ್ತನೆಯ ಮೊದಲ ಸಾಲು ಕೇಳಿದಾಗಲೇ ಮನಸ್ಸು ಸಹಜವಾಗಿಯೇ ಪಂಢರಪುರದತ್ತ ಪಯಣ ಬೆಳೆಸುತ್ತದೆ. ಕನ್ನಡ ಮತ್ತು ಮಹಾರಾಷ್ಟ್ರದ ಭಕ್ತಿಸಂಸ್ಕೃತಿಯನ್ನು ಬೆಸೆಯುವ ಸೇತುವೆಯಂತಿರುವ ಈ ಕ್ಷೇತ್ರ ಕೇವಲ ಒಂದು ದೇವಾಲಯವಲ್ಲ; ಅದು ಭಕ್ತಿ, ಸೇವೆ, ಸಮಾನತೆ, ಮಾನವೀಯತೆ ಮತ್ತು ನಾಮಸ್ಮರಣೆಯ ಜೀವಂತ ವಿಶ್ವವಿದ್ಯಾಲಯವಾಗಿದೆ.

ಆಷಾಢಿ ಏಕಾದಶಿ ಎಂದರೆ ವಾರಕರಿಗಳ ಪಾಲಿಗೆ ಕೇವಲ ಒಂದು ಹಬ್ಬವಲ್ಲ. ಅದು ಜೀವನದ ಮಹಾಯಾತ್ರೆ, ಆತ್ಮಶುದ್ಧಿಯ ಸಾಧನೆ ಮತ್ತು ಭಕ್ತಿಯ ಪರಾಕಾಷ್ಠೆ. ಲಕ್ಷಾಂತರ ಭಕ್ತರು ನೂರಾರು ಕಿಲೋಮೀಟರ್‌ಗಳನ್ನು ಕಾಲ್ನಡಿಗೆಯಲ್ಲಿ ಕ್ರಮಿಸಿ ಪಂಢರಪುರದ ವಿಠ್ಠಲನ ದರ್ಶನ ಪಡೆಯಲು ಹೊರಡುತ್ತಾರೆ. ಅವರ ಪಾಲಿಗೆ ಈ ಯಾತ್ರೆಯ ಪ್ರತಿಯೊಂದು ಹೆಜ್ಜೆಯೂ ಒಂದು ಜಪ, ಪ್ರತಿಯೊಂದು ಉಸಿರೂ ಒಂದು ಪ್ರಾರ್ಥನೆ, ಪ್ರತಿಯೊಂದು ಬೆವರಿನ ಹನಿಯೂ ಒಂದು ಅರ್ಪಣೆಯಾಗಿರುತ್ತದೆ.

ಈ ಮಹಾನ್ ಸಂಪ್ರದಾಯದ ಕೇಂದ್ರಬಿಂದುವೇ ಭಕ್ತ ಪುಂಡಲೀಕ. ಭಾರತೀಯ ಸಂಸ್ಕೃತಿಯಲ್ಲಿ ಮಾತೃ?ಪಿತೃ ಸೇವೆಯನ್ನು ದೇವರ ಆರಾಧನೆಗಿಂತಲೂ ಶ್ರೇಷ್ಠವೆಂದು ಸಾರುವ ಅಪೂರ್ವ ಆದರ್ಶ ಅವನದು. ಆರಂಭದಲ್ಲಿ ಸಾಮಾನ್ಯ ಗೃಹಸ್ಥನಾಗಿದ್ದ ಪುಂಡಲೀಕನು ನಂತರ ತನ್ನ ಬದುಕನ್ನೇ ಬದಲಿಸಿಕೊಂಡು ತಂದೆ?ತಾಯಿಯ ಸೇವೆಯನ್ನೇ ಪರಮಧರ್ಮವನ್ನಾಗಿ ಮಾಡಿಕೊಂಡನು. ಅವನ ನಿಷ್ಕಾಮ ಸೇವೆಯಿಂದ ಪ್ರಸನ್ನನಾದ ಶ್ರೀಹರಿಯು ಸ್ವತಃ ಅವನ ಮನೆಗೆ ಬಂದನೆಂದು ಪುರಾಣಗಳು ಹೇಳುತ್ತವೆ.

ಆದರೆ ಆ ಕ್ಷಣದಲ್ಲಿಯೂ ಪುಂಡಲೀಕನು ತನ್ನ ತಂದೆ?ತಾಯಿಯ ಸೇವೆಯನ್ನು ಅರ್ಧಕ್ಕೆ ಬಿಡಲಿಲ್ಲ. ದೇವರಿಗೆ ತಕ್ಷಣ ಪೂಜೆ ಸಲ್ಲಿಸುವ ಬದಲು ಒಂದು



ಇಟ್ಟಿಗೆಯನ್ನು ಎಸೆದು, "ಸ್ವಲ್ಪ ಕ್ಷಣ ಅದರ ಮೇಲೆ ನಿಲ್ಲಿರಿ" ಎಂದು ವಿನಂತಿಸಿದನು. ಭಕ್ತನ ಸೇವಾಭಾವವನ್ನು ಗೌರವಿಸಿದ ಭಗವಂತನು ಆ ಇಟ್ಟಿಗೆಯ ಮೇಲೆಯೇ ನಿಂತು ಕಾಯುತ್ತಿದ್ದನು. ಭಕ್ತನಿಗಾಗಿ ದೇವರೇ ಕಾದ ಅಪೂರ್ವ ಪ್ರಸಂಗ ಇದು. ಇದೇ ಕಾರಣದಿಂದ ಪಂಢರಪುರದ ವಿಠ್ಠಲನ ಮೂರ್ತಿಯು ಇಂದಿಗೂ ಇಟ್ಟಿಗೆಯ ಮೇಲೆ ನಿಂತಿರುವ ಭಂಗಿಯಲ್ಲಿ ಕಾಣಿಸುತ್ತದೆ.

**ಈ ಕಥೆ ಕೇವಲ ಪುರಾಣಕಥೆಯಲ್ಲ;** ಅದು ಒಂದು ಜೀವನದರ್ಶನ. ದೇವರನ್ನು ಕಾಣುವ ದಾರಿ ದೂರದ ತಪಸ್ಸಿನಲ್ಲಿ ಮಾತ್ರವಿಲ್ಲ, ಮನೆಯಲ್ಲೇ ತಂದೆ?ತಾಯಿಯ ಸೇವೆಯಲ್ಲಿ, ನಿಸ್ವಾರ್ಥ ಪ್ರೀತಿಯಲ್ಲಿ, ಕರುಣೆಯಲ್ಲಿ ಮತ್ತು ಕರ್ತವ್ಯನಿಷ್ಠೆಯಲ್ಲಿ ಇದೆ ಎಂಬ ಸಂದೇಶವನ್ನು ಇದು ಸಾರುತ್ತದೆ.

**ಆದ್ದರಿಂದಲೇ ವಾರಕರಿಗಳ ಕಂಠದಲ್ಲಿ ನಿರಂತರವಾಗಿ ಮೊಳಗುವ ಘೋಷಣೆ?**

"ಪುಂಡಲೀಕ ವರದೇ ಹರಿ ವಿಠ್ಠಲ!"

ಈ ಜಯಘೋಷದಲ್ಲಿ ಭಕ್ತನ ಸೇವೆಗೆ ದೇವರು ತಲೆಬಾಗಿದ ಭಾರತೀಯ ಸಂಸ್ಕೃತಿಯ ಅಮರ ತತ್ವ ಅಡಗಿದೆ.

ವಾರಕರಿ ಸಂಪ್ರದಾಯವು ಸುಮಾರು ಎಂಟು ಶತಮಾನಗಳಿಂದ ಮಹಾರಾಷ್ಟ್ರದ ಜನಜೀವನದೊಂದಿಗೆ ಬೆಸೆದುಕೊಂಡಿದೆ. ಸಂತ ಜ್ಞಾನೇಶ್ವರ, ಸಂತ ನಾಮದೇವ, ಸಂತ ಏಕನಾಥ ಮತ್ತು ಸಂತ ತುಕಾರಾಮರಂತಹ ಮಹಾನ್ ಸಂತರು ಈ ಪರಂಪರೆಗೆ ಹೊಸ ಜೀವ ತುಂಬಿದರು. ಅವರ ಅಭಂಗಗಳು ಕೇವಲ ಭಕ್ತಿಗೀತೆಗಳಲ್ಲ; ಅವು ಸಮಾಜದಲ್ಲಿ ಸಮಾನತೆ, ಪ್ರೀತಿ, ದಯೆ, ಸೇವೆ ಮತ್ತು ಮಾನವೀಯತೆಯನ್ನು ಬಿತ್ತಿದ ಜೀವನದರ್ಶನಗಳಾಗಿವೆ.

ವಾರಕರಿ ಎಂಬ ಪದದ ಅರ್ಥವೇ ವರ್ಷದಿಂದ ವರ್ಷಕ್ಕೆ ವಿಠ್ಠಲನ ದರ್ಶನಕ್ಕಾಗಿ ವಾರಿ ಮಾಡುವ ಭಕ್ತ. ಅವರು ದೇವರನ್ನು ದೂರದ ಸ್ವರ್ಗದಲ್ಲಿ ಹುಡುಕುವುದಿಲ್ಲ. ಪ್ರತಿಯೊಬ್ಬ ಜೀವಿಯಲ್ಲೂ, ಪ್ರತಿಯೊಂದು ನಾಮಸ್ಮರಣೆಯಲ್ಲೂ, ಪ್ರತಿಯೊಂದು ಸೇವೆಯಲ್ಲೂ ವಿಠ್ಠಲನನ್ನು ಕಾಣುತ್ತಾರೆ. ಆದ್ದರಿಂದಲೇ ವಾರಕರಿ ಸಂಪ್ರದಾಯದಲ್ಲಿ ಭಕ್ತಿ ಮತ್ತು ಸೇವೆ ಒಂದೇ ನಾಣ್ಯದ ಎರಡು ಮುಖಗಳಾಗಿವೆ.

ಪಂಢರಪುರದ ವಿಠ್ಠಲನು ತನ್ನ ಭಕ್ತರಿಗೆ ದೇವರಿಗಿಂತ ಹೆಚ್ಚಾಗಿ "ಮಾವುಲಿ". ಮರಾಠಿಯಲ್ಲಿ "ಮಾವುಲಿ" ಎಂದರೆ ತಾಯಿ. ಭಕ್ತನನ್ನು ತನ್ನ ಮಗುವಿನಂತೆ ಪ್ರೀತಿಸುವ ದೇವರನ್ನು ತಾಯಿಯ ರೂಪದಲ್ಲಿ ಕಾಣುವ ಈ ಭಾವನೆ ಭಾರತೀಯ ಭಕ್ತಿ ಸಾಹಿತ್ಯದಲ್ಲಿಯೇ ಅತ್ಯಂತ ಅಪೂರ್ವವಾದುದು. ಹೀಗಾಗಿ ವಾರಕರಿಗಳ ಪಾಲಿಗೆ ಪಂಢರಪುರದ ಯಾತ್ರೆ ದೇವರನ್ನು ನೋಡುವ ಪ್ರಯಾಣವಲ್ಲ; ತಾಯಿಯನ್ನು ಕಾಣಲು ಹೊರಡುವ ಮಗುವಿನ ಹೃದಯಯಾತ್ರೆಯಾಗಿದೆ.

**ಆಷಾಢ ಏಕಾದಶಿಯ ಮಹತ್ವ**

ಸನಾತನ ಹಿಂದೂ ಸಂಪ್ರದಾಯದಲ್ಲಿ ವರ್ಷವಿಡೀ ಬರುವ ಇಪ್ಪತ್ತನಾಲ್ಕು ಏಕಾದಶಿಗಳಲ್ಲಿ ಆಷಾಢಿ



ಏಕಾದಶಿಗೆ ವಿಶಿಷ್ಟವಾದ ಮಹತ್ವವಿದೆ. ಈ ದಿನವನ್ನು ಭಕ್ತಿ, ನಾಮಸ್ಮರಣೆ, ಉಪವಾಸ, ಜಾಗರಣೆ ಮತ್ತು ಆತ್ಮಶುದ್ಧಿಯ ದಿನವೆಂದು ಆಚರಿಸಲಾಗುತ್ತದೆ. ಮಹಾರಾಷ್ಟ್ರದಲ್ಲಿ ಇದನ್ನು "ಮಹಾ ಏಕಾದಶಿ" ಎಂದೂ ಕರೆಯುತ್ತಾರೆ. ಲಕ್ಷಾಂತರ ವಾರಕರಿಗಳು ಹಲವು ದಿನಗಳ ಪಾದಯಾತ್ರೆಯ ಬಳಿಕ ಈ ದಿನ ಪಂಢರಪುರದಲ್ಲಿ ಶ್ರೀ ವಿಠ್ಠಲನ ದರ್ಶನ ಪಡೆದು ತಮ್ಮ ಜೀವನ ಸಾರ್ಥಕವಾಯಿತು ಎಂದು ಭಾವಿಸುತ್ತಾರೆ.

ಪುರಾಣಗಳ ಪ್ರಕಾರ ಆಷಾಢ ಶುಕ್ಲ ಏಕಾದಶಿಯಂದು ಶ್ರೀಮಹಾವಿಷ್ಣುವು ಯೋಗನಿದ್ರೆಗೆ ಪ್ರವೇಶಿಸುತ್ತಾನೆ. ಈ ದಿನದಿಂದ ಚಾತುರ್ಮಾಸ್ಯ ಆರಂಭವಾಗುತ್ತದೆ. ಆದ್ದರಿಂದ ಈ ಏಕಾದಶಿಯು ವೈಷ್ಣವ ಸಂಪ್ರದಾಯದಲ್ಲಿ ಅತ್ಯಂತ ಪವಿತ್ರವಾದ ದಿನವೆಂದು ಪರಿಗಣಿಸಲಾಗಿದೆ. ಈ ದಿನ ಉಪವಾಸವಿದ್ದು, ವಿಷ್ಣುಸಹಸ್ರನಾಮ ಪಠಣ, ಹರಿನಾಮ ಸಂಕೀರ್ತನೆ, ಭಜನೆ ಹಾಗೂ ದಾನಧರ್ಮಗಳನ್ನು ಮಾಡುವುದರಿಂದ ಮನಸ್ಸು ಪರಿಶುದ್ಧವಾಗುತ್ತದೆ ಎಂಬ ನಂಬಿಕೆ ಇದೆ.

ಪಂಢರಪುರದ ವಿಠ್ಠಲನು ಶ್ರೀಮಹಾವಿಷ್ಣುವಿನ ಕರುಣಾಮಯ ರೂಪವೆಂದು ಭಕ್ತರು ನಂಬುತ್ತಾರೆ. ಆದ್ದರಿಂದ ಆಷಾಢಿ ಏಕಾದಶಿಯಂದು ವಿಠ್ಠಲನ ದರ್ಶನ ಪಡೆಯುವುದು ಎಂದರೆ ಕೇವಲ ದೇವರ ಮೂರ್ತಿಯನ್ನು ನೋಡುವುದಲ್ಲ; ಭಕ್ತಿ, ಸೇವೆ, ಸಮಾನತೆ ಮತ್ತು ಪ್ರೀತಿಯ ಜೀವನದರ್ಶನವನ್ನು ಅಪ್ಪಿಕೊಳ್ಳುವುದಾಗಿದೆ. ಈ ದಿನ ಜಾತಿ, ಮತ, ಭಾಷೆ, ಆರ್ಥಿಕ ಸ್ಥಿತಿ ಎಂಬ ಎಲ್ಲ ಭೇದಗಳು ಕರಗಿ ಹೋಗುತ್ತವೆ. ಎಲ್ಲರೂ "ಮಾವುಲಿ" ಎಂಬ ಒಂದೇ ಭಾವದಲ್ಲಿ ಒಂದಾಗುತ್ತಾರೆ.

ವಾರಕರಿ ಸಂಪ್ರದಾಯವು ನಮಗೆ ತಿಳಿಸುವ ಮಹತ್ವದ ಸಂದೇಶವೆಂದರೆ, ಭಗವಂತನನ್ನು ತಲುಪುವ ದಾರಿ ಕೇವಲ ದೇವಾಲಯದಲ್ಲಿಲ್ಲ; ನಾಮಸ್ಮರಣೆಯಲ್ಲಿ, ನಿಸ್ವಾರ್ಥ ಸೇವೆಯಲ್ಲಿ, ಮಾತೃ?ಪಿತೃ ಭಕ್ತಿಯಲ್ಲಿ, ಕರುಣೆಯಲ್ಲಿ ಮತ್ತು ಮಾನವೀಯತೆಯಲ್ಲಿಯೂ ಇದೆ. ಭಕ್ತ ಪುಂಡಲೀಕನ ಜೀವನ ಈ ಸತ್ಯಕ್ಕೆ ಶಾಶ್ವತ ಸಾಕ್ಷಿಯಾಗಿದೆ.

ಆಷಾಢಿ ಏಕಾದಶಿಯು ಉಪವಾಸದ ದಿನ ಮಾತ್ರವಲ್ಲ; ಅದು ಅಹಂಕಾರವನ್ನು ತ್ಯಜಿಸಿ ವಿನಯವನ್ನು ಅಳವಡಿಸಿಕೊಳ್ಳುವ ದಿನ. ಭೌತಿಕ ಬದುಕಿನ ಗೊಂದಲಗಳ ನಡುವೆ ಆತ್ಮಚಿಂತನೆಗೆ ಅವಕಾಶ ನೀಡುವ ದಿನ. ನಿಸ್ವಾರ್ಥ ಸೇವೆಯ ಮೂಲಕ ಭಗವಂತನನ್ನು ಕಾಣುವ ದಿನ. ಆದ್ದರಿಂದಲೇ ಲಕ್ಷಾಂತರ ವಾರಕರಿಗಳು ವರ್ಷಪೂರ್ತಿ ಈ ದಿನಕ್ಕಾಗಿ ಕಾಯುತ್ತಾರೆ.

ಇಂದಿನ ಯಾಂತ್ರಿಕ ಜೀವನದಲ್ಲಿ ಆಷಾಢಿ ಏಕಾದಶಿಯ ಸಂದೇಶ ಇನ್ನಷ್ಟು ಪ್ರಸ್ತುತವಾಗಿದೆ. ಭಕ್ತಿ ಎಂದರೆ ಕೇವಲ ಪೂಜೆ ಅಲ್ಲ, ಸೇವೆ; ದೇವರು ಎಂದರೆ ಕೇವಲ ಮೂರ್ತಿ ಅಲ್ಲ, ಪ್ರತಿಯೊಬ್ಬ ಜೀವಿ; ಮೋಕ್ಷ ಎಂದರೆ ಮರಣಾನಂತರದ ಗುರಿ ಮಾತ್ರವಲ್ಲ, ಪ್ರೀತಿ ಮತ್ತು ಮಾನವೀಯತೆಯಿಂದ ಬದುಕುವ ಜೀವನವೇ ಎಂಬುದನ್ನು ಈ ಪವಿತ್ರ ದಿನ ನಮಗೆ ನೆನಪಿಸುತ್ತದೆ.

# ಶಿಕ್ಷಕರಿಗೇಕೆ ಈ ಶಿಕ್ಷೆ



ಮಾಹಿತಿ ತಂತ್ರಜ್ಞಾನ (IT) ಕ್ಷೇತ್ರದಲ್ಲಿ ಕೆಲಸ ಮಾಡುವ ಉದ್ಯೋಗಿಗಳ ಕೆಲಸದ ಒತ್ತಡ ಮತ್ತು ಮನೋಒತ್ತಡದ ಕುರಿತು ಸಮಾಜದಲ್ಲಿ ಸದಾ ಚರ್ಚೆಗಳು ನಡೆಯುತ್ತಿರುತ್ತವೆ. ಆದರೆ, ಯಾವುದೇ ಸದ್ದಿಲ್ಲದೆ, ಸೂಕ್ತ ಬೆಂಬಲವೂ ಸಿಗದೆ ದಿನನಿತ್ಯ ನರಳುತ್ತಿರುವ ನಮ್ಮ ಸರ್ಕಾರಿ ಹಾಗೂ ಅನುದಾನಿತ ಶಾಲಾ ಶಿಕ್ಷಕರ ಪರಿಸ್ಥಿತಿ ಐಟಿ ಉದ್ಯೋಗಿಗಳಿಗಿಂತಲೂ ಹೆಚ್ಚು ಗಂಭೀರವಾಗಿದೆ. "ದಿನಕ್ಕೆ ಒಂದೆರಡು ಗಂಟೆ ಪಾಠ ಮಾಡುವುದು ಮತ್ತು ಸಾಲು ಸಾಲು ರಜೆಗಳನ್ನು ಅನುಭವಿಸುವುದಷ್ಟೇ ಶಿಕ್ಷಕರ ಕೆಲಸ" ಎನ್ನುವ ಸಾರ್ವಜನಿಕ ಕಲ್ಪನೆಗೂ, ಇಂದಿನ ಶಾಲಾ ಅಂಗಳದ ವಾಸ್ತವಕ್ಕೂ ಅಸಮಾನ ಅಂತರವಿದೆ.

ನಮ್ಮ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ವ್ಯವಸ್ಥೆಯು ಇಂದು ತೀವ್ರ ಬಿಕ್ಕಟ್ಟನ್ನು ಎದುರಿಸುತ್ತಿದ್ದು, ಬೋಧನೆಯೇ ಶಿಕ್ಷಕನ ಗೌಣ ಕರ್ತವ್ಯವಾಗುತ್ತಿರುವ ಆತಂಕಕಾರಿ ಸನ್ನಿವೇಶ ನಿರ್ಮಾಣವಾಗಿದೆ.

ಇತ್ತೀಚೆಗೆ ನನ್ನ ಕೆಲವು ಸ್ನೇಹಿತರು ಮತ್ತು ಸಂಬಂಧಿಕರಾಗಿರುವ ಶಿಕ್ಷಕರನ್ನು ಭೇಟಿಯಾಗುವ ಅವಕಾಶ ಸಿಕ್ಕಿತ್ತು. ಸಾಧಾರಣವಾಗಿ ಮಾತುಕತೆ ನಡೆಸುತ್ತಿದ್ದಾಗ, ಇಂದಿನ ದಿನಗಳಲ್ಲಿ ಶಿಕ್ಷಕರ ವೃತ್ತಿ ಎಷ್ಟು ಸವಾಲಿನದಾಗುತ್ತಿದೆ ಮತ್ತು ಅವರು ಎಂತಹ ಕಷ್ಟಗಳನ್ನು ಎದುರಿಸುತ್ತಿದ್ದಾರೆ ಎಂಬ ವಿಷಯ ಚರ್ಚೆಗೆ ಬಂತು. ಪ್ರತಿಯೊಬ್ಬ ಶಿಕ್ಷಕನೂ ತನ್ನ ಮನಸ್ಫೂರ್ತಿಯಾಗಿ, ಪ್ರೀತಿಯಿಂದ ಮಕ್ಕಳಿಗೆ ಪಾಠ ಮಾಡಲು ಬಯಸುತ್ತಾನೆ. ಆದರೆ, ಅವರ ಕೈಗಳನ್ನು ಬೋಧನೇತರ ಕೆಲಸಗಳಿಂದ ಕಟ್ಟಲಾಗಿದ್ದು, ತಮ್ಮ ಮೂಲ ಕರ್ತವ್ಯಕ್ಕೆ ನ್ಯಾಯ ಒದಗಿಸಲು ಸಾಧ್ಯವಾಗುತ್ತಿಲ್ಲ ಎಂಬ ನೋವು ಅವರ ಮಾತುಗಳಲ್ಲಿ ಎದ್ದುಕಾಣುತ್ತಿತ್ತು. ಇದರ ಜೊತೆಗೆ, ವರ್ಷಪೂರ್ತಿ ಬರುವ ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ದಿನಾಚರಣೆಗಳು, ಜಯಂತಿಗಳು ಹಾಗೂ ವಿವಿಧ ಉತ್ಸವಗಳನ್ನು ಶಾಲಾ ಮಟ್ಟದಲ್ಲಿ ಆಯೋಜಿಸುವ ಮತ್ತು ನಿರ್ವಹಿಸುವ ಸಂಪೂರ್ಣ ಜವಾಬ್ದಾರಿಯೂ ಅವರ ಮೇಲೆಯೇ ಬೀಳುತ್ತಿದ್ದು, ಬೋಧನೆಗೆ ಸಮಯವೇ ಸಿಗದಂತಾಗಿದೆ.

ನಮ್ಮ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ವ್ಯವಸ್ಥೆಯು ಇಂದು ತೀವ್ರ ಕಾರ್ಯಾಚರಣೆಯ ಬಿಕ್ಕಟ್ಟನ್ನು ಎದುರಿಸುತ್ತಿದ್ದು, ಬೋಧನೆಯೇ ಶಿಕ್ಷಕನ ಗೌಣ ಕರ್ತವ್ಯವಾಗುತ್ತಿರುವ ಆತಂಕಕಾರಿ ಸನ್ನಿವೇಶ ನಿರ್ಮಾಣವಾಗಿದೆ.

1. **ಕಾಯಂ ಸಿಬ್ಬಂದಿಯ ಕೊರತೆ ಮತ್ತು 'ಏಕ-ಶಿಕ್ಷಕ' ಶಾಲೆಯ ಕಷ್ಟಗಳು:** ಈ ಶೈಕ್ಷಣಿಕ ಬಿಕ್ಕಟ್ಟಿನ ಮೂಲವಿರುವುದು ಶಾಲೆಗಳಲ್ಲಿನ ಕಾಯಂ ಶಿಕ್ಷಕರ ಅಭಾವದಲ್ಲಿ. ಅನೇಕ ಶಾಲೆಗಳಲ್ಲಿ ಅಗತ್ಯಕ್ಕೆ ತಕ್ಕಷ್ಟು ಬೋಧಕ ಸಿಬ್ಬಂದಿ ಇಲ್ಲದೆ, ಇಡೀ ಶಾಲೆಯನ್ನು ಒಬ್ಬರೇ ಶಿಕ್ಷಕರು ನಡೆಸಬೇಕಾದ 'ಏಕ-ಶಿಕ್ಷಕ ಶಾಲೆಗಳ' ಸಂಖ್ಯೆ ಹೆಚ್ಚುತ್ತಿದೆ. ಇಂತಹ ಶಾಲೆಗಳಲ್ಲಿ ಒಬ್ಬರೇ ಶಿಕ್ಷಕರು ಎಲ್ಲಾ ತರಗತಿಗಳ ಮಕ್ಕಳಿಗೂ ಪಾಠ ಮಾಡಬೇಕು, ಶಾಲೆಯ ಆಡಳಿತ ನೋಡಿಕೊಳ್ಳಬೇಕು, ಮಧ್ಯಾಹ್ನದ ಬಿಸಿಯೂಟದ ಉಸ್ತುವಾರಿ ವಹಿಸಬೇಕು ಮತ್ತು ಸರ್ಕಾರಿ ವರದಿಗಳನ್ನು ಸಿದ್ಧಪಡಿಸಬೇಕು. ತಾತ್ಕಾಲಿಕವಾಗಿ ನೇಮಕಗೊಳ್ಳುವ ಅತಿಥಿ ಶಿಕ್ಷಕರಿಗೆ ಸೂಕ್ತ ವೇತನ ಸೌಲಭ್ಯ ಹಾಗೂ ಉದ್ಯೋಗ ಭದ್ರತೆ ಇಲ್ಲದಿರುವುದರಿಂದ, ಅವರು ಪದೇ ಪದೇ ಕೆಲಸ ತೊರೆಯುತ್ತಿದ್ದಾರೆ. ಇದು ವಿದ್ಯಾರ್ಥಿಗಳ ದಿನನಿತ್ಯದ ಕಲಿಕೆಯ ನಿರಂತರತೆಗೆ ಭಂಗ ತರುತ್ತಿದೆ.
2. **ಆಡಳಿತಾತ್ಮಕ ಹೊರೆ ಮತ್ತು ವರದಿಗಳ ಹಾವಳಿ:** ಶಿಕ್ಷಕನನ್ನು ಸಮಾಜವನ್ನು ಕಟ್ಟುವ ಮಾರ್ಗದರ್ಶಕ ಎಂದು ಪರಿಗಣಿಸುವ ಬದಲು, ಸರ್ಕಾರಿ ಯೋಜನೆಗಳ ಜಾರಿಗಾರ ಹಾಗೂ ಕ್ಲರಿಕಲ್ ನೌಕರನನ್ನಾಗಿ ಮಾಡಿರುವುದು ದೊಡ್ಡ ದುರಂತ.
   ಚುನಾವಣೆ ಮತ್ತು ಗಣತಿ ಜವಾಬ್ದಾರಿ: ಶಿಕ್ಷಣ ಇಲಾಖೆಯ ಕೆಲಸಗಳ ಜೊತೆಗೆ, ಮತದಾರರ ಪಟ್ಟಿ ಪರಿಷ್ಕರಣೆ, ಬೂತ್ ಮಟ್ಟದ ಅಧಿಕಾರಿ (ಃಐಔ) ಕರ್ತವ್ಯಗಳು ಹಾಗೂ ವಿವಿಧ ರೀತಿಯ ಸಾಮಾಜಿಕ-ಆರ್ಥಿಕ ಸಮೀಕ್ಷೆಗಳಿಗೆ ಶಿಕ್ಷಕರನ್ನೇ ಪ್ರಮುಖ ಕಾರ್ಯಪಡೆಯಾಗಿ ಬಳಸಿಕೊಳ್ಳಲಾಗುತ್ತಿದೆ.
   ಕಲ್ಯಾಣ ಯೋಜನೆಗಳ ನಿರ್ವಹಣೆ: ಬಿಸಿಯೂಟಕ್ಕೆ ಬೇಕಾದ ಸಾಮಗ್ರಿಗಳ ಖರೀದಿ, ಸಮವಸ್ತ್ರ ಹಾಗೂ ಸೈಕಲ್ ವಿತರಣೆ, ವಿದ್ಯಾರ್ಥಿವೇತನದ ಲೆಕ್ಕಪತ್ರಗಳು ಮತ್ತು ಸ್ಥಳೀಯ ವ್ಯಾಪಾರಿಗಳ ಬಿಲ್ ನಿರ್ವಹಣೆಯನ್ನು ಶಿಕ್ಷಕರೇ ಸ್ವತಃ ಮಾಡಬೇಕಾಗಿದೆ.
   ಈ ಎಲ್ಲಾ ಬೋಧನೇತರ ಕೆಲಸಗಳ ಕಾರಣದಿಂದಾಗಿ ಒಬ್ಬ ಶಿಕ್ಷಕನ ಅಮೂಲ್ಯ ಬೋಧನಾ ಸಮಯವು ತರಗತಿಯಿಂದ ಹೊರಗೆ ವರದಿಗಳನ್ನು ತಯಾರಿಸುವುದರಲ್ಲೇ ವ್ಯರ್ಥವಾಗುತ್ತಿದೆ.

1. ' ಡಿಜಿಟಲ್' ಕಿರುಕುಳ ಮತ್ತು ತಾಂತ್ರಿಕ ತೊಡಕುಗಳು
   ತಂತ್ರಜ್ಞಾನವು ಕೆಲಸವನ್ನು ಸರಳಗೊಳಿಸಬೇಕಿತ್ತು, ಆದರೆ ಅಪಕ್ವ ಡಿಜಿಟಲೀಕರಣವು ಶಿಕ್ಷಕರಿಗೆ ಮಾನಸಿಕ ಹಿಂಸೆಯಾಗಿ ಪರಿಣಮಿಸಿದೆ.
   ಶಾಲೆಗಳಲ್ಲಿ ದೈನಂದಿನ ವಿದ್ಯಾರ್ಥಿಗಳ ಮಾಹಿತಿ ಮತ್ತು ಹಾಜರಾತಿಯನ್ನು ನಮೂದಿಸಲು ವಿವಿಧ ಪೋರ್ಟಲ್‌ಗಳನ್ನು ಬಳಸಬೇಕಾಗುತ್ತದೆ. ಆದರೆ, ಇಂಟರ್ನೆಟ್ ಸಂಪರ್ಕದ ಸಮಸ್ಯೆ ಮತ್ತು ತಾಂತ್ರಿಕ ಸರ್ವರ್ ಸ್ಥಗಿತದಿಂದಾಗಿ, ಶಿಕ್ಷಕರು ತಡರಾತ್ರಿ ಅಥವಾ ಮುಂಜಾನೆ ಎದ್ದು ದತ್ತಾಂಶ ಅಪ್‌ಲೋಡ್ ಮಾಡಲು ಕಾಯಬೇಕಾದ ಸ್ಥಿತಿಯಿದೆ. ವಿಶೇಷವಾಗಿ ಗ್ರಾಮೀಣ ಭಾಗಗಳಲ್ಲಿ ಸರಿಯಾದ ನೆಟ್‌ವರ್ಕ್ ಸಿಗದೆ ಶಿಕ್ಷಕರು ತೀವ್ರ ಪರದಾಟ ಅನುಭವಿಸುತ್ತಿದ್ದಾರೆ. ಖಾಸಗಿ ಸಂಸ್ಥೆಗಳಂತೆ ಸರ್ಕಾರಿ ಶಾಲೆಗಳಲ್ಲಿ ಪ್ರತ್ಯೇಕ 'ಡೇಟಾ ಎಂಟ್ರಿ' ಸಿಬ್ಬಂದಿ ಇಲ್ಲದಿರುವುದು ಈ ಸಮಸ್ಯೆಯನ್ನು ದ್ವಿಗುಣಗೊಳಿಸಿದೆ.

**1. ಪ್ರಾದೇಶಿಕ ಸವಾಲುಗಳು ಮತ್ತು ಸಾಮರಸ್ಯದ ಅಭಾವ**

ಈ ಬಿಕ್ಕಟ್ಟಿನ ಸ್ವರೂಪವು ಪ್ರದೇಶದಿಂದ ಪ್ರದೇಶಕ್ಕೆ ವಿಭಿನ್ನ ಸವಾಲುಗಳನ್ನು ತಂದೊಡ್ಡಿದೆ:

- ಬೋಧಕರ ತೀವ್ರ ಅಭಾವವಿರುವ ಪ್ರದೇಶಗಳು: ಕೆಲವು ಜಿಲ್ಲೆಗಳಲ್ಲಿ ಕಾಯಂ ಶಿಕ್ಷಕರ ಸಂಖ್ಯೆ ತೀರಾ ಕಡಿಮೆಯಿದ್ದು, ಶಾಲೆಗಳು ಸಂಪೂರ್ಣವಾಗಿ ಅತಿಥಿ ಶಿಕ್ಷಕರ ಮೇಲೆಯೇ ನಡೆಯುತ್ತಿವೆ. ಇದರಿಂದಾಗಿ ಶೈಕ್ಷಣಿಕ ಗುಣಮಟ್ಟ ಕುಸಿಯುತ್ತಿದೆ.
- ಆಡಳಿತಾತ್ಮಕ ಮತ್ತು ಮೂಲಸೌಕರ್ಯದ ಬಿಕ್ಕಟ್ಟು: ಕೆಲವು ಭಾಗಗಳಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶಗಳ ನಡುವೆ ಶಿಕ್ಷಕರ ನಿಯೋಜನೆಯಲ್ಲಿ ಅಸಮತೋಲನವಿದೆ. ಇದರ ಜೊತೆಗೆ, ತಾಂತ್ರಿಕ ಪೋರ್ಟಲ್‌ಗಳಲ್ಲಿ ದಾಖಲೆಗಳ ಅಪ್‌ಲೋಡ್ ವಿಳಂಬವಾಗುವುದರಿಂದ ವಿದ್ಯಾರ್ಥಿಗಳಿಗೆ ಸಮಯಕ್ಕೆ ಸರಿಯಾಗಿ ಪ್ರಮಾಣಪತ್ರಗಳನ್ನು ನೀಡಲು ಸಾಧ್ಯವಾಗುತ್ತಿಲ್ಲ. ಇದು ಪೋಷಕರು ಮತ್ತು ಶಿಕ್ಷಕರ ನಡುವೆ ಅನಗತ್ಯ ಮನಸ್ತಾಪಗಳಿಗೆ ಕಾರಣವಾಗುತ್ತಿದೆ.

1. **ಸುಧಾರಣೆಗೆ ಬೇಕಾದ ನೀತಿ ಚೌಕಟ್ಟುಗಳು**

ಶಿಕ್ಷಕರಲ್ಲಿ ಉಂಟಾಗುತ್ತಿರುವ ಮಾನಸಿಕ ಒತ್ತಡವನ್ನು ನಿವಾರಿಸಿ, ಸಾರ್ವಜನಿಕ ಶಿಕ್ಷಣದ ಗುಣಮಟ್ಟವನ್ನು ಕಾಯ್ದುಕೊಳ್ಳಲು ಸರ್ಕಾರ ಮತ್ತು ಶಿಕ್ಷಣ ಇಲಾಖೆ ತಕ್ಷಣವೇ ಕೆಳಗಿನ ಕ್ರಮಗಳನ್ನು ಕೈಗೊಳ್ಳಬೇಕಿದೆ:

1. ಬೋಧನೇತರ ಕರ್ತವ್ಯಗಳಿಂದ ಮುಕ್ತಿ: ಶಾಲೆಗಳ ಶಿಕ್ಷಕರನ್ನು ಯಾವುದೇ ಕಾರಣಕ್ಕೂ ಬೋಧನೇತರ, ಸಮೀಕ್ಷಾ ಅಥವಾ ಕಂದಾಯ ಕೆಲಸಗಳಿಗೆ ನಿಯೋಜಿಸಬಾರದು.
2. ಕ್ಲರಿಕಲ್ ಸಿಬ್ಬಂದಿ ನೇಮಕ: ಪ್ರತಿಯೊಂದು ಶಾಲಾ ಸಮುಚ್ಚಯ (ಕ್ಲಸ್ಟರ್) ಮಟ್ಟದಲ್ಲಿ ಆಡಳಿತಾತ್ಮಕ ಡೇಟಾ ಎಂಟ್ರಿ ಕೆಲಸಗಳನ್ನು ನಿರ್ವಹಿಸಲು ಪ್ರತ್ಯೇಕ ಸಿಬ್ಬಂದಿಯನ್ನು ನೇಮಿಸಬೇಕು.
3. ಕಾಯಂ ನೇಮಕಾತಿ: ಖಾಲಿಯಿರುವ ಕಾಯಂ ಶಿಕ್ಷಕರ ಹುದ್ದೆಗಳನ್ನು ನಿಯಮಿತವಾಗಿ ಭರ್ತಿ ಮಾಡಲು ಕ್ರಮ ವಹಿಸಬೇಕು.
4. **ಏಕೀಕೃತ ಸರಳ ತಂತ್ರಾಂಶ:** ಹತ್ತಾರು ಪೋರ್ಟಲ್‌ಗಳ ಬದಲಿಗೆ, ಗ್ರಾಮೀಣ ಭಾಗಗಳಲ್ಲೂ ಸುಲಭವಾಗಿ ಆಫ್‌ಲೈನ್‌ನಲ್ಲಿ ಕೆಲಸ ಮಾಡಬಲ್ಲ ಒಂದೇ ಸಂಯೋಜಿತ ಮೊಬೈಲ್ ತಂತ್ರಾಂಶವನ್ನು ಅಭಿವೃದ್ಧಿಪಡಿಸಬೇಕು.

ಶಿಕ್ಷಕನಿಗೆ ಪಠ್ಯಪುಸ್ತಕ ಮತ್ತು ಸೀಮೆಸುಣ್ಣದ ಜೊತೆಗೆ ವಿದ್ಯಾರ್ಥಿಯ ಮನಸ್ಸನ್ನು ಅರಿಯುವ ನೆಮ್ಮದಿಯನ್ನು ನೀಡಬೇಕಿದೆ. ಆತನ ಕೈಗೆ ಕಾಗದ ಪತ್ರಗಳ ಹೊರೆ ಮತ್ತು ಆನ್‌ಲೈನ್ ಆಪ್‌ಗಳನ್ನು ನೀಡಿ ತರಗತಿಯಿಂದ ದೂರವಿಟ್ಟರೆ, ನಷ್ಟವಾಗುವುದು ಕೇವಲ ಶಿಕ್ಷಕನ ಆರೋಗ್ಯವಲ್ಲ; ಬದಲಿಗೆ ಇಡೀ ಮುಂದಿನ ತಲೆಮಾರಿನ ಭವಿಷ್ಯ. ಸರ್ಕಾರಿ ಶಾಲೆಗಳನ್ನು ಮತ್ತು ಶಿಕ್ಷಕರ ವೃತ್ತಿ ಗೌರವವನ್ನು ರಕ್ಷಿಸುವುದು ಇಂದಿನ ತುರ್ತು ಅಗತ್ಯವಾಗಿದೆ.



| ರಚನೆ : ಸ್ವಾಮಿನಾಥನ್
ಮೊಬೈಲ್ : 9880041516
Email : Swamynathann@gmail.com

# ಕಾಣುವ ಕನಸುಗಳಿಗೆ ಬಣ್ಣವಿರುತ್ತದೆ ಜೀವನಕ್ಕೆ ಅನುಭವಗಳಿರುತ್ತವೆ



| ಶಿವಬಸಪ್ಪ ಗು ಜಂಗಾಲಿ

ಪ್ರತಿಯೊಬ್ಬ ಮನುಷ್ಯನ ಬದುಕು ಒಂದು ಕನಸಿನಿಂದಲೇ ಆರಂಭವಾಗುತ್ತದೆ. ಬಾಲ್ಯದಲ್ಲಿ ಕಣ್ಣಲ್ಲಿ ಮೂಡುವ ಪುಟ್ಟ ಕನಸುಗಳು ಮಳೆಹನಿಯಂತೆ ನಿರ್ಮಲವಾಗಿರುತ್ತವೆ. ಅವುಗಳಿಗೆ ಭಯವಿರುವುದಿಲ್ಲ, ಮಿತಿಯಿರುವುದಿಲ್ಲ, ಸೋಲಿನ ಅರಿವಿರುವುದಿಲ್ಲ. ಆಕಾಶದಲ್ಲಿರುವ ನಕ್ಷತ್ರಗಳನ್ನು ಕೈಯಲ್ಲಿ ಹಿಡಿಯಬಹುದು ಎಂಬ ನಂಬಿಕೆ, ಗಾಳಿಯನ್ನೇ ಗೆಳೆಯನನ್ನಾಗಿ ಮಾಡಿಕೊಂಡು ದೂರದ ಲೋಕಗಳನ್ನು ತಲುಪಬಹುದು ಎಂಬ ಭಾವನೆ, ಮನಸ್ಸಿನೊಳಗೆ ಅರಳುವ ಪ್ರತಿಯೊಂದು ಆಶೆಯೂ ಬಣ್ಣಗಳಿಂದ ತುಂಬಿರುತ್ತದೆ. ಅದಕ್ಕೇ ಕಾಣುವ ಕನಸುಗಳಿಗೆ ಬಣ್ಣವಿರುತ್ತದೆ. ಆದರೆ ಬದುಕು ಕೇವಲ ಬಣ್ಣಗಳ ಚಿತ್ರಪಟವಲ್ಲ. ಅದು ಕಾಲದ ಕುಂಚದಿಂದ ಬರೆಯಲ್ಪಡುವ ಅನುಭವಗಳ ಮಹಾಕಾವ್ಯ.

ಕನಸು ಕಾಣುವುದು ಸುಲಭ. ಆದರೆ ಆ ಕನಸನ್ನು ಬದುಕಾಗಿ ರೂಪಿಸುವ ದಾರಿಯಲ್ಲಿ ಎದುರಾಗುವ ಪ್ರತಿಯೊಂದು ಹೆಜ್ಜೆಯೂ ಒಂದು ಪಾಠವನ್ನು ಕಲಿಸುತ್ತದೆ. ಕೆಲವು ದಿನಗಳು ನಮ್ಮನ್ನು ಎತ್ತರಕ್ಕೆ ಕೊಂಡೊಯ್ಯುತ್ತವೆ. ಇನ್ನೂ ಕೆಲವು ದಿನಗಳು ನೆಲದ ವಾಸ್ತವವನ್ನು ತೋರಿಸುತ್ತವೆ. ಯಶಸ್ಸು ನಮ್ಮ ಹೆಗಲ ಮೇಲೆ ಕೈ ಇಟ್ಟು ನಗಿದಾಗ ಬದುಕು ಸುಂದರವೆನಿಸುತ್ತದೆ. ಆದರೆ ವೈಫಲ್ಯ ನಮ್ಮ ಬಾಗಿಲು ತಟ್ಟಿದಾಗಲೇ ಬದುಕಿನ ನಿಜವಾದ ಅರ್ಥ ಅರಿವಾಗುತ್ತದೆ. ಆಗ ಕನಸುಗಳಿಗೆ ಇದ್ದ ಬಣ್ಣ ನಿಧಾನವಾಗಿ ಅನುಭವಗಳ ಆಳಕ್ಕೆ ಬದಲಾಗುತ್ತದೆ.

ಮನುಷ್ಯನು ಎಲ್ಲವನ್ನೂ ಪುಸ್ತಕಗಳಿಂದ ಕಲಿಯಲು ಸಾಧ್ಯವಿಲ್ಲ. ಕೆಲವು ಪಾಠಗಳನ್ನು ಜೀವನವೇ ಶಿಕ್ಷಕನಾಗಿ ಕಲಿಸುತ್ತದೆ. ಕಣ್ಣೀರು ಕಲಿಸುವ ಪಾಠವನ್ನು ನಗುವು ಕಲಿಸಲಾರದು. ನೋವು ಕಲಿಸುವ ಸಹನೆಯನ್ನು ಸುಖ ಕಲಿಸಲಾರದು. ಸೋಲು ಕಲಿಸುವ ಆತ್ಮವಿಶ್ವಾಸವನ್ನು ಗೆಲುವು ನೀಡಲಾರದು. ಬದುಕಿನ ಪ್ರತಿಯೊಂದು ಅನುಭವವೂ ನಮ್ಮ ವ್ಯಕ್ತಿತ್ವವನ್ನು ಸ್ವಲ್ಪ ಸ್ವಲ್ಪವಾಗಿ ರೂಪಿಸುತ್ತಾ ಹೋಗುತ್ತದೆ.

ಬಾಲ್ಯದಲ್ಲಿ ಮಳೆ ಎಂದರೆ ಆಟ. ಯೌವನದಲ್ಲಿ ಅದೇ ಮಳೆ ಪ್ರೀತಿಯ ನೆನಪು. ವಯಸ್ಸಾದ ಮೇಲೆ ಅದೇ ಮಳೆ ಬೆಳೆಗಾಗಿ ರೈತನ ಪ್ರಾರ್ಥನೆ. ಮಳೆ ಬದಲಾಗಿಲ್ಲ; ಬದಲಾಗಿರುವುದು ನಮ್ಮ ಅನುಭವ. ಜೀವನವೂ ಹಾಗೆಯೇ. ಘಟನೆಗಳು ಒಂದೇ ಆಗಿರಬಹುದು, ಆದರೆ ಅವುಗಳ ಅರ್ಥವನ್ನು ನಿರ್ಧರಿಸುವುದು ನಮ್ಮ ಅನುಭವ.

ಪ್ರತಿಯೊಂದು ಗಾಯವೂ ನೋವಿನ ಗುರುತು ಮಾತ್ರವಲ್ಲ; ಅದು ಬದುಕಿದ ಕ್ಷಣದ ಸಾಕ್ಷಿಯೂ ಹೌದು. ಪ್ರತಿಯೊಂದು ವೈಫಲ್ಯವೂ ಅಂತ್ಯವಲ್ಲ; ಅದು ಹೊಸ ದಾರಿಯ ಆರಂಭ. ಕೆಲವೊಮ್ಮೆ ನಾವು ಕಳೆದುಕೊಂಡದ್ದರ ನೋವಿನಲ್ಲಿ ಅಳುತ್ತೇವೆ. ಆದರೆ ವರ್ಷಗಳ ನಂತರ ಹಿಂದಿರುಗಿ ನೋಡಿದಾಗ, ಅದೇ ನಷ್ಟ ನಮ್ಮ ಬದುಕಿನ ದೊಡ್ಡ ಪಾಠವಾಗಿತ್ತು ಎಂಬುದು ಅರ್ಥವಾಗುತ್ತದೆ. ಕಾಲವೇ ಅನುಭವದ ಶ್ರೇಷ್ಠ ಶಿಲ್ಪಿ.




ಜೀವನದಲ್ಲಿ ಭೇಟಿಯಾಗುವ ಪ್ರತಿಯೊಬ್ಬ ವ್ಯಕ್ತಿಯೂ ನಮ್ಮ ಬದುಕಿನಲ್ಲಿ ಒಂದು ಅಧ್ಯಾಯ ಬರೆಯುತ್ತಾನೆ. ಕೆಲವರು ಬಂದು ನಗುವನ್ನು ಕೊಡುತ್ತಾರೆ. ಕೆಲವರು ಕಣ್ಣೀರನ್ನು ಕೊಡುತ್ತಾರೆ. ಕೆಲವರು ನಂಬಿಕೆಯನ್ನು ಕಲಿಸುತ್ತಾರೆ. ಇನ್ನೂ ಕೆಲವರು ಯಾರನ್ನು ನಂಬಬೇಕು, ಯಾರನ್ನು ನಂಬಬಾರದು ಎಂಬ ವಿವೇಕವನ್ನು ನೀಡುತ್ತಾರೆ. ಎಲ್ಲರೂ ನಮ್ಮ ಜೊತೆಗೆ ಉಳಿಯುವುದಿಲ್ಲ. ಆದರೆ ಅವರು ಬಿಟ್ಟುಹೋದ ಅನುಭವಗಳು ಜೀವನಪೂರ್ತಿ ನಮ್ಮೊಂದಿಗೆ ಇರುತ್ತವೆ.

ಕನಸುಗಳಲ್ಲಿ ಎಲ್ಲರೂ ನಮ್ಮೊಂದಿಗೆ ಇರುತ್ತಾರೆ. ಜೀವನದಲ್ಲಿ ಮಾತ್ರ ದಾರಿಗಳು ಬೇರ್ಪಡುತ್ತವೆ. ಜೊತೆಯಾಗಿ ನಡೆಯುವುದಾಗಿ ಹೇಳಿದವರು ಮಧ್ಯದಲ್ಲೇ ಕೈ ಬಿಡಬಹುದು. ಎಂದಿಗೂ ಭೇಟಿಯಾಗುವುದಿಲ್ಲವೆಂದುಕೊಂಡವರು ಬದುಕಿನ ಆಧಾರವಾಗಬಹುದು. ಇದೇ ಜೀವನದ ವಿಶೇಷತೆ. ಅದು ಯಾರನ್ನೂ ಮುಂಚಿತವಾಗಿ ಪರಿಚಯಿಸುವುದಿಲ್ಲ. ಅನುಭವಗಳ ಮೂಲಕವೇ ಅವರ ಮೌಲ್ಯವನ್ನು ತಿಳಿಸುತ್ತದೆ.

ಬದುಕಿನಲ್ಲಿ ಹಣ ಮುಖ್ಯ. ಆದರೆ ಹಣಕ್ಕಿಂತ ಮೌಲ್ಯವಾದುದು ಅನುಭವ. ಹಣ ಕಳೆದುಕೊಂಡರೆ ಮತ್ತೆ ಸಂಪಾದಿಸಬಹುದು. ಆದರೆ ಒಂದು ಅನುಭವದಿಂದ ಕಲಿಯದೆ ಹೋದರೆ ಅದೇ ತಪ್ಪನ್ನು ಮತ್ತೆ ಮತ್ತೆ ಮಾಡುತ್ತೇವೆ. ಅನುಭವ ಮನುಷ್ಯನನ್ನು ಪ್ರಬುದ್ಧನನ್ನಾಗಿಸುತ್ತದೆ. ಅದು ಮಾತಿನ ಗಂಭೀರತೆಯನ್ನು, ನಿರ್ಧಾರದ ಪಕ್ವತೆಯನ್ನು, ಸಂಬಂಧಗಳ ಮೌಲ್ಯವನ್ನು ಅರ್ಥಮಾಡಿಸುತ್ತದೆ.

ಕೆಲವು ಕನಸುಗಳು ನನಸಾಗುವುದಿಲ್ಲ. ಅದಕ್ಕಾಗಿ ಜೀವನವನ್ನು ಸೋತಿದೆ ಎಂದು ಕರೆಯಲು ಸಾಧ್ಯವಿಲ್ಲ. ಯಾಕೆಂದರೆ ಪ್ರತಿಯೊಂದು ಅಪೂರ್ಣ ಕನಸಿನ ಹಿಂದೆ ಒಂದು ಹೊಸ ದಿಕ್ಕು ಅಡಗಿರುತ್ತದೆ. ನಾವು ಬಯಸಿದದ್ದು ಸಿಗದೇ ಇರಬಹುದು. ಆದರೆ ನಮಗೆ ಬೇಕಾಗಿದ್ದದ್ದು ಸಿಕ್ಕಿರಬಹುದು. ಈ ಸತ್ಯವನ್ನು ಅರಿಯುವಷ್ಟು ಜೀವನ ನಮ್ಮನ್ನು ಬೆಳೆಸುತ್ತದೆ.

ಮರವು ಒಂದೇ ದಿನದಲ್ಲಿ ನೆರಳಾಗುವುದಿಲ್ಲ. ಬೀಜ ಮಣ್ಣಿನೊಳಗೆ ಕತ್ತಲನ್ನು ಸಹಿಸುತ್ತದೆ. ಮಳೆಯ ಹೊಡೆತವನ್ನು ತಾಳುತ್ತದೆ. ಬಿಸಿಲಿನ ತಾಪವನ್ನು ಎದುರಿಸುತ್ತದೆ. ಆಗ ಮಾತ್ರ ಅದು ನೆರಳನ್ನು ಕೊಡುವ ಮರವಾಗುತ್ತದೆ. ಮನುಷ್ಯನ ಬದುಕೂ ಹಾಗೆಯೇ. ಕಷ್ಟವಿಲ್ಲದ ಅನುಭವವಿಲ್ಲ. ಅನುಭವವಿಲ್ಲದ ಬೆಳವಣಿಗೆಯೂ ಇಲ್ಲ.

ನಮ್ಮ ಬದುಕಿನ ಸುಂದರ ಕ್ಷಣಗಳನ್ನು ನೆನಪಿಸಿದರೆ ನಗು ಬರುತ್ತದೆ. ಕಠಿಣ ಕ್ಷಣಗಳನ್ನು ನೆನಪಿಸಿದರೆ ಕಣ್ಣೀರು ಬರಬಹುದು. ಆದರೆ ಎರಡೂ ಸೇರಿ ನಮ್ಮ ಜೀವನದ ಸಂಪೂರ್ಣ ಚಿತ್ರವನ್ನು ರಚಿಸುತ್ತವೆ. ಕೇವಲ ಸಂತೋಷದಿಂದ ವ್ಯಕ್ತಿತ್ವ ರೂಪುಗೊಳ್ಳುವುದಿಲ್ಲ. ಕೇವಲ ದುಃಖದಿಂದಲೂ ಬದುಕು ನಿಲ್ಲುವುದಿಲ್ಲ. ಇವೆರಡರ ನಡುವಿನ ಸಮತೋಲನವೇ ಜೀವನದ ನಿಜವಾದ ಸೌಂದರ್ಯ.

ಕಾಲ ಎಲ್ಲರಿಗೂ ಒಂದೇ ವೇಗದಲ್ಲಿ ಸಾಗುತ್ತದೆ. ಆದರೆ ಅನುಭವಗಳು ಮಾತ್ರ ಪ್ರತಿಯೊಬ್ಬರಿಗೂ ವಿಭಿನ್ನ. ಅದಕ್ಕೇ ಒಂದೇ ವಯಸ್ಸಿನ ಇಬ್ಬರು ವ್ಯಕ್ತಿಗಳ ಚಿಂತನೆ ಒಂದೇ ಆಗಿರುವುದಿಲ್ಲ. ಅನುಭವಗಳು ಅವರ ಮನಸ್ಸನ್ನು ವಿಭಿನ್ನವಾಗಿ ರೂಪಿಸಿರುತ್ತವೆ. ಬದುಕಿನ ವಿಶ್ವವಿದ್ಯಾಲಯದಲ್ಲಿ ಅನುಭವವೇ ಶ್ರೇಷ್ಠ ಪದವಿ.

ಇಂದು ನಮ್ಮ ಕನಸುಗಳು ದೊಡ್ಡದಾಗಿರಬಹುದು. ನಾಳೆ ಅವು ಬದಲಾಗಬಹುದು. ಆದರೆ ಅನುಭವಗಳಿಂದ ಪಡೆದ ಜ್ಞಾನ ಎಂದಿಗೂ ಕಳೆದುಹೋಗುವುದಿಲ್ಲ. ಅದು ನಮ್ಮೊಳಗೆ ಬೆಳಕಾಗಿ ಉಳಿಯುತ್ತದೆ. ದಾರಿ ತಪ್ಪಿದಾಗ ದಿಕ್ಸೂಚಿಯಾಗುತ್ತದೆ. ನಿರಾಶೆ ಆವರಿಸಿದಾಗ ಧೈರ್ಯವಾಗಿ ನಿಲ್ಲುತ್ತದೆ. ಯಶಸ್ಸು ಬಂದಾಗ ವಿನಯವನ್ನು ನೆನಪಿಸುತ್ತದೆ.

ಜೀವನವನ್ನು ಸುಂದರವಾಗಿಸುವುದು ಅದರಲ್ಲಿ ನಡೆಯುವ ಅದ್ಭುತಗಳಲ್ಲ; ಪ್ರತಿಯೊಂದು ಘಟನೆಯಿಂದ ನಾವು ಕಲಿಯುವ ಪಾಠಗಳು. ಪ್ರತಿಯೊಂದು ಬೆಳಿಗ್ಗೆಯೂ ಹೊಸ ಅವಕಾಶ. ಪ್ರತಿಯೊಂದು ಸಂಜೆಯೂ ಒಂದು ಆತ್ಮಾವಲೋಕನ. ಪ್ರತಿಯೊಂದು ರಾತ್ರಿ ಮುಂದಿನ ಕನಸಿಗೆ ಆಹ್ವಾನ. ಆದರೆ ಈ ಎಲ್ಲದರ ಮಧ್ಯೆ ನಮ್ಮನ್ನು ಪರಿಪಕ್ವರನ್ನಾಗಿಸುವುದು ಅನುಭವಗಳೇ.

ಆದ್ದರಿಂದ ಕನಸು ಕಾಣುವುದನ್ನು ಎಂದಿಗೂ ನಿಲ್ಲಿಸಬಾರದು. ಕನಸುಗಳು ಬದುಕಿಗೆ ದಿಕ್ಕು ನೀಡುತ್ತವೆ. ಆದರೆ ಅನುಭವಗಳನ್ನು ಹೆದರಬಾರದು. ಅವು ಬದುಕಿಗೆ ಆಳವನ್ನು ನೀಡುತ್ತವೆ. ಬಣ್ಣಗಳಿಂದ ಆರಂಭವಾದ ಕನಸುಗಳು ಅನುಭವಗಳಿಂದ ಅರ್ಥಪೂರ್ಣವಾಗುತ್ತವೆ. ಆಶೆಯಿಂದ ಆರಂಭವಾದ ಪಯಣ ಆತ್ಮವಿಶ್ವಾಸದಲ್ಲಿ ಅಂತ್ಯಗೊಳ್ಳುತ್ತದೆ.

ಕೊನೆಗೆ, ಜೀವನ ನಮ್ಮ ಇಚ್ಛೆಯಂತೆ ಬಣ್ಣಗಳನ್ನು ಕೊಡುವ ಚಿತ್ರಗಾರನಲ್ಲ. ಆದರೆ ನಾವು ಅನುಭವಿಸುವ ಪ್ರತಿಯೊಂದು ಕ್ಷಣವನ್ನೂ ಅರ್ಥಪೂರ್ಣವಾಗಿಸುವ ಮಹಾನ್ ಶಿಲ್ಪಿ. ಕಾಣುವ ಕನಸುಗಳು ಕಣ್ಣಿಗೆ ಸಂತೋಷ ನೀಡಬಹುದು; ಆದರೆ ಅನುಭವಗಳಿಂದ ತುಂಬಿದ ಜೀವನ ಮಾತ್ರ ಆತ್ಮಕ್ಕೆ ಬೆಳಕು ನೀಡುತ್ತದೆ. ಆದ್ದರಿಂದ ಕನಸುಗಳನ್ನು ಕಣ್ಣಲ್ಲಿ ಕಾಪಾಡಿಕೊಳ್ಳಿ, ಅನುಭವಗಳನ್ನು ಹೃದಯದಲ್ಲಿ ಸಂಗ್ರಹಿಸಿಕೊಳ್ಳಿ. ಏಕೆಂದರೆ ಬಣ್ಣಗಳು ಕಾಲದೊಂದಿಗೆ ಮಸುಕಾಗಬಹುದು, ಆದರೆ ಅನುಭವಗಳು ಜೀವನವಿಡೀ ನಮ್ಮೊಳಗೆ ಬೆಳಕಾಗಿ ಉಳಿಯುತ್ತವೆ.

# ಭಾರತೀಯ ಸಂಸ್ಕೃತಿಯಲ್ಲಿ ಯೋಗ



| ವೀಣಾ ಹೇಮಂತ್‌ಗೌಡ ಪಾಟೀಲ್

ಭಾರತೀಯ ಸನಾತನ ಸಂಸ್ಕೃತಿಯಲ್ಲಿ ಯೋಗವು ಮಹತ್ವದ ಪಾತ್ರವನ್ನು ವಹಿಸುತ್ತದೆ. ಯೋಗವು ಆಸನಗಳ ಒಂದು ಕ್ರಿಯೆಯಾಗಿರದೆ ನಮ್ಮ ಮನಸ್ಸು ದೇಹ ಹಾಗೂ ಬುದ್ಧಿಗಳನ್ನು ಏಕತ್ರಗೊಳಿಸುವ ವೈಜ್ಞಾನಿಕ ಪರಿಭಾಷೆಯಾಗಿದೆ.

ನಮ್ಮ ಸನಾತನ ಸಂಸ್ಕೃತಿಯಲ್ಲಿ ಶಿವನನ್ನು ಆದಿ ಯೋಗಿ ಎಂದು ಕರೆಯುತ್ತಾರೆ ಯೋಗದ ಮೂಲ ಗುರು ಮಹಾದೇವನೇ. ಆತನೇ ಯೋಗದ ಮೂಲಪುರುಷ.. ಮುಂದೆ ಶಿವನು ಸಪ್ತರ್ಷಿಗಳಿಗೆ ಯೋಗ ಶಿಕ್ಷಣವನ್ನು ಖುದ್ದು ತಾನೇ ನೀಡಿದನು ಎಂದು ಪುರಾಣಗಳಲ್ಲಿ ಹೇಳಲಾಗಿದೆ.

ನಂತರ ಎರಡುವರೆ ಸಾವಿರ ವರ್ಷಗಳ ಹಿಂದೆ ಯೋಗದ ಕುರಿತು ಅಧ್ಯಯನ ಮಾಡಿ ಬರೆದ ವ್ಯಕ್ತಿ ಪತಂಜಲಿ ಮಹರ್ಷಿ ಆತನನ್ನು ಯೋಗ ಪಿತಾಮಹ ಎಂದು ಕರೆಯುತ್ತಾರೆ. ಆತ ಯೋಗ ಸೂತ್ರಗಳನ್ನು ರಚಿಸಿ ಬರಹ ರೂಪವನ್ನು ಕೊಟ್ಟ ಮೊದಲ ವ್ಯಕ್ತಿ. ಮಹರ್ಷಿ ಪತಂಜಲಿ ಅವರಿಗಿಂತ ಮುಂಚೆಯೂ ಯೋಗ ಚಾಲ್ತಿಯಲ್ಲಿದ್ದರೂ ಕೂಡ ಅದು ಅತ್ಯಂತ ವಿಶಾಲವಾಗಿತ್ತು. ವ್ಯಾಪ್ತವಾಗಿತ್ತು ಹಾಗೂ ಹರಡಿದಂತೆ ಇತ್ತು ಅವೆಲ್ಲವನ್ನು ಒಂದು ನಿಯಮಿತ ಚೌಕಟ್ಟಿನಲ್ಲಿ ಜೋಡಿಸಿ ಅಷ್ಟಾಂಗ ಯೋಗ ಎಂಬ ಯೋಗದ ಎಂಟು ಅಂಗಗಳನ್ನು, 196 ಸೂತ್ರಗಳನ್ನು ಪತಂಜಲಿ ಮಹರ್ಷಿಯು ರಚಿಸಿದನು. ಮಾನಸಿಕ ಮತ್ತು ಆಧ್ಯಾತ್ಮಿಕ ಮುಕ್ತಿಯನ್ನು ಪಡೆಯಲು ಯೋಗವು ಸಹಾಯಕವಾಯಿತು.

ಪತಂಜಲಿ ಮಹರ್ಷಿಯು ಶೇಷನಾಗನ ಅಪರಾವತಾರ ಎಂದು ಪುರಾಣಗಳಲ್ಲಿ ಹೇಳಲಾಗಿದ್ದು ವಿಷ್ಣು ಆತನ ಮೇಲೆ ಪವಡಿಸಿರುತ್ತಾನೆ ಎಂಬ ಆಖ್ಯಾಯಿಕೆಗಳು ಇವೆ.


ಪತಂಜಲಿಯ ದೇಹದ ಭಾಗವು ಮಾನವರಂತಿದ್ದು ಕಾಲುಗಳ ಭಾಗದಲ್ಲಿ ಸರ್ಪ ದೇಹವು ಇತ್ತೆಂದು ಪುರಾಣಗಳಲ್ಲಿ ಬಿಂಬಿತವಾಗಿದೆ.

ಪತಂಜಲಿ ಮಹರ್ಷಿಯು ಕೇವಲ ಯೋಗ ಪಿತಾಮಹ ಮಾತ್ರವಲ್ಲ ಆತನಿಗೆ ಆಯುರ್ವೇದ ಹಾಗೂ ಸಂಸ್ಕೃತದಲ್ಲಿ ಅಪಾರಜ್ಞಾನವಿತ್ತು. ಪಾರಂಪರಿಕ ಗಿಡಮೂಲಿಕೆಗಳ ವಿಜ್ಞಾನದ ಅರಿವನ್ನು ಹೊಂದಿದ್ದ ಆತ

ಚರಕನು ರಚಿಸಿದ ಆಯುರ್ವೇದ ಗಿಡಮೂಲಿಕೆಗಳ ಕುರಿತಾದ ಚರಕ ಸಂಹಿತೆ ಹಾಗೂ ಪಾಣಿನಿಯು ರಚಿಸಿದ್ದ ಸಂಸ್ಕೃತದ ವ್ಯಾಕರಣಕ್ಕೆ ಮಹಾಭಾಷ್ಯವನ್ನು ಬರೆದಿದ್ದನು.

ಸಾವಿರಾರು ವರ್ಷಗಳ ಹಿಂದೆಯೇ ಯೋಗವನ್ನು ನಮ್ಮ ಬದುಕಿನ ಭಾಗವನ್ನಾಗಿ ಸ್ವೀಕರಿಸಿದ್ದ ನಮ್ಮ ಪೂರ್ವಜರಲ್ಲಿ ಆಧ್ಯಾತ್ಮ ಸಾಧನೆಯ ಸಾಧುಗಳು, ಸನ್ಯಾಸಿಗಳು ಹಾಗೂ ಜ್ಞಾನ ಪಿಪಾಸುಗಳು ಯೋಗವನ್ನು ತಮ್ಮ ಬದುಕಿನ ಭಾಗವನ್ನಾಗಿಸಿಕೊಂಡಿದ್ದರು. ಆಧ್ಯಾತ್ಮಿಕ ಬದುಕು ಹಾಗೂ ಶಿಸ್ತುಬದ್ಧ ಜೀವನ ಶೈಲಿಯನ್ನು ಹೊಂದಿರುವ ಸಮಗ್ರ ಶಿಕ್ಷಣ ವ್ಯವಸ್ಥೆಯನ್ನು ಯೋಗ ಚಿಕಿತ್ಸೆಯ ಮೂಲಕ ಪಡೆಯಬಹುದಿತ್ತು.

ಕಳೆದ ಶತಮಾನದಲ್ಲಿ ಸಾರ್ವಜನಿಕವಾಗಿ ಯೋಗದ ಅಭ್ಯಾಸವನ್ನು ಕೇವಲ ಪುರುಷರು ಮಾತ್ರ ಮಾಡುತ್ತಿದ್ದರು.



ಶೇಕಡ 72ರಷ್ಟು ಮಹಿಳೆಯರು ಯೋಗವನ್ನು ತಮ್ಮ ಬದುಕಿನ ಭಾಗವಾಗಿಸಿಕೊಂಡಿದ್ದರೂ ಕೂಡ ಅವರು ತಮ್ಮ ಮನೆಯ ಒಳ ಆವರಣದಲ್ಲಿ ಮಾತ್ರ ಯೋಗವನ್ನು ಮಾಡಲು ಅವರಿಗೆ ಅವಕಾಶವಿತ್ತು. 1937ರಲ್ಲಿ ಮೊತ್ತ ಮೊದಲ ಬಾರಿಗೆ ಮಹಿಳೆಯರಿಗೆ ಸಾರ್ವಜನಿಕವಾಗಿ ಯೋಗಾಭ್ಯಾಸ ಮಾಡಲು ಆಹ್ವಾನಿಸಲಾಯಿತು.

ಇನ್ನು ಭಾರತೀಯ ಜೈಲುಗಳಲ್ಲಿ ಜನರಿಗೆ ಯೋಗವನ್ನು ದೈನಂದಿನ ಕ್ರಿಯೆಯಾಗಿ ಕೈದಿಗಳಿಗೆ ಮಾಡಿಸುತ್ತಿದ್ದರು ಇದರಿಂದ ಅವರ ಮಾನಸಿಕ ಸ್ಥಿತಿಗತಿಗಳಲ್ಲಿ ಸುಧಾರಣೆಯಾಗಿ ಅವರ ಶಿಕ್ಷೆಯ ಅವಧಿಗಳು ಕೂಡ ಕಡಿಮೆಯಾದ ಉದಾಹರಣೆಗಳನ್ನು ನಾವು ಕಾಣಬಹುದು ಇದರ ಜೊತೆಗೆ ಯೋಗದ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕಗಳನ್ನು ಗಳಿಸಿದವರಿಗೆ ಅವರ ಶಿಕ್ಷೆಯಲ್ಲಿ ವಿನಾಯಿತಿ ದೊರೆಯುತ್ತಿತ್ತು ಕೂಡ.

ಯೋಗದ ಒಂದು ಅಂಗವಾಗಿ ಪ್ರಾಣಾಯಾಮವನ್ನು ಅಭ್ಯಸಿಸುತ್ತಾರೆ. ಇದರಲ್ಲಿ ದೀರ್ಘವಾದ ಉಚ್ವಾಸ ಹಾಗೂ ವಿಶ್ವಾಸಗಳನ್ನು ಮಾಡುವ ಅನುಲೋಮ ವಿಲೋಮ ಪ್ರಾಣಾಯಾಮವು ದೀರ್ಘ ಉಸಿರಾಟಕ್ಕೆ ರಹದಾರಿಯನ್ನು ನೀಡುತ್ತದೆ. ಒಂದು ನಂಬಿಕೆಯ ಪ್ರಕಾರ ಹುಟ್ಟಿರುವ ಪ್ರತಿಯೊಬ್ಬ ಜೀವಿಯು ತನ್ನ ಬದುಕಿನಲ್ಲಿ ಇಂತಿಷ್ಟೇ ಸಂಖ್ಯೆಯ ಉಸಿರನ್ನು ತನ್ನ ಬದುಕಿನಲ್ಲಿ ಉಸಿರಾಡುತ್ತಾನೆ ಎಂಬ ಭಾವ ನಮ್ಮ ಜನರಲ್ಲಿದೆ. ಒಂದೇ ಸಮನೆ ಏದುಸಿರು ಬಿಡುವಂತೆ ಉಸಿರಾಡುವ ನಾಯಿ ಕೇವಲ 12 ವರ್ಷ ಮಾತ್ರ ಬದುಕಿದರೆ ದೀರ್ಘವಾದ ಉಸಿರಾಟವನ್ನು ನಡೆಸುವ ಆಮೆ ಆನೆಗಳು ನೂರಾರು ವರ್ಷ ಬದುಕುತ್ತವೆ. ಮಧ್ಯಮ ಗತಿಯಲ್ಲಿ ಉಸಿರಾಟ ನಡೆಸುವ ಮನುಷ್ಯರು 60 ರಿಂದ 70 ವರ್ಷಗಳ ಕಾಲ ಬದುಕುತ್ತಾರೆ.

ಪ್ರಾಣಾಯಾಮವನ್ನು ಮಾಡುವ ಮೂಲಕ ಉಸಿರಾಟದ ಗತಿಯನ್ನು ನಿಧಾನಗೊಳಿಸಬಹುದು ಹಾಗೂ ಆ ಮೂಲಕ ದೀರ್ಘ ಆಯುಷ್ಯವನ್ನು ಹೊಂದಬಹುದು.

ನಿರಂತರವಾಗಿ ಯೋಗ ಮತ್ತು ಪ್ರಾಣಾಯಾಮವನ್ನು ಅಭ್ಯಾಸ ಮಾಡುವವರ ಮೆದುಳಿನಲ್ಲಿ ನೆನಪಿನ ಶಕ್ತಿ ಹಾಗೂ ಕಲಿಕೆಯನ್ನು ಹೆಚ್ಚಿಸುವ ಪ್ರಕ್ರಿಯೆ ಗೆ ಅನುಕೂಲವಾಗುವ ಹಿಪ್ಪೋ ಕ್ಯಾಂಪಸ್ ಭಾಗವು ಹೆಚ್ಚು ಬೆಳವಣಿಗೆ ಕಾಣುವುದು.... ಇದರಿಂದ ಬುದ್ಧಿಶಕ್ತಿ ಹೆಚ್ಚಾಗುವುದು.

ಯೋಗಾಭ್ಯಾಸ ಎಂದ ಕೂಡಲೇ ಸಾಮಾನ್ಯವಾಗಿ ಜನರು ಕೇವಲ ಆಸನಗಳು ಎಂದುಕೊಳ್ಳುತ್ತಾರೆ.

ಆಸನಗಳು ಯೋಗ ಚಿಕಿತ್ಸೆಯ ವಿಜ್ಞಾನದ 8ನೇ ಒಂದು ಭಾಗ ಮಾತ್ರ.

ಮೂಲಭೂತವಾಗಿ ಯೋಗದಲ್ಲಿ 84 ಆಸನಗಳು ಇವೆ. ಇದೀಗ ನೂರಾರು ಉಪ ಆಸನಗಳನ್ನು ಅಭಿವೃದ್ಧಿ ಪಡಿಸಿದ್ದಾರೆ.

ಯೋಗವು ಒಂದು ವಿಜ್ಞಾನವಾಗಿದ್ದು ಮನುಷ್ಯ ಸಂಕುಲವು ಅನುಭವಿಸುತ್ತಿರುವ ಎಲ್ಲಾ ದುಃಖ ನಿರಾಶೆ ನೋವು ಜಂಜಡಗಳಿಗೆ, ಮಾನಸಿಕ ಸಂಕಷ್ಟಗಳಿಗೆ ರಾಮಬಾಣವಾಗಿದೆ. ಆದ್ದರಿಂದಲೇ ಯೋಗಃ ಚಿತ್ತವೃತ್ತಿ ನಿರೋಧಹ ಎಂದು ಹೇಳುತ್ತಾರೆ.ಚಿತ್ತ ದ ಹಲವಾರು ವೃತ್ತಿಗಳನ್ನು ಅಂದರೆ ವಿವಿಧ ಬಗೆಯ ಮಾನಸಿಕ ಕ್ಲೇಶಗಳನ್ನು ಕಳೆಯುವ ಶಕ್ತಿ ಯೋಗಕ್ಕಿದೆ.

**"ಯೋಗೇನ ಚಿತ್ತಸ್ಯ ಪದೇನ ವಾಚಾ
ಮಲಂ ಶರೀರಸ್ಯಚ ವೈದ್ಯಕೇನಾ
ಯೋಪಾಕರೋತ್ತಮ ಪ್ರವರಂ ಮುನೀನ
ಪತಂಜಲಿಂ ಪ್ರಾಂಜಲಿಂ ರಾನತೋಸ್ಮಿ"**

ಎಂಬುದು ಭಾರತ ದೇಶಕ್ಕೆ, ಅಷ್ಟೇ ಏಕೆ ಇಡೀ ವಿಶ್ವಕ್ಕೆ ಯೋಗದ ಜ್ಞಾನವನ್ನು ಕೊಟ್ಟ ಪತಂಜಲಿ ಮಹರ್ಷಿಯನ್ನು ಕುರಿತಾದ ಪ್ರಾರ್ಥನಾ ಮಂತ್ರ.

2014ರಲ್ಲಿ ವಿಶ್ವಸಂಸ್ಥೆಯಿಂದ ಅಂತರಾಷ್ಟ್ರೀಯ ಯೋಗ ದಿನಾಚರಣೆಯು ಅನುಮೋದಿಸಲ್ಪಟ್ಟಿತು. 2015 ಜೂನ್ 21ರಂದು ಮೊತ್ತ ಮೊದಲ ಬಾರಿಗೆ ಅಂತರಾಷ್ಟ್ರೀಯ ಯೋಗ ದಿನಾಚರಣೆಯನ್ನು ನಮ್ಮ ದೇಶದ ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಇಡೀ ಜಗತ್ತಿನಲ್ಲಿಯೇ ಆಚರಿಸಲಾಯಿತು. ತನ್ಮೂಲಕ ಜಗತ್ತಿನ ಹಲವಾರು ರಾಷ್ಟ್ರಗಳು ಅಂತರಾಷ್ಟ್ರೀಯ ಯೋಗ ದಿನವನ್ನು ಆಚರಿಸುತ್ತವೆ. ಜೂನ್ 21ರಂದೇ ಯೋಗ ದಿನವನ್ನು ಆಚರಿಸಲು ಕಾರಣ ಅದು ಆಯಣಗಳು ಬದಲಾಗುವ ಸಮಯ. ಸೂರ್ಯನೂ ತನ್ನ ಪಥವನ್ನು ಬದಲಿಸುತ್ತಾನೆ ಮತ್ತು ಅದು ಅತ್ಯಂತ ದೀರ್ಘವಾದ ಹಗಲನ್ನು ಹೊಂದಿರುವ ದಿನ. ಹೀಗೆ ಯೋಗ ದಿನವನ್ನು ಆಚರಿಸಲು ಜೂನ್ 21 ನ್ನು ಆಯ್ಕೆ ಮಾಡಲಾಗಿದೆ.

ಯೋಗವು ನಮ್ಮನ್ನು ಖಾಯಿಲೆಗಳಿಂದ ದೂರವಿಡುತ್ತದೆ. ನಮ್ಮ ಸ್ನಾಯುಗಳಲ್ಲಿ ಬಲವನ್ನು ವೃದ್ಧಿಸಲು, ದೇಹದಲ್ಲಿ ರಕ್ತ ಸಂಚಾರ ಸರಾಗವಾಗಿ ನಡೆಯಲು, ದೇಹದಲ್ಲಿ ಹೆಚ್ಚಾದ ಕೊಬ್ಬನ್ನು ಕರಗಿಸಲು ನಿಯಮಿತ ಜೀವನ ಶೈಲಿಯನ್ನು ನಡೆಸಿಕೊಂಡು ಹೋಗಲು ಯೋಗದ ಮೊರೆ ಹೋಗಲೇಬೇಕು.

ಯೋಗದಲ್ಲಿ ಅಷ್ಟ ಅಂಗಗಳನ್ನು ಪತಂಜಲಿ ಮಹರ್ಷಿ ಯು ಗುರುತಿಸಿದ್ದು.....

* ಅಷ್ಟಾಂಗ ಯೋಗದ ಮೊದಲ ಎರಡು ಅಂಗಗಳಾದ ಯಮ ಮತ್ತು ನಿಯಮಗಳು ಮನುಷ್ಯನ ವೈಯುಕ್ತಿಕ ಸ್ವಚ್ಛತೆ ಮತ್ತು ಸಾಮಾಜಿಕ ಸ್ವಚ್ಛತೆ ಮತ್ತು ಜೀವನ ಶೈಲಿಯ ಕುರಿತು ತಿಳಿಸಿಕೊಡುತ್ತದೆ.
* ಮೂರನೇ ನಿಯಮವಾದ ಆಸನದಲ್ಲಿ ಯೋಗದ ವಿವಿಧ ಬಗೆಯ ಆಸನಗಳನ್ನು ಅಭ್ಯಾಸ ಮಾಡಬಹುದು. *ನಾಲ್ಕನೇ ನಿಯಮವಾದ ಪ್ರಾಣಾಯಾಮದಲ್ಲಿ ಉಸಿರಾಟದ ಮೂಲಕ ಹಲವಾರು ಹೃದಯ ಸಂಬಂಧಿ ಶ್ವಾಸಕೋಶ ಸಂಬಂಧಿ ಕಾಯಿಲೆಗಳ ಮೇಲೆ ಹತೋಟಿ ಮತ್ತು ಮಾನಸಿಕ ತುಮುಲಗಳನ್ನು ಕಳೆದುಕೊಳ್ಳಬಹುದು. ಪ್ರತಿದಿನ ಪ್ರಾಣಾಯಾಮದ ಅಭ್ಯಾಸದಿಂದ ಮನಸ್ಸು ಪ್ರಶಾಂತತೆ ಮತ್ತು ಸ್ಥಿತಪ್ರಜ್ಞತೆಯನ್ನು ಪಡೆದುಕೊಳ್ಳುತ್ತದೆ.
* ಐದನೆಯ ಅಂಗವಾದ ಪ್ರತ್ಯಾಹಾರವು ನಮ್ಮ ಪಂಚೇಂದ್ರಿಯಗಳ ಮೇಲೆ ಉತ್ತಮವಾದ ನಿಯಂತ್ರಣವನ್ನು ಹೊಂದಲು ಮತ್ತು ಧ್ಯಾನದ ಪೂರ್ವ ತಯಾರಿಗೆ ಸಹಾಯಕ.
* ಅಷ್ಟಾಂಗ ಯೋಗದ ಆರನೆಯ ಅಂಗವಾದ ಧಾರಣವು ಧ್ಯಾನದ ಪೂರ್ವಸ್ಥಿತಿಯಾಗಿದ್ದು ಧ್ಯಾನಕ್ಕೆ ಮುಂಚೆ ಬರುವ ಎಲ್ಲಾ ರೀತಿಯ ಯೋಚನೆಗಳನ್ನು, ಚಟುವಟಿಕೆಗಳನ್ನು ನಿಯಂತ್ರಿಸುವ ಸ್ಥಿತಿ ಇದಾಗಿರುತ್ತದೆ. ಧಾರಣ ಎಂಬುದರ ಅರ್ಥ ಕ್ಷಮತೆ ಎಂದು ಕೂಡ ಆಗಿದೆ.
* ಅಷ್ಟಾಂಗ ಯೋಗದ 7ನೇ ಅಂಗವಾದ ಧ್ಯಾನವು ತನು, ಮನಗಳನ್ನು ಏಕತ್ರದೆಡೆಗೆ ನೆಲೆಸುವಂತೆ ಮಾಡಿ ಸಂಪೂರ್ಣ ಮನಸ್ಸನ್ನು ಅಭೂತಪೂರ್ವ ಧ್ಯಾನಸ್ತ ಸ್ಥಿತಿಗೆ ಒಯ್ಯುತ್ತದೆ. ತನು ಮನಗಳ ಕ್ಲೇಶವನ್ನು ಕಳೆದು ಮನಸ್ಸನ್ನು ಶುಭ್ರ,ನಿರಾಳ ಮತ್ತು ನಿರ್ಮಲ ಸ್ಥಿತಿಗೆಳಸುತ್ತದೆ.
* ಅಷ್ಟಾಂಗ ಯೋಗದ ಎಂಟನೆಯ ಅಂಗ ಸಮಾಧಿ ಸ್ಥಿತಿ.... ಅದೊಂದು ಅದ್ಭುತವಾದ ಸಾಧನಾ ಪಥ. ಯೋಗದ ಉಳಿದೆಲ್ಲ ಅಂಗಗಳನ್ನು ಅಭ್ಯಸಿಸುತ್ತ ಮನುಷ್ಯ ಧ್ಯಾನಪೂರ್ವಕವಾಗಿ ಈ ಸ್ಥಿತಿಯಲ್ಲಿ ಉಳಿದು ಹೋಗುತ್ತಾನೆ. ಇದೊಂದು ದೈವಿಕ ಅನುಭವದ ಸ್ಥಿತಿ. ಯೋಗಾಭ್ಯಾಸದ ಸಮಯ.... ಪ್ರಾತಃಕಾಲದ ಬ್ರಾಹ್ಮಿ ಮುಹೂರ್ತ ಯೋಗಾಭ್ಯಾಸಕ್ಕೆ ಅತ್ಯಂತ ಪ್ರಶಸ್ತವಾದ ಸಮಯ. ಈ ಸಮಯವು ನಿರ್ಮಲ ಮತ್ತು ನಿಶ್ಯಬ್ದವಾಗಿದ್ದು ಯೋಗಭ್ಯಾಸ ಮಾಡಲು ಉತ್ತಮ.

ಯೋಗಭ್ಯಾಸಕ್ಕೆ ಮುನ್ನ ನಮ್ಮ ಪ್ರಾತಃಕಾಲದ ನಿತ್ಯ ವಿಧಿಗಳನ್ನು ಪೂರೈಸಿಕೊಂಡಿರಬೇಕು. ಹಗುರವಾದ, ಸಡಿಲವಾದ ಮತ್ತು ಮೆದುವಾದ ಹತ್ತಿಯ ಬಟ್ಟೆಗಳನ್ನು ಧರಿಸಿರಬೇಕು. ಯೋಗಾಭ್ಯಾಸದ ಸಮಯದಲ್ಲಿ ಮನಸ್ಸು ಸಂಪೂರ್ಣ ತನ್ಮಯತೆಯನ್ನು ಬಯಸುತ್ತದೆ. ಸ್ವಚ್ಛ, ಶುದ್ಧ ಪರಿಸರದಲ್ಲಿ ಸಮನಾದ ನೆಲದ ಮೇಲೆ ಯೋಗ ಮ್ಯಾಟ್ ಇಲ್ಲವೇ ಜಮಖಾನವನ್ನು ಹಾಸಿ ಯೋಗಾಭ್ಯಾಸವನ್ನು ಮಾಡಬೇಕು.

ಕಣ್ಣು ಮುಚ್ಚಿ, ಕರ ಮುಗಿದ ಸ್ಥಿತಿಯಲ್ಲಿಪ್ರಾರ್ಥನೆಯನ್ನು ಮಾಡುತ್ತಾ ಯೋಗಾಭ್ಯಾಸದ ಆರಂಭ ಮಾಡಬೇಕು. ನಿಧಾನವಾಗಿ ಉಸಿರಾಟದ ಕ್ರಮಬದ್ಧ ಒಳ ತೆಗೆದುಕೊಳ್ಳುವಿಕೆ ಮತ್ತು ಹೊರ ಹಾಕುವಿಕೆಯನ್ನು ಅಂದರೆ ಕ್ರಮಬದ್ಧವಾಗಿ ಉಚ್ವಾಸ ಮತ್ತು ನಿಃಶ್ವಾಸಗಳನ್ನು ಮಾಡುತ್ತಾ ಒಂದೊಂದೇ ಆಸನಗಳನ್ನು ನಿಧಾನವಾಗಿ, ಪಾಂಗಿತವಾಗಿ ಮಾಡಬೇಕು.

ಮೊದಲು ಸ್ಥೂಲ ವ್ಯಾಯಾಮಗಳನ್ನು ಮಾಡಿ ದೇಹವನ್ನು ಸಡಿಲಗೊಳಿಸಿ ನಂತರ ಸೂರ್ಯ ನಮಸ್ಕಾರ,ನಿಂತು ಮಾಡುವ, ಕುಳಿತು ಮಾಡುವ, ಮಲಗಿ ಮಾಡುವ ಎಲ್ಲಾ ಆಸನಗಳನ್ನು ಪೂರೈಸಿದ ಮೇಲೆ ಶವಾಸನ ಮಾಡಬೇಕು. ಶವಾಸನ ಸ್ಥಿತಿಯಲ್ಲಿಯೇ ಮಲಗಿ ಸೃಷ್ಟಿ ಸ್ಥಿತಿ ಮತ್ತು ಲಯಗಳ ಸಂಕೇತವಾದ ಅ,ಉ,ಮ ಕಾರಗಳನ್ನು ಮತ್ತು ಓಂಕಾರಗಳ ನಾದಾನುಸಂಧಾನ ಮಾಡುವುದು ಅತ್ಯಂತ ಅವಶ್ಯಕ. ನಂತರದ ಶವಾಸನದ ಸ್ಥಿತಿಯಲ್ಲಿ ದೇಹದ ಪ್ರತಿಯೊಂದು ಅಂಗಗಳನ್ನು ವಿಶ್ರಾಂತ ಸ್ಥಿತಿಗೆಳಸಬೇಕು . ಶವಾಸನದ ನಂತರ ನಿಧಾನವಾಗಿ ದೇಹವನ್ನು ಸಚೇತನಗೊಳಿಸಿ ಬಲಗಡೆ ಮಗ್ಗುಲಿಗೆ ಹೊರಳಿ ಎದ್ದು ಕುಳಿತು ಪದ್ಮಾಸನ ಇಲ್ಲವೇ ಸುಖಾಸನದಲ್ಲಿ ಕುಳಿತು ಪ್ರಾಣಾಯಾಮದ ಅಭ್ಯಾಸ ಮಾಡಬೇಕು. ಪ್ರಾಣಾಯಾಮದಲ್ಲಿಯೂ ಕಪಾಲಬಾತಿ, ಬಸ್ತಿಕ, ಅನುಲೋಮ-ವಿಲೋಮ ಪ್ರಾಣಾಯಾಮ ಮತ್ತು ಭ್ರಮರಿ ಪ್ರಾಣಾಯಾಮಗಳನ್ನು ಸರ್ವತ್ರ ಸಮಯದಲ್ಲಿಯೂ ಅಭ್ಯಾಸ ಮಾಡಬಹುದು, ಆದರೆ ಉಜ್ಜಾಯಿ ಪ್ರಾಣಾಯಾಮ, ಶೀತಲೀ ಮತ್ತು ಶೀತ್ಕಾರಿ ಗಳನ್ನು ವಿವಿಧ ಋತುಗಳಿಗೆ ಅನುಸಾರವಾಗಿ ಮಾತ್ರ ಅಭ್ಯಾಸ ಬೇಕು. ಅಂತಿಮವಾಗಿ ಮತ್ತೊಂದು ಬಾರಿ ಶಾಂತಿ ಮಂತ್ರದ

**ಸರ್ವೇ ಭವಂತು ಸುಖಿನಃ
ಸರ್ವೇ ಸಂತು ನಿರಾಮಯಃ
ಸರ್ವೇ ಭದ್ರಾಣೆ ಪಶ್ಯಂತು
ಮಾಕಶ್ಚಿತ್ ದುಃಖ ಭಾಗ ಭವೇತ**

ಎಂದು ಪ್ರಾರ್ಥನೆಯ ಮೂಲಕ ಯೋಗಾಭ್ಯಾಸಕ್ಕೆ ಕೊನೆ ಹಾಡಿ ಎರಡು ಕೈಗಳನ್ನು ಬಲವಾಗಿ ಉಜ್ಜಿ ಕಣ್ಣುಗಳು, ಮುಖ ಮತ್ತು ಕುತ್ತಿಗೆಯ ಭಾಗದವರೆಗೆ ಅಂಗೈಗಳಿಂದ ಸವರುತ್ತಾ ನಿಧಾನವಾಗಿ ಎರಡು ಕೈಗಳನ್ನು ಎದೆಯ ಮುಂಭಾಗದಲ್ಲಿ ಅಂಜಲಿ ಮುದ್ರೆಯಲ್ಲಿ ಹಿಡಿದು ಕಣ್ಣುಗಳನ್ನು ನಿಧಾನವಾಗಿ ತೆರೆಯುತ್ತಾ

ಕರಾ ಗ್ರೇ ವಸತೇ ಲಕ್ಷ್ಮಿ , ಕರಮಧ್ಯೇ ಸರಸ್ವತಿ ಕರ ಮೂಲೆ ಸ್ಥಿತೇ ಗೌರಿ ಪ್ರಭಾತೇ ಕರ ದರ್ಶನಂ ಶುಭಂ ಕರೋತಿ

ಎಂದು ಹೇಳುತ್ತ ಎರಡು ಕೈಗಳನ್ನು ದಿಟ್ಟಿಸಿ ನೋಡಬೇಕು. ಭಾರತೀಯ ಸಭ್ಯತೆಯಲ್ಲಿ ಇದುವರೆಗೂ ನಮ್ಮ ಯೋಗಾಭ್ಯಾಸದ ಸಮಯದಲ್ಲಿ ಭೂಮಿ ತಾಯಿಯನ್ನು ನಾವು ಮೆಟ್ಟಿರುವುದರಿಂದ ಆಕೆಯನ್ನು

**ಸಮುದ್ರ ವಸನೆ ದೇವಿ ಪರ್ವತಸ್ಥನ ಮಂಡಲೆ,
ವಿಷ್ಣು ಪತ್ನಿ ನಮಸ್ತುಭ್ಯಂ ಪಾದಸ್ಪರ್ಶಂ ಕ್ಷಮಸ್ವಮೇ**

ಎಂದು ಕ್ಷಮೆ ಯಾಚಿಸುವ ಪ್ರಾರ್ಥನೆಯನ್ನು ಮಾಡಿ ಅಭ್ಯಾಸವನ್ನು ಮುಗಿಸಬೇಕು.

ಯೋಗಾಭ್ಯಾಸ ಮಾಡುವವರು ಹಿತಭುಕ್, ಮಿತಭುಕ್ ಮತ್ತು ಋತುಭುಕ್ ಎಂಬ ಮೂರು ನಿಯಮಗಳನ್ನು ಹಾಕಿಕೊಳ್ಳಬೇಕು. ಹಿತ, ಮಿತವಾದ ಮತ್ತು ಋತು ಅನುಸಾರವಾಗಿ ಆಹಾರವನ್ನು ಸೇವಿಸುವುದು ಅಪೇಕ್ಷಣೀಯ. ಸಾತ್ವಿಕ ಆಹಾರ ಸೇವನೆಯೂ ಕೂಡ ಯೋಗ ಅಭ್ಯಾಸಗಳಿಗೆ ಉತ್ತಮ ಫಲವನ್ನು ತಂದುಕೊಡುತ್ತದೆ.

ಯೋಗದಲ್ಲಿ ಆಸನ ಮತ್ತು ಪ್ರಾಣಾಯಾಮಗಳನ್ನು ಪ್ರತಿ ದಿನ ಅಭ್ಯಾಸ ಮಾಡುವುದರಿಂದ ವ್ಯಕ್ತಿಯು ದೈಹಿಕವಾಗಿ ಸದೃಢನಾಗುತ್ತಾನೆ. ನೋವುಗಳು ಬರುವುದಿಲ್ಲವೆಂದಲ್ಲ ಆದರೆ ಆ ನೋವುಗಳನ್ನು ಸಹಿಸಿಕೊಳ್ಳುವ ಕ್ಷಮತೆಯು ಆತನಲ್ಲಿ ಹೆಚ್ಚಾ ಗುತ್ತದೆ. ಹೆಣ್ಣು ಮಕ್ಕಳು ಅತ್ಯವಶ್ಯಕವಾಗಿ ಯೋಗದ ಅಭ್ಯಾಸವನ್ನು ಮಾಡಲೇಬೇಕು. ತನ್ನ ಜೀವನದ ಹಲವಾರು ಘಟ್ಟಗಳಲ್ಲಿ ಅನೇಕ ಮನೋದೈಹಿಕ ಸ್ಥಿತ್ಯಂತರಗಳನ್ನು ಕಾಣುವ ಹೆಣ್ಣು ಜೀವ ತನ್ನ ಋತು ಸ್ರಾವದ ಸಮಯದಲ್ಲಿ ಉಂಟಾಗುವ ಕಿಬ್ಬೊಟ್ಟೆಯ ನೋವಿಗೆ ಕೈಕಾಲುಗಳ ಸೆಡೆತಕ್ಕೆ, ಸೊಂಟದ ನೋವಿಗೆ ಪರಿಹಾರವನ್ನು ಯೋಗಾಭ್ಯಾಸದ ಮೂಲಕ ಕಂಡುಕೊಳ್ಳಬಹುದು. ಯೋಗಾಭ್ಯಾಸವನ್ನು ಮಾಡುವುದರ ಮೂಲಕ ದೈಹಿಕ ಕ್ಷಮತೆಯನ್ನು ಹೆಚ್ಚಿಸಿಕೊಂಡು ನೋವುಗಳನ್ನು ನಿವಾರಿಸಿಕೊಳ್ಳುವ ಅವಶ್ಯಕತೆ ದೈಹಿಕ ಶ್ರಮ ಪಡದ ಇಂದಿನ ಹೆಣ್ಣು ಮಕ್ಕಳಿಗೆ ಹಿಂದೆಂದಿಗಿಂತಲೂ ಹೆಚ್ಚಾಗಿದೆ.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,